Reg NO(PRGI NO): KNKAN/25/A0970 • ಸಂಪುಟ 1 • ಸಂಚಿಕೆ 76 email: tatvanishtadaily@gmail.com 9481559555 08384 452643 3₹ ಪುಟ 6 ಸೋಮವಾರ | ನವೆಂಬರ್ | 17 | 2025


# ತತ್ವನಿಷ್ಠ

ನಾಡಿನ ನಿಖರ ನುಡಿ


**ದಿನದರ್ಶನ**

ಸತತಮಾರ್ಗಣೆ; ಸಿದ್ಧಿಯಿಂತಿರಲಿ; ಮಾರ್ಗಣೆಯೆ |
ಗತಿ ಮನುಜಲೋಕಕ್ಕೆ ; ಜಗದ ಜೀವವದು ||
ಕೃತಕಾಮರೆಲ್ಲರಾದೊಡೆ ಕೃತ್ಯವುಳಿಯದೊಡೆ |
ಕಥೆ ಮುಗಿವುದಲ ಜಗಕೆ? – ಮಂಕುತಿಮ್ಮ ||

**ವಿಷಯ ವಿಶೇಷ**

**ರಸ್ತೆ ನಿರ್ಮಾಣ ಬಸ್ ಬಿಡಲು ಪಟ್ಟು**

ಜೊಯಿಡಾ ತಾಲೂಕಿನ ಹಲವು ಹಳ್ಳಿಗಳಿಗೆ ಸರ್ವಋತು ರಸ್ತೆ ಸಂಪರ್ಕ ಇಲ್ಲದಿರುವ ಸಮಸ್ಯೆ ಹಲವು ವರ್ಷಗಳಿಂದ ಮುಂದುವರೆದಿದ್ದು, ಇದೀಗ ಗ್ರಾಮಸ್ಥರೆ ರಸ್ತೆ ನಿರ್ಮಿಸಿಕೊಳ್ಳುತ್ತಿದ್ದಾರೆ. 2

## ಬೀದಿನಾಯಿ ದಾಳಿ ಪರಿಹಾರಕ್ಕೆ ಸಲ್ಲಿಕೆಯಾಗಿಲ್ಲ ಒಂದೂ ಅರ್ಜಿ!

### 5 ಸಾವಿರ ರೂ. ದಿಂದ 5 ಲಕ್ಷ ರೂಪಾಯಿವರೆಗೆ ಪರಿಹಾರ | ಸಂತ್ರಸ್ತರಿಗಿಲ್ಲ ಸೂಕ್ತ ಮಾಹಿತಿ

● **ತತ್ವನಿಷ್ಠ, ಶಿರಸಿ:** ಬೀದಿ ನಾಯಿ ದಾಳಿಯಿಂದ ಸಂತ್ರಸ್ತರಾದವರಿಗೆ ಸರ್ಕಾರ 5 ಸಾವಿರ ರೂಪಾಯಿಯಿಂದ 5 ಲಕ್ಷ ರೂಪಾಯಿವರೆಗೆ ಪರಿಹಾರ ವಿತರಿಸುತ್ತದೆ. ಆದರೆ, ಬೀದಿ ನಾಯಿ ದಾಳಿಗೆ ಒಳಗಾದವರು ಮಾತ್ರ ಮಾಹಿತಿಯ ಕೊರತೆಯಿಂದ ಹಾಗೂ ಪರಿಹಾರಕ್ಕಾಗಿ ಸ್ಥಳೀಯಾಡಳಿತದ ಕಚೇರಿ ಸುತ್ತಬೇಕಾದ ಭಯದಿಂದ ಈ ಪರಿಹಾರಕ್ಕಾಗಿ ಅರ್ಜಿಯನ್ನೇ ಸಲ್ಲಿಸುತ್ತಿಲ್ಲ!

ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿಯೂ ಬೀದಿ ನಾಯಿ ಹಾವಳಿ ಹೆಚ್ಚಾಗಿದೆ. ಬೀದಿ ನಾಯಿ ನಿಯಂತ್ರಣಕ್ಕೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ನೆಪದಲ್ಲಿ ಆಡಳಿತದಲ್ಲಿರುವವರು ಲಕ್ಷಾಂತರ ರೂ ವೆಚ್ಚ ಮಾಡುತ್ತಿದ್ದಾರೆ.



ಅದಾಗಿಯೂ ವರ್ಷದಿಂದ ವರ್ಷಕ್ಕೆ ಬೀಡಾಡಿ ನಾಯಿಗಳ ಸಂಖ್ಯೆ ಹೆಚ್ಚಾಗುತ್ತಿದೆಯೇ ವಿನಾ ಸಮಸ್ಯೆ ಮಾತ್ರ ತಪ್ಪುತ್ತಿಲ್ಲ.

ಅದರಲ್ಲಿಯೂ ಅನೇಕ ಬಗೆಯ ಆಕ್ರಮಣಕಾರಿ ಬೀದಿ ನಾಯಿಗಳು ಜಿಲ್ಲೆಯಲ್ಲಿವೆ. ಚಿಕ್ಕ ಮಕ್ಕಳನ್ನು ಗುರಿಯಾಗಿರಿಸಿಕೊಂಡು ದಾಳಿ ನಡೆಸುವ ನಾಯಿಗಳ ವಿರುದ್ಧ ಜನಸಾಮಾನ್ಯರು ಪ್ರತಿಭಟಿಸಿದರೂ ನಿಯಂತ್ರಣಕ್ಕೆ ಕಠಿಣ ಕ್ರಮವಾಗಿಲ್ಲ. ಈ ಎಲ್ಲದರ ನಡುವೆ ಬೀದಿ ನಾಯಿ ಆಕ್ರಮಣಕ್ಕೆ ಒಳಗಾದವರಿಗೆ ಸರ್ಕಾರ ಸೂಕ್ತ ಪರಿಹಾರ ಒದಗಿಸುವಂತೆ ಸ್ಥಳೀಯ ಆಡಳಿತಕ್ಕೆ ಸೂಚನೆ ನೀಡಿದೆ. ಆದರೆ, ಆ ಆದೇಶ ಪಾಲನೆಯೂ ಆಗುತ್ತಿಲ್ಲ. ಆಕ್ರಮಣಕ್ಕೆ ಒಳಗಾದವರು ಪರಿಹಾರಕ್ಕಾಗಿ ಅರ್ಜಿಯನ್ನೂ ಸಲ್ಲಿಸುತ್ತಿಲ್ಲ.

ಭಾರತ ಸರ್ಕಾರದ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಮಂತ್ರಾಲಯವೂ 2023ರಲ್ಲಿ ಪ್ರಾಣಿ ಸಂತಾನ ನಿಯಂತ್ರಣ ನಿಯಮವನ್ನು ಜಾರಿಗೆ ತಂದಿದೆ. ರಾಜ್ಯಮಟ್ಟದಲ್ಲಿಯೂ ಪ್ರಾಣಿ ಸಂತಾನ ನಿಯಂತ್ರಣ ಮೇಲ್ವಿಚಾರಣೆ ಹಾಗೂ ಅನುಷ್ಠಾನ ಸಮಿತಿ ಕಾರ್ಯ ನಿರ್ವಹಿಸುತ್ತಿದೆ. ಧಾರವಾಡ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಕೆಯಾದ ರಿಟ್ ಪಿಟಿಶನ್ ಅನ್ವಯ ಬೀದಿ ನಾಯಿಗಳ ಹಾವಳಿಯಿಂದ ಸಂತ್ರಸ್ತರಾದವರಿಗೆ ಸರ್ಕಾರ ಪರಿಹಾರ ವಿತರಿಸಲು ಆಸಕ್ತಿವಹಿಸಿದೆ. ಅದರ ಪ್ರಕಾರ ನಾಯಿ ದಾಳಿಗೆ ಒಳಗಾದವರ ಚಿಕಿತ್ಸಾ ವೆಚ್ಚ ಭರಿಸುವುದು ಸ್ಥಳೀಯ ಆಡಳಿತದ ಹೊಣೆಯಾಗಿದೆ. ☛ ಪುಟ 5

## ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥ ಸಂಚಲನ

● **ತತ್ವನಿಷ್ಠ, ಬೆಂಗಳೂರು:** ರಾಷ್ಟ್ರಮಟ್ಟದಲ್ಲಿ ಭಾರೀ ಸುದ್ದಿಯಾಗಿದ್ದ ಕಲಬುರಗಿ ಜಿಲ್ಲೆಯ ಚಿತ್ತಾಪುರ ಪಟ್ಟಣದಲ್ಲಿ ಪೊಲೀಸರ ಸರ್ಪಗಾವಲಿನ ನಡುವೆ ಆರ್‌ಎಸ್‌ಎಸ್ ಪಥಸಂಚಲನ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದೆ ನ್ಯಾಯಾಲಯದ ನಿರ್ದೇಶನದಂತೆ ಶಾಂತಿಯುತವಾಗಿ ನಡೆಯಿತು. ಕಳೆದ ಒಂದು ತಿಂಗಳಿನಿಂದ ಆರ್‌ಎಸ್‌ಎಸ್ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ನಡುವಿನ ಸಮರಕ್ಕೆ ಕಾರಣವಾಗಿದ್ದ ಆರ್‌ಎಸ್‌ಎಸ್ ಪಥಸಂಚಲನ ಹೈಕೋರ್ಟ್ ವಿಧಿಸಿದ್ದ ಕೆಲವು ಷರತ್ತುಗಳಡಿ ಸುಗಮವಾಗಿ ಸಾಗಿತು. ☛ ಪುಟ 5

## ಪಥ ಸಂಚಲನಕ್ಕೆ ನನ್ನ ವಿರೋಧ ಇಲ್ಲ

● **ತತ್ವನಿಷ್ಠ, ಕಲಬುರಗಿ:** ನಾನು ಪಥಸಂಚಲನವನ್ನು ಎಂದಿಗೂ ವಿರೋಧಿಸಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ರ್‍ಯಾಲಿ ಮುಂತಾದ ಖಾಸಗಿ ಚಟುವಟಿಕೆ ನಡೆಸಲು ಅನುಮತಿ ಪಡೆಯಬೇಕು ಎಂದಷ್ಟೇ ಹೇಳಿದ್ದೆ ಎಂದು ಶಾಸಕ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.. ಅವರ ತವರು ಕ್ಷೇತ್ರ ಕಲಬುರಗಿ ಜಿಲ್ಲೆಯ ಚಿತ್ತಾಪುರ ವಿಧಾನಸಭಾ ಕ್ಷೇತ್ರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಪಥಸಂಚಲನ ನಡೆಸಿದ್ದು, ಈ ಬಗ್ಗೆ ಮಾತನಾಡಿದರು. ☛ ಪುಟ 5

## ಕುಂಟುತ್ತ ಸಾಗಿದೆ ಕಾಮಗಾರಿ

### 4 ವರ್ಷ ಕಳೆದರೂ ಶಿರಸಿ - ಹಾವೇರಿ ರಸ್ತೆ ಪ್ರಗತಿಯಿಲ್ಲ | ರಸ್ತೆ ಬದಿ ಬೃಹತ್ ಕಂದಕ

■ **ಮಂಜುನಾಥ ಈರಗೊಪ್ಪ**

● **ತತ್ವನಿಷ್ಠ, ಶಿರಸಿ:** ಶಿರಸಿ-ಹಾವೇರಿವರೆಗೆ ನಡೆಯುತ್ತಿರುವ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಗುತ್ತಿಗೆ ಕಂಪೆನಿಯ ವಿಳಂಬ ಹಾಗೂ ಅವೈಜ್ಞಾನಿಕ ನೀತಿಯಿಂದ ವಾಹನ ಸವಾರರು ದಿನನಿತ್ಯ ಪರದಾಡುವಂತಾಗಿದೆ. ಕಾಮಗಾರಿಗೆ ವೇಗ ನೀಡಬೇಕಾದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ನಿರ್ಲಕ್ಷ್ಯದಿಂದ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುವಂತಾಗಿದೆ.

ಕೇಂದ್ರ ಸರ್ಕಾರದ ಸಾಗರಮಾಲಾ ಯೋಜನೆಯಲ್ಲಿ ಶಿರಸಿ-ಹಾವೇರಿ ರಸ್ತೆಯು ಸುಮಾರು 31.16 ಕಿಮೀ ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆಗೊಂಡು, ಅರಣ್ಯ ಇಲಾಖೆಯ ಅನುಮತಿ ಸೇರಿದಂತೆ ಇನ್ನಿತರ ಕಾರಣಗಳಿಂದ ಕಳೆದ ಐದಾರು ವರ್ಷಗಳಿಂದ ಕಾಮಗಾರಿ ನೆನೆಗುದಿಗೆ ಬಿದ್ದಿತ್ತು. ಹಸಿರು ಪೀಠದಿಂದ ಅನುಮತಿ ದೊರೆತಿದೆ. ☛ ಪುಟ 5





**ಕೊಟ್ಯಂತರ ರೂ. ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವನ್ನು ಗುತ್ತಿಗೆ ಪಡೆದ ಕಂಪೆನಿಯು ಕಳೆದ ಒಂದೆರಡು ವಾರದಲ್ಲಿ ಕಾಮಗಾರಿ ಆರಂಭಿಸಿದರೂ, ಒಂದೆರಡು ಯಂತ್ರಗಳಲ್ಲಿ ರಸ್ತೆ ಅಗೆದು ಅರ್ಧಂಬರ್ಧ ಕೆಲಸ ಮಾಡಿದ್ದಾರೆ. ಶಿರಸಿ-ಹಾವೇರಿ-ಶಿರಸಿ ಹುಬ್ಬಳ್ಳಿ ಸಂಪರ್ಕಿಸುವ ಪ್ರಮುಖ ರಸ್ತೆಯಾದ ಗೌಡಳ್ಳಿ, ಇಸಳೂರು, ಸಣ್ಣಕೇರಿ, ದೊಡ್ನೂರು ಭಾಗದಲ್ಲಿ ರಸ್ತೆ ಪಕ್ಕದಲ್ಲಿ ಬೃಹತ್ ಕಂದಕ ತೋಡಿರುವುದು ರಾತ್ರಿ ವೇಳೆ ಕಾಣಿಸುವುದಿಲ್ಲ. ಮುನ್ನೆಚ್ಚರಿಕಾ ಸೂಚನಾ ಫಲಕವನ್ನೂ ಅಳವಡಿಸಿಲ್ಲ. ಒಟ್ಟಾರೆಯಾಗಿ ನಿರ್ಲಕ್ಷ್ಯದಿಂದ ಕಾಮಗಾರಿ ನಡೆಯುತ್ತಿದೆ. ಇದನ್ನು ಗಮನಿಸಬೇಕಾದ ಎನ್‌ಎಚ್‌ಎಐ ಅಧಿಕಾರಿಗಳು ತಮಗೆ ಸಂಬಂಧವೇ ಇಲ್ಲ ಎಂಬಂತೆ ವರ್ತನೆ ಮಾಡುತ್ತಿರುವುದರಿಂದ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.**

### ರಾಜ್ಯ ಸಚಿವ ಸಂಪುಟ ಪುನರ್ ರಚನೆಗೆ ಸಮ್ಮತಿ

## ದೆಹಲಿಯತ್ತ ಶಾಸಕ, ಸಚಿವರ ದಂಡು

**ಸದ್ಯಕ್ಕಿಲ್ಲ ನಾಯಕತ್ವ ಬದಲಾವಣೆ | ಕೆಲವರಿಗೆ ಸ್ಥಾನ ಕಳೆದುಕೊಳ್ಳುವ ಭೀತಿ**

● **ತತ್ವನಿಷ್ಠ, ಬೆಂಗಳೂರು:** ಸಚಿವ ಸಂಪುಟ ಪುನರ್ ರಚನೆಗೆ ಕಾಂಗ್ರೆಸ್ ಹೈಕಮಾಂಡ್ ಹಸಿರು ನಿಶಾನೆ ತೋರಿಸಿದ್ದು, ಅವಕಾಶ ಗಿಟ್ಟಿಸಿಕೊಳ್ಳಲು ಶಾಸಕರು ದೆಹಲಿ ಯಾತ್ರೆ ಆರಂಭಿಸಿದ್ದಾರೆ. ಹಾಲಿ ಸಚಿವರಿಗೆ ಹುದ್ದೆ ಕಳೆದುಕೊಳ್ಳುವ ಆತಂಕ ಹೆಚ್ಚಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಿದ್ದು, ಅವರು ಸಂಪುಟ ಪುನರ್ ರಚನೆಗೆ ಸಮ್ಮತಿ ಸೂಚಿಸಿದ್ದಾರೆ ಎನ್ನಲಾಗಿದ್ದು, ಯಾರನ್ನು ಕೈಬಿಡಬೇಕು? ಯಾರನ್ನು ಸೇರಿಸಿಕೊಳ್ಳಬೇಕು ಎಂಬ ಚರ್ಚೆಗಳು ಆರಂಭವಾಗಿವೆ.

ಶಾಸಕರಾದ ಪಿ.ಎಂ. ಅಶೋಕ್. ಎ.ಎಸ್. ಪೊನ್ನಣ್ಣ, ಬಸವರಾಜ ರಾಯರೆಡ್ಡಿ, ಅಪ್ಪಾಜಿನಾಡಗೌಡ ಮತ್ತಿತರರು ಮುಖ್ಯಮಂತ್ರಿ ಅವರ ಜೊತೆ ದೆಹಲಿಯಲ್ಲಿ ಬೀಡುಬಿಟ್ಟಿದ್ದು, ಸಚಿವ ಸ್ಥಾನ ಗಿಟ್ಟಿಸಲು ಲಾಬಿ ನಡೆಸುತ್ತಿದ್ದಾರೆ. ಜೇವರ್ಗಿ ಶಾಸಕ ಅಜಯ್‌ಸಿಂಗ್, ದಿಢೀರ್ ದೆಹಲಿಗೆ ತೆರಳಿದ್ದು ವರಿಷ್ಠರನ್ನು ಮನವೊಲಿಸಿ ಅವಕಾಶ ಗಿಟ್ಟಿಸುವ ಪ್ರಯತ್ನ ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಸಚಿವ ಸಂಪುಟ ಪುನಾ ರಚನೆಯಲ್ಲಿ ಬಹಳಷ್ಟು ಮಂದಿ ಸಚಿವರನ್ನು ಕೈ ಬಿಡುವ ಸಾಧ್ಯತೆಯೂ ಇದೆ. ಕೆ.ಎಚ್. ಮುನಿಯಪ್ಪ, ಎಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ಶರಣಬಸಪ್ಪ ದರ್ಶನಪುರ್, ಶಿವಾನಂದ ಪಾಟೀಲ್, ಆರ್.ಬಿ. ತಿಮಾಪುರ್, ಡಾ. ಶರಣಪ್ರಕಾಶ್ ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್, ರಹೀಂಖಾನ್, ಡಿ. ಸುಧಾಕರ್ ಅವರು ಅವಕಾಶ ಕಳೆದುಕೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ. ☛ ಪುಟ 5

## ಇಂದಿರಾ ಕ್ಯಾಂಟೀನ್ ನಿರ್ವಹಣೆ ವ್ಯತ್ಯಯ: ಶಾಸಕ ಭೀಮಣ್ಣ ಗರಂ

### ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದ ಶಾಸಕ | ಸೂಕ್ತ ವ್ಯವಸ್ಥೆಯಾಗುವವರೆಗೆ ತಾತ್ಕಾಲಿಕ ಬಂದ್

● **ತತ್ವನಿಷ್ಠ, ಶಿರಸಿ:** ನಗರದ ಐದು ರಸ್ತೆ ಸಮೀಪದ ರಾಯಪ್ಪ ಹುಲೇಕಲ್ ಶಾಲಾ ಆವಾರದಲ್ಲಿ ಕಳೆದ ಮೂರು ತಿಂಗಳ ಹಿಂದೆ ಆರಂಭವಾದ ಇಂದಿರಾ ಕ್ಯಾಂಟೀನ್‌ಗೆ ಭಾನುವಾರ ಬೆಳಿಗ್ಗೆ ಶಾಸಕ ಭೀಮಣ್ಣ ನಾಯ್ಕ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

ಅಡುಗೆ ಕೋಣೆ, ಆಹಾರ ತಯಾರಿಕೆ, ಅಡುಗೆ ಸಾಮಗ್ರಿಗಳ ದಾಸ್ತಾನು ಪ್ರಮಾಣ ಎಲ್ಲವನ್ನೂ ಪರಿಶೀಲಿಸಿದರು. ಕ್ಯಾಂಟಿನ್‌ನಲ್ಲಿ ಗ್ರಾಹಕರಿಗೆ ನಿಗದಿತವಾಗಿ ನೀಡಬೇಕಾದ ಉಪಹಾರಗಳನ್ನು ನೀಡುತ್ತಿಲ್ಲ ಎಂಬ ದೂರುಗಳು ಬಂದಿವೆ. ಹೀಗಾಗಿಯೇ ಪರಿಶೀಲನೆಗೆ ಬಂದಿದ್ದೇನೆ ಎಂದ ಶಾಸಕರು, ಇಡ್ಲಿಯನ್ನು ತಯಾರಿಸದೇ ಎಷ್ಟು ದಿನ ಆಯಿತು ಎಂದು ಕ್ಯಾಂಟೀನ್‌ನಲ್ಲಿನ ಸಿಬ್ಬಂದಿಯನ್ನು ಪ್ರಶ್ನಿಸಿದರು. ಕಳೆದ ವಾರದಿಂದ ತಯಾರಿಸಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಈ ವೇಳೆ ತಹಸೀಲ್ದಾರ ಪಟ್ಟರಾಜ ಗೌಡ ಸ್ಥಳಕ್ಕೆ ಆಗಮಿಸಿದರು. ನಗರಸಭೆ ಪರಿಸರ ಅಭಿಯಂತರ ಶಿವರಾಜ ಅವರನ್ನು ಸ್ಥಳಕ್ಕೆ ಕರೆಯಿಸಿದ ಶಾಸಕರು, ಸರ್ಕಾರದ ಯೋಜನೆ ಹೀಗಾದರೆ ಹೇಗೆ? ಇದನ್ನು ನಿರ್ವಹಿಸುವವರು ಯಾರು? ಅಡುಗೆ ಗುಣಮಟ್ಟ, ತಯಾರಿಕೆ, ಸ್ವಚ್ಛತೆಯ ಬಗ್ಗೆ ಪರಿಶೀಲನೆ ಮಾಡುವವರು ಯಾರು ಎಂದು ತರಾಟೆಗೆ ತೆಗೆದುಕೊಂಡರು.

ನಾವು ನಿತ್ಯ ಪರಿಶೀಲನೆ ಮಾಡುತ್ತಿದ್ದೇವೆ ಎಂದು ಪರಿಸರ ಅಭಿಯಂತರರು ಸಮಜಾಯಿಶಿ ನೀಡುವ ಪ್ರಯತ್ನ ಮಾಡಿದರು. ಆದರೆ ಇದಕ್ಕೆ ಇನ್ನಷ್ಟು ಗರಂ ಆದ ಶಾಸಕ ಭೀಮಣ್ಣ, ಹಾಗಾದರೆ ನಿತ್ಯ ಯಾವ್ಯಾವ ಆಹಾರ ಕೊಡಬೇಕು? ಅದನ್ನೆಲ್ಲ ಕೊಡ್ತಾ ಇದ್ದಾರಾ ? ಅಡುಗೆ ಸಿಬ್ಬಂದಿ ಪ್ರಶ್ನಿಸಿದರೆ ಇಡ್ಲಿ ನೀಡದೇ ವಾರ ಆಯ್ತು ಎನ್ನುತ್ತಿದ್ದಾರೆ ? ಹೀಗಾದರೆ ಹೇಗೆ ಎಂದು ತರಾಟೆಗೆ ತೆಗೆದುಕೊಂಡರು. ಇದೇ ವೇಳೆ ಅಲ್ಲಿಗೆ ಬಂದ ಗ್ರಾಹಕರು ಬೆಳಗ್ಗೆ, ಮಧ್ಯಾಹ್ನ, ಸಂಜೆ ಎಲ್ಲ ಸಮಯದಲ್ಲೂ ಒಂದೆ ಆಹಾರ ನೀಡಲಾಗುತ್ತಿದೆ ಎಂದು ದೂರಿದರು.

ಇದೇ ವೇಳೆ ಟೆಂಡರ್‌ದಾರರಿಗೂ ಪೋನಾಯಿಸಿದ ಶಾಸಕರು, ಶಿರಸಿ ಹಾಗೂ ಸಿದ್ದಾಪುರ ಎರಡು ಕಡೆ ಇಂದಿರಾ ಕ್ಯಾಂಟೀನ್ ಸರಿಯಾಗಿ ನಿರ್ವಹಿಸದೇ ಸಮಸ್ಯೆ ಮಾಡುತ್ತಿದ್ದೀರಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.


ನಗರಸಭೆ ಮಾಜಿ ಅಧ್ಯಕ್ಷ ಪ್ರದೀಪ ಶೆಟ್ಟಿ, ಪ್ರಮುಖರಾದ ಮಧುಕರ ಬಿಲ್ಲವ, ಲುಕ್ಕು ನರೋನ್ಹಾ ಮತ್ತಿತರರು ಇದ್ದರು.



**ಇಂದಿರಾ ಕ್ಯಾಂಟೀನ್‌ನಲ್ಲಿ ನಿಯಮದಂತೆ ಆಹಾರ ನೀಡಬೇಕು. ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಇದರ ನಿರ್ವಹಣೆಯನ್ನು ಯಾರ್ಯಾರು ಮಾಡಬೇಕು ಎಂಬುದರ ಬಗ್ಗೆ ತಹಸೀಲ್ದಾರ ನೇತೃತ್ವದಲ್ಲಿ ಸಭೆ ನಡೆಸಬೇಕು. ಸರಿಯಾದ ವ್ಯವಸ್ಥೆ ಆಗುತ್ತದೆ ಎಂದಾದ ಮೇಲಷ್ಟೇ ಕ್ಯಾಂಟಿನ್ ಪುನಾ ತೆರೆಯಬೇಕು. ಅಲ್ಲಿಯವರೆಗೆ ಬಂದ್ ಮಾಡಿ ಎಂದು ಸೂಚನೆ ನೀಡಿದರು. ನಂತರ ಅಧಿಕಾರಿಗಳು ತಾಂತ್ರಿಕ ಕಾರಣದಿಂದ ಕೆಲ ದಿನ ಕ್ಯಾಂಟೀನ್ ಬಂದ್ ಮಾಡಲಾಗಿದೆ ಎಂಬ ನಾಮಫಲಕ ಅಂಟಿಸಿ ಬಂದ್ ಮಾಡಿಸಿದರು.**

## 5800 ಬಸ್ ಖರೀದಿ: ಸಚಿವ

● **ತತ್ವನಿಷ್ಠ, ಮಧುಗಿರಿ:** ರಾಜ್ಯದ ಜನತೆಗೆ ಸಾರಿಗೆ ವ್ಯವಸ್ಥೆಗೆ ಅನುಕೂಲವಾಗುವ ಉದ್ದೇಶದಿಂದ ಕಳೆದ ಎರಡೂವರೆ ವರ್ಷದಲ್ಲಿ ಸರ್ಕಾರದ ವತಿಯಿಂದ 5800 ಬಸ್ ಖರೀದಿಸಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.




2016ರ ನಂತರ ಇದೇ ಮೊದಲ ಬಾರಿಗೆ 2023ರಲ್ಲಿ 9 ಸಾವಿರ ಜನರಿಗೆ ಇಲಾಖೆಯಲ್ಲಿ ಕೆಲಸ ನೀಡಲಾಗಿದ್ದು, 1000 ಜನರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ನೀಡಲಾಗಿದೆ. ಇನ್ನೂ ಒಂದು ಸಾವಿರ ಹುದ್ದೆ ಬಾಕಿ ಇದ್ದು, ಮುಖ್ಯಮತ್ರಿ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುವುದು. 70 ಪಲ್ಲಕ್ಕಿ ಬಸ್ ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಶೀಘ್ರದಲ್ಲೇ ಚಾಲನೆ ನೀಡಲಾಗುವುದು ಎಂದು ಹೇಳಿದರು.

ರಾಜ್ಯಾದ್ಯಂತ ಒಟ್ಟೂ 45 ಟ್ರ್ಯಾಕ್ ನಿರ್ಮಿಸುತ್ತಿದ್ದು, ಈಗಾಗಲೇ 7 ಟ್ರ್ಯಾಕ್ ಚಾಲನೆಯಲ್ಲಿವೆ. 28 ಟ್ರ್ಯಾಕ್‌ಗಳು ಬಾಕಿ ಇವೆ. ಈ ವರ್ಷ 10 ಟ್ರ್ಯಾಕ್‌ಗಳು ಟೆಂಡರ್ ಆಗಿದ್ದು, ಅದರಲ್ಲಿ ಮಧುಗಿರಿಯೂ ಒಂದು ಎಂದರು.







## ಪಂಚಾಂಗ

ಸಂವತ್ಸರ: ವಿಶ್ವಾವಸು. ಮಾಸ: ಕಾರ್ತಿಕ.
ಪಕ್ಷ: ಕೃಷ್ಣಪಕ್ಷ. ತಿಥಿ: ತ್ರಯೋದಶೀ. ನಕ್ಷತ್ರ: ಚೈತ್ರ.
ಸೂರ್ಯೋದಯ: ಬೆಳಿಗ್ಗೆ-06:45. ಸೂರ್ಯಾಸ್ತ: ಸಂಜೆ-05:27.
ರಾಹು ಕಾಲ: ಬೆಳಿಗ್ಗೆ-08:05ರಿಂದ ಬೆಳಿಗ್ಗೆ-09:26ರ ವರೆಗೆ
ಗುಳಿಕ ಕಾಲ: ಮಧ್ಯಾಹ್ನ-01:26ರಿಂದ ಮಧ್ಯಾಹ್ನ-02:46ರ ವರೆಗೆ



**ಶ್ರೀ ವಿಠ್ಠಲ ಭಟ್ಟ ಕೆಕ್ಕಾರು**
ಖ್ಯಾತ ಜ್ಯೋತಿಷಿಗಳು, ಆಧ್ಯಾತ್ಮಿಕ ಚಿಂತಕರು
**9113295125**

## ರಾಶಿ ಫಲ

- **ಮೇಷ:** ಹಣಕಾಸು ಲಾಭ. ಹೂಡಿಕೆ ಫಲಕಾರಿ. ಕೆಲಸದಲ್ಲಿ ಸೃಜನಶೀಲತೆ ಅನ್ವಯಿಸಿ.
- **ವೃಷಭ:** ಕುಟುಂಬದಲ್ಲಿ ಉಲ್ಲಾಸ. ಮನೆಯ ಕಾರ್ಯ ಯಶಸ್ವಿ.
- **ಮಿಥುನ:** ಸ್ನೇಹಿತರ ಬೆಂಬಲ. ಹಳೆಯ ಸಮಸ್ಯೆ ಪರಿಹಾರ.
- **ಕಟಕ:** ಆರೋಗ್ಯ ಉತ್ತಮ. ಬೆಳಗಿನ ವ್ಯಾಯಾಮ ಪ್ರಯೋಜನಕಾರಿ.
- **ಸಿಂಹ:** ವೃತ್ತಿಯಲ್ಲಿ ಸಾಧನೆ. ಮೇಲಾಧಿಕಾರಿಗಳ ಶ್ಲಾಘನೆ.
- **ಕನ್ಯಾ:** ಮಾತುಕತೆಯಲ್ಲಿ ಎಚ್ಚರಿಕೆ ಕೋಪದಿಂದ ದೂರವಿರಿ.
- **ತುಲಾ:** ಸಾಮಾಜಿಕ ಕಾರ್ಯದಲ್ಲಿ ಗೌರವ. ಹೊಸ ಪರಿಚಯ ಲಾಭಕರ.
- **ವೃಶ್ಚಿಕ:** ಆರ್ಥಿಕ ಯೋಜನೆ ಯಶಸ್ವಿ. ಉಳಿತಾಯ ಹೆಚ್ಚಾಗುತ್ತದೆ.
- **ಧನು:** ಧಾರ್ಮಿಕ ಕಾರ್ಯದಲ್ಲಿ ತೊಡಗಿರಿ. ಮನಸ್ಸಿಗೆ ನೆಮ್ಮದಿ.
- **ಮಕರ:** ಕೆಲಸದಲ್ಲಿ ಚುರುಕುತನ. ಗುರಿ ಸಾಧನೆ ಸಾಧ್ಯ.
- **ಕುಂಭ:** ಕಲ್ಪನೆ ಯಶಸ್ವಿ. ಹೊಸ ಯೋಜನೆ ಮೆಚ್ಚುಗೆ ಪಡೆಯುತ್ತದೆ.
- **ಮೀನ:** ಆಧ್ಯಾತ್ಮಿಕ ಚಟುವಟಿಕೆ ಮನಸ್ಸಿಗೆ ಶಾಂತಿ ತರಬಹುದು.

# ಗ್ರಾಮಸ್ಥರಿಂದಲೇ ರಸ್ತೆ ನಿರ್ಮಾಣ: ಗಂಗೋಡಾಕ್ಕೆ ಬಸ್ ಬಿಡಲು ಪಟ್ಟು

● **ತತ್ವನಿಷ್ಠ, ಜೋಯಿಡಾ:** ತಾಲೂಕಿನ ಹಲವು ಹಳ್ಳಿಗಳಿಗೆ ಸರ್ವ ಋತು ರಸ್ತೆ ಸಂಪರ್ಕ ಇಲ್ಲದಿರುವ ಸಮಸ್ಯೆ ಜೋಯಿಡಾದಲ್ಲಿ ವರ್ಷಗಳಿಂದ ಮುಂದುವರೆದಿದೆ.

ಪ್ರತಿ ಮಳೆಗಾಲದಲ್ಲಿ ರಸ್ತೆಗಳು ಹಾಳಾಗಿ, ಬೇಸಿಗೆಯಲ್ಲಿ ಗ್ರಾಮಸ್ಥರೇ ದುರಸ್ತಿ ಮಾಡಿಕೊಂಡು ಬಸ್ ಸಂಚಾರಕ್ಕೆ ಬೇಡಿಕೆ ಇಡುವುದು ಮತ್ತು ಪ್ರತಿಭಟಿಸುವುದು ಈ ಭಾಗದ ಹಳ್ಳಿಗರ ಕತೆಯಾಗಿದೆ. ಇದೇ ಪರಿಸ್ಥಿತಿ ಗಂಗೋಡಾ ಗ್ರಾಮದ ಜನರಿಗೂ ಎದುರಾಗಿದ್ದು, ಗ್ರಾಮಕ್ಕೆ ಬಸ್ ಸಂಪರ್ಕ ಕಲ್ಪಿಸಲು ಕಳೆದ ಏಳು ವರ್ಷಗಳಿಂದಲೂ ಗ್ರಾಮಸ್ಥರೇ ರಸ್ತೆಯನ್ನು ನಿರ್ಮಿಸಿಕೊಳ್ಳುವ ಸಾಹಸ ಮಾಡುತ್ತಿದ್ದಾರೆ.



ಗಂಗೋಡಾ ಗ್ರಾಮದ ರಸ್ತೆಯು ಸಂಪೂರ್ಣವಾಗಿ ಹಾಳಾಗಿದ್ದು, ಹೊಸ ರಸ್ತೆ ನಿರ್ಮಿಸಿಕೊಡಿ ಎಂದು ಆಡಳಿತವನ್ನು ನಿರಂತರವಾಗಿ ಕೋರಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದರಿಂದ ಬೇಸತ್ತಿರುವ ಗ್ರಾಮಸ್ಥರು, ಸರ್ಕಾರಿ ಬಸ್ ಸಂಚಾರಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಈ ವರ್ಷವೂ ಸುಮಾರು 7ಕಿ.ಮೀ. ರಸ್ತೆಯನ್ನು ತಮ್ಮ ಸ್ವಂತ ಶ್ರಮದಿಂದಲೇ ನಿರ್ಮಿಸಿದ್ದಾರೆ.

ಗ್ರಾಪಂ ಅಧ್ಯಕ್ಷ ಪ್ರವೀಣ್ ದೇಸಾಯಿ ಮತ್ತು ಮರಾಠಾ ಸಮಾಜದ ಅಧ್ಯಕ್ಷ ಚಂದ್ರಕಾಂತ ದೇಸಾಯಿ ಅವರ ನೇತೃತ್ವದಲ್ಲಿ ಗ್ರಾಮಸ್ಥರು ಒಗ್ಗೂಡಿ ಈ ರಸ್ತೆ ನಿರ್ಮಾಣ ಕಾರ್ಯವನ್ನು ಯಶಸ್ವಿಗೊಳಿಸಿದ್ದಾರೆ. ಗ್ರಾಮಸ್ಥರ ಈ ಸಾಹಸಮಯ ಕಾರ್ಯವು ಆಡಳಿತ ವ್ಯವಸ್ಥೆಯ ಕಾರ್ಯವೈಖರಿಗೆ ಕನ್ನಡಿ ಹಿಡಿಯುವಂತಿದೆ.

ಈ ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರ ಅನುಕೂಲವನ್ನು ಗಮನದಲ್ಲಿಟ್ಟುಕೊಂಡು, ರಸ್ತೆ ಸಾರಿಗೆ ಸಂಸ್ಥೆಯು ಕೂಡಲೇ ಗಂಗೋಡಾ ಗ್ರಾಮಕ್ಕೆ ಬಸ್ ಸಂಚಾರವನ್ನು ಪ್ರಾರಂಭಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಮುಖ್ಯವಾಗಿ, ಗಂಗೋಡಾ ಜಾತ್ರೆ ಆರಂಭವಾಗುವ ಒಳಗೆ ಬಸ್ ಸೇವೆ ಲಭ್ಯವಾಗಬೇಕು ಎಂಬುದು ಗ್ರಾಮಸ್ಥರ ಪ್ರಮುಖ ಬೇಡಿಕೆಯಾಗಿದೆ. ತಮ್ಮ ಮೂಲಭೂತ ಸೌಕರ್ಯಕ್ಕಾಗಿ ಪ್ರತಿ ವರ್ಷ ರಸ್ತೆ ನಿರ್ಮಿಸುವ ಹಳ್ಳಿಗರ ಈ ಹೋರಾಟಕ್ಕೆ ಆಡಳಿತ ವ್ಯವಸ್ಥೆ ಈ ಬಾರಿಯಾದರೂ ಸ್ಪಂದಿಸುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.

# ರಾಹುಲ್ ಇನ್ನು ವಿದೇಶಕ್ಕೆ ಹೋಗ್ತಾರೆ!

## ಕುಮಟಾದಲ್ಲಿ ಬಿಜೆಪಿ ವಿಜಯೋತ್ಸವ | ಎನ್‌ಡಿಎ ಪರವಾಗಿ ದಿನಕರ ಶೆಟ್ಟಿ ಅಭಿನಂದನೆ

● **ತತ್ವನಿಷ್ಠ, ಕುಮಟಾ:** ಕಾಂಗ್ರೆಸ್ ಪಕ್ಷ ಬಿಹಾರದಲ್ಲಿ ಹೀನಾಯವಾಗಿ ಸೋಲುಕಂಡಿದ್ದು, ರಾಹುಲ್ ಗಾಂಧಿಯವರು ಇನ್ನೊಂದು ವಾರದಲ್ಲಿ ವಿದೇಶ ಪ್ರಯಾಣಕ್ಕೆ ತೆರಳುತ್ತಾರೆ ಎಂದು ಶಾಸಕ ದಿನಕರ ಶೆಟ್ಟಿ ಹೇಳಿದರು.

ಬಿಹಾರ ರಾಜ್ಯದ ಚುನಾವಣೆಯಲ್ಲಿ ಎನ್‌ಡಿಎ ಗೆಲುವಿನ ನಗು ಬೀರಿದ ಹಿನ್ನೆಲೆ ಗಿಬ್ ವೃತ್ತದಲ್ಲಿ ಬಿಜೆಪಿಗರು ವಿಜಯೋತ್ಸವ ಆಚರಿಸಿದ ಸಂದರ್ಭದಲ್ಲಿ ಶಾಸಕರು ಸಂತಸ ಹಂಚಿಕೊಂಡರು.

ನಮ್ಮ ಎನ್‌ಡಿಎ ಒಕ್ಕೂಟಕ್ಕೆ ಅಭೂತಪೂರ್ವ ವಿಜಯವನ್ನು ಬಿಹಾರದ ಜನತೆ ನೀಡುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಮತದಾನಕ್ಕಾಗಿ ಬಿಹಾರದ ಜನತೆಗೆ ಎನ್‌ಡಿಎ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದು ವಿವರಿಸಿದರು.

ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಜಯಗಳಿಸಿದ್ದಕ್ಕೆ ಕುಮಟಾ ಮಂಡಲದ ವತಿಯಿಂದ ಸಂಭ್ರಮಿಸಿದ್ದೇವೆ. ಉತ್ತಮ ಆಡಳಿತ ನೀಡಿದ ಜತೆಗೆ ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಇನ್ನಿತರರು ಚುನಾವಣಾ ಪ್ರಚಾರ ಕಾರ್ಯಗಳಲ್ಲಿ ಪಾಲ್ಗೊಂಡು ಸರಿಯಾದ ತಿಳುವಳಿಕೆ ನೀಡಿದ್ದರಿಂದ ವಿಜಯ ಸಾಧ್ಯವಾಗಿದೆ.



ಈಗ ಗೆದ್ದವರ ಜವಾಬ್ದಾರಿಯೂ ಜಾಸ್ತಿಯಾಗಿದೆ. ಎನ್‌ಡಿಎ ಮೈತ್ರಿಕೂಟ ಬಿಹಾರಕ್ಕೆ ಅಂಟಿದ ಕಳಂಕವನ್ನು ದೂರಮಾಡಿ, ಉತ್ತಮ ಕೆಲಸ ಮಾಡಿ ತೋರಿಸುತ್ತಾ ಬಂದಿದ್ದಾರೆ. ಆಮಿಷಗಳಿಗೆ ಒಳಗಾಗದೇ ಎನ್‌ಡಿಎಗೆ ಒಲವು ತೋರಿದ್ದಾರೆ ಎಂದರು.

ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು, ಜಯಘೋಷದೊಂದಿಗೆ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಮಂಡಲಾಧ್ಯಕ್ಷ ಜಿ.ಐ. ಹೆಗಡೆ ಮಾತನಾಡಿ, ಬಿಹಾರದ ಚುನಾವಣೆಯಲ್ಲಿ ಇಂದು ಪ್ರಕಟಗೊಂಡ ಫಲಿತಾಂಶದಂತೆ ಎನ್‌ಡಿಎ ಒಕ್ಕೂಟ ಪ್ರಚಂಡ ಬಹುಮತದೊಂದಿಗೆ ಗೆಲುವು ಪಡೆದಿರುವುದರ ಪ್ರಯುಕ್ತ ಸಂಭ್ರಮಿಸುತ್ತಿದ್ದೇವೆ. ಇಂದು ಅತ್ಯಂತ ಸಂತೋಷದ ದಿನ. ಕಾಂಗ್ರೆಸ್ ಪಕ್ಷ ಇಡೀ ದೇಶದಲ್ಲಿ ಬಿಜೆಪಿಗರು ವೋಟ್ ಚೋರಿ ಮಾಡಿ ಗೆದ್ದರೆಂದು ವ್ಯರ್ಥ ಸುಳ್ಳು ಆರೋಪ ಮಾಡುತ್ತಿದ್ದಾರೆ. ಆದರೆ ಬಿಹಾರದ ಜನತೆ ಬಹುಮತ ನೀಡಿ ಕಾಂಗ್ರೆಸಿಗರಿಗೆ ತಕ್ಕ ಉತ್ತರ ನೀಡಿದ್ದಾರೆ ಎಂದರು.

ಮಹಿಳಾ ಮೋರ್ಚಾ ಅಧ್ಯಕ್ಷೆ ಜಯಾ ಶೇಟ, ಎಂ.ಎಂ. ಹೆಗಡೆ, ಪ್ರಶಾಂತ ನಾಯ್ಕ, ರಾಜ್ಯ ಶಿಕ್ಷಣ ಪ್ರಕೋಷ್ಟದ ಎಂ.ಜಿ. ಭಟ್ಟ, ಗ್ರಾಪಂ ಅಧ್ಯಕ್ಷ ಎಂ.ಎಂ. ಹೆಗಡೆ, ಸಂತೋಷ ನಾಯ್ಕ, ಚೇತೇಶ ಶಾನಭಾಗ, ಹೇಮಂತಕುಮಾರ, ಸೂರ್ಯಕಾಂತ ಗೌಡ, ಮಂಜು ಪಟಗಾರ, ಹರಿಹರ ನಾಯ್ಕ ಇತರರು ಇದ್ದರು.

## ಸು ಡೊ ಕು 50

| | | | | | | | | |
|---|---|---|---|---|---|---|---|---|
| 5 | 2 | | | | | 8 | 9 | |
| | | | 9 | | 8 | 1 | | |
| 9 | | 8 | | 2 | | 4 | | 7 |
| | 8 | 9 | | | 5 | | 2 | 4 |
| | 4 | 3 | 7 | 8 | | 5 | | 1 |
| | 1 | | 2 | 4 | | | | |
| | | | | | | 2 | | 3 |
| | | 6 | | 3 | 2 | 7 | 4 | |
| | | | | | 7 | | | 5 |

ಈ ಸುಡೊಕು ಸಂಖ್ಯಾಬಂಧದಲ್ಲಿರುವ ಎಲ್ಲ ಸಾಲುಗಳಲ್ಲಿ ಮತ್ತು ಕಂಬಗಳಲ್ಲಿ ಒಂದರಿಂದ ಒಂಬತ್ತರ ತನಕ ಅಂಕಿಗಳಿರಬೇಕು. ಪ್ರತಿ 3x3 ಬಾಕ್ಸ್‌ನಲ್ಲೂ ಒಂದರಿಂದ ಒಂಬತ್ತರೊಳಗಿನ ಅಂಕಿಗಳಿರಬೇಕು ಮತ್ತು ಯಾವುದೇ ಅಂಕಿ ಪುನರಾವರ್ತನೆ ಆಗಬಾರದು.

**ಸುಡೊಕು 49ರ ಉತ್ತರ**

| | | | | | | | | |
|---|---|---|---|---|---|---|---|---|
| 1 | 6 | 9 | 3 | 7 | 2 | 4 | 5 | 8 |
| 3 | 2 | 7 | 8 | 4 | 5 | 9 | 6 | 1 |
| 8 | 5 | 4 | 1 | 9 | 6 | 7 | 2 | 3 |
| 2 | 7 | 8 | 5 | 1 | 4 | 3 | 9 | 6 |
| 5 | 4 | 1 | 6 | 3 | 9 | 8 | 7 | 2 |
| 6 | 9 | 3 | 2 | 8 | 7 | 1 | 4 | 5 |
| 7 | 8 | 5 | 4 | 6 | 1 | 2 | 3 | 9 |
| 4 | 1 | 6 | 9 | 2 | 3 | 5 | 8 | 7 |
| 9 | 3 | 2 | 7 | 5 | 8 | 6 | 1 | 4 |

## ತಾಲೂಕು ಮಟ್ಟಕ್ಕೆ ಆಯ್ಕೆ



● **ತತ್ವನಿಷ್ಠ, ಶಿರಸಿ:** ಇತ್ತೀಚೆಗೆ ಭೈರುಂಬೆಯಲ್ಲಿ ನಡೆದ ಹುಲೇಕಲ್ ವಲಯ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ವಾನಳ್ಳಿ ಶ್ರೀ ಗಜಾನನ ಮಾಧ್ಯಮಿಕ ಶಾಲೆಯ ಪ್ರಣತಿ ವರದೇಶ್ವರ ಭಟ್ಟ ಕನ್ನಡ ಭಾಷಣ, ಸಂಸ್ಕೃತ ಧಾರ್ಮಿಕ ಪಠಣ, ಸಂಕೇತ ಶ್ರೀಪಾದ ಹೆಗಡೆ ಆಶು ಭಾಷಣ, ಚರ್ಚಾ ಕೂಟ, ಅದಿತಿ ವಸಂತ ಹೆಗಡೆ ರಂಗೋಲಿ, ಕವನ ವಾಚನ, ನಿಧಿ ರಾಮಚಂದ್ರ ಹೆಗಡೆ ಸಂಸ್ಕೃತ ಭಾಷಣ, ಜಯಶ್ರೀ ದ್ಯಾವ ಗೌಡ ಕನ್ನಡ ಪ್ರಬಂಧ, ಪ್ರಜ್ವಲ ಕೃಷ್ಣ ನಾಯ್ಕ ಮಿಮಿಕ್ರಿ, ಸುಗುಣ ರಾಮಚಂದ್ರ ಭಟ್ಟ ಭಾವಗೀತೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಜಾನಪದ ನೃತ್ಯ ಮತ್ತು ಕವ್ವಾಲಿ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

## ಬಿ.ಎಡ್‌ನಲ್ಲಿ ಜ್ಞಾನೇಶ್ವರಿ ಶಿಕ್ಷಣ ಸಂಸ್ಥೆ ಸಾಧನೆ



● **ತತ್ವನಿಷ್ಠ, ಭಟ್ಕಳ:** ನಗರದ ಜ್ಞಾನೇಶ್ವರಿ ಶಿಕ್ಷಣ ಮಹಾವಿದ್ಯಾಲಯದ 2024-25ನೇ ಸಾಲಿನ ಬಿ.ಎಡ್ ನಾಲ್ಕನೇ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶ ಶೇ. 100ರಷ್ಟು ಸಾಧನೆ ಮಾಡಿದೆ. ಪರೀಕ್ಷೆಗೆ ಕುಳಿತ ಒಟ್ಟು 47 ವಿದ್ಯಾರ್ಥಿಗಳಲ್ಲಿ 16 ವಿದ್ಯಾರ್ಥಿಗಳು ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದು ತೇರ್ಗಡೆಯಾಗಿದ್ದು, ಉಳಿದ ವಿದ್ಯಾರ್ಥಿಗಳು ಶೇ. 80ಕ್ಕಿಂತ ಹೆಚ್ಚು ಅಂಕವನ್ನು ಪಡೆದು ತೇರ್ಗಡೆಯಾಗಿದ್ದಾರೆ. ನೂತನಾ ಮಂಜು ಗೌಡ ಶೇ. 93.67, ಅನಿತಾ ನಿಂಗಪ್ಪ ಹರವಳ್ಳಿ ಶೇ. 92.67 ಮತ್ತು ಗೀತಾ ಅಣ್ಣಪ್ಪ ನಾಯ್ಕ ಶೇ. 92.17 ಅಂಕಗಳನ್ನು ಪಡೆದು ಮಹಾವಿದ್ಯಾಲಯಕ್ಕೆ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

## ಬೇಲಿಗೆ ಸಿಲುಕಿದ್ದ ನಾಗರ ರಕ್ಷಣೆ

● **ತತ್ವನಿಷ್ಠ, ಮುಂಡಗೋಡ:** ತಾಲೂಕಿನ ಪಾಳಾ ಗ್ರಾಮದ ಇಸಾಕ್ಸ್ಮಿದ ಮದರಸಾಬ ಮೆಣಸಿ ಅವರ



ಗದ್ದೆಯ ಬೇಲಿಗೆ ಹಾಕಲಾಗಿದ್ದ ಬಲೆಯಲ್ಲಿ ಸಿಲುಕಿದ್ದ ಬೃಹತ್ ಆಕಾರದ ನಾಗರಹಾವನ್ನು ಪಾಳಾ ಉಪ ವಲಯ ಅರಣ್ಯಾಧಿಕಾರಿ ಸುನೀಲ ಹೊನ್ನಾವರ ಹಿಡಿದು ಕಾಡಿಗೆ ಬಿಟ್ಟರು. ಪ್ರಕಾಶ ಬಳ್ಳಾರಿ, ಜಗದೀಶ ಗೌಡ ಮುಂತಾದ ಅರಣ್ಯ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.



**● ತತ್ವನಿಷ್ಠ, ಸಿದ್ದಾಪುರ: ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಪೋಷಕರ ಮತ್ತು ಉಪನ್ಯಾಸಕರ ಮಹಾಸಭೆ ನಡೆಯಿತು. ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯೆ ಲೀಲಾವತಿ ನಾಯ್ಕ, ಉಪನ್ಯಾಸಕರಾದ ಬಿ.ಎಸ್. ಹೆಗಡೆ, ಕೆ.ಎಂ. ಲಕ್ಷ್ಮಣ, ವಿನಾಯಕ ನಾಯ್ಕ, ರಾಮಕೃಷ್ಣ ಸಭಾಹಿತ, ಶಂಕರ ಭಟ್ಟ, ರತ್ನಾಕರ ನಾಯ್ಕ ಹಾಗೂ ವಕೀಲೆ ಅಂಜುಂ ಸಾಬ್ ಇದ್ದರು.**

# ಕತಗಾಲ ಸರ್ಕಾರಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ

● **ತತ್ವನಿಷ್ಠ, ಕುಮಟಾ:** ಮಕ್ಕಳ ದಿನಾಚರಣೆ ಸಾರ್ಥಕಗೊಳಿಸುವ ನಿಟ್ಟಿನಲ್ಲಿ, ಕತಗಾಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಕರಾವಳಿ ಕನ್ನಡ ಸಂಘ ಹಾಗೂ ವಿಶ್ವ ಮಾನವ ಹಕ್ಕುಗಳ ಸಂಘ ಸಂಯುಕ್ತ ಆಶ್ರಯದಲ್ಲಿ ಉಚಿತ ಪಠ್ಯಪುಸ್ತಕಗಳ ವಿತರಣಾ ಕಾರ್ಯಕ್ರಮ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಕರಾವಳಿ ಕನ್ನಡ ಸಂಘದ ಅಧ್ಯಕ್ಷ ಭಾಸ್ಕರ್ ಪಟಗಾರ, ಕನ್ನಡ ಶಾಲೆಗಳ ಉಳಿವು, ಬೆಳವಣಿಗೆ ನಮ್ಮ ಮುಖ್ಯ ಗುರಿ. ಕನ್ನಡ ಮಾಧ್ಯಮದಲ್ಲಿ ಓದಿದ ಅನೇಕರು ಇಂದು ವೈದ್ಯರು, ಇಂಜಿನಿಯರ್‌ಗಳು, ಸರ್ಕಾರಿ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ ಶಾಲೆಯನ್ನು ಬಿಟ್ಟು ದೂರದ ಆಂಗ್ಲಮಾಧ್ಯಮಕ್ಕೆ ಮಕ್ಕಳನ್ನು ಕಳುಹಿಸುವ ಪ್ರವೃತ್ತಿ ಬದಲಾಗಬೇಕು ಎಂದು ಮನವಿ ಮಾಡಿದರು. ಸಂಘದ ವತಿಯಿಂದ ಈ ರೀತಿಯ ಕೃತಿಗಳನ್ನು ಮುಂದುವರೆಸುವುದಾಗಿ ಅವರು ತಿಳಿಸಿದರು.



ಗ್ರಾಪಂ ಸದಸ್ಯ ಮಹೇಶ್ ದೇಶಭಂಡಾರಿ ಮಾತನಾಡಿ, ನಾವೂ ಕನ್ನಡ ಶಾಲೆಯಲ್ಲಿಯೇ ಬೆಳೆದವರು. ಇಂದು ಪಾಲಕರಲ್ಲಿ ಆಂಗ್ಲಮಾಧ್ಯಮದ ಆಕರ್ಷಣೆ ಹೆಚ್ಚಾಗಿದೆ. ಆದರೆ ಕನ್ನಡ ಶಾಲೆಗೆ ಬೇಕಾದ ಸೌಲಭ್ಯಗಳಿಗಾಗಿ ಪಂಚಾಯಿತಿ ಸದಾ ಸಹಕಾರ ನೀಡುತ್ತದೆ ಎಂದು ಭರವಸೆ ನೀಡಿದರು.

ಎಸ್.ಡಿ.ಎಂ.ಸಿ ಸದಸ್ಯ ದತ್ತಾತ್ರೇಯ ಅಂಬಿಗ ಮಾತನಾಡಿ, ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ವಿತರಣೆ ಕಾರ್ಯಕ್ರಮ ಶಾಲೆಗೆ ಮತ್ತೊಂದು ಉತ್ತೇಜನವಾಗಿದೆ ಎಂದು ಹೇಳಿದರು. ಕಾರ್ಯಕ್ರಮದ ನಿರೂಪಣೆಯನ್ನು ಶಿಕ್ಷಕಿ ಆಶಾ ಭಟ್ ನಿರ್ವಹಿಸಿದರು.

ಈ ಸಂದರ್ಭದಲ್ಲಿ ವಿಶ್ವಮಾನವ ಹಕ್ಕುಗಳ ಸಂಘದ ತಾಲೂಕು ಅಧ್ಯಕ್ಷ ಮಹೇಂದ್ರ ನಾಯಕ್, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಬಾಲಕೃಷ್ಣ, ಸುನಿಲ ನಾಯಕ್, ಪುಷ್ಪಾ, ಕೃಷ್ಣ ಹೆಗಡೆ, ಬಾಲಕೃಷ್ಣ, ಪ್ರಕಾಶ ನಾಯಕ, ಮಹಾಬಲೇಶ್ವರ ನಾಯಕ, ಜಗದೀಶ, ಕೇಂದ್ರ ಶಾಲೆಯ ಮುಖ್ಯಶಿಕ್ಷಕರು, ರಾಘು ಅಂಬಿಗ, ಮಡಿವಾಳ ಸರ್, ಬೊಗ್ರಿಬಲ್ ಶಾಲೆಯ ಮುಖ್ಯಾಧ್ಯಾಪಕರು, ಅಂಗನವಾಡಿ ಕಾರ್ಯಕರ್ತರು, ಊರಿನ ನಾಗರಿಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಅಂತೋನಿ ಪಿಂಟು, ಅಣ್ಣಪ್ಪ ನಾಯಕ್, ಸುನಿಲ ಹರಿಕಾಂತ ಶುಭ ಹಾರೈಸಿದರು.

# ಸರಕಾರಿ ನೌಕರರ ಸಂಘಟನೆಯಿಂದ ಜನಹಿತ ಕಾರ್ಯ

● **ತತ್ವನಿಷ್ಠ, ದಾಂಡೇಲಿ:** ಅಬಲರ ಅಸಹಾಯಕತೆಗೆ ಸ್ಪಂದಿಸುವುದೇ ಜೀವನ ಧರ್ಮ. ಅದು ಸಂಘಟನೆಯ ಧ್ಯೇಯವಾಗಬೇಕು ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಬಿ.ಎನ್. ವಾಸರೆ ನುಡಿದರು.

ರೋಟರಿ ಶಾಲಾ ಸಭಾಭವನದಲ್ಲಿ ನಡೆದ ರಾಜ್ಯ ಸರಕಾರಿ ನೌಕರರ ಸಂಘಟನೆಯ ತಾಲೂಕು ಘಟಕದ ವಾರ್ಷಿಕ ಸಭೆ ಉದ್ಘಾಟಿಸಿ ಮಾತನಾಡಿ, ದಾಂಡೇಲಿಯ ಸರಕಾರಿ ನೌಕರರ ಸಂಘಟನೆ ಜನಹಿತ ಕಾರ್ಯಗಳನ್ನು ಮಾಡುತ್ತಿದೆ. ನೌಕರನೋರ್ವನ ಮಗ ಅನಾರೋಗ್ಯದಿಂದ ಸಮಸ್ಯೆಯಲ್ಲಿದ್ದಾಗ ಅವರಿಗೆ ಹಣಕಾಸಿನ ನೆರವು ನೀಡಿ ಸಹಾಯ ಮಾಡಿದ್ದಾರೆ. ಇದೇ ನಿಜವಾದ ಮನುಷ್ಯತ್ವ ಎಂದರು.

ಮುಖ್ಯ ಅತಿಥಿಗಳಾಗಿದ್ದ ಎಸಿಎಫ್ ಸಂತೋಷ ಚೌಹಾಣ ಮಾತನಾಡಿ, ಸರಕಾರಿ ನೌಕರರು ವಿನಾಕಾರಣವಾಗಿ ಆರೋಪಕ್ಕೆ, ಶಿಕ್ಷೆಗೆ ಗುರಿಯಾಗುತ್ತಾರೆ. ಇಂತಹ ಸಂದರ್ಭದಲ್ಲಿ ಸಂಘಟನೆ ಗಟ್ಟಿಯಾದ ಧ್ವನಿ ಎತ್ತಬೇಕು ಎಂದರು. ಸಂಘದ ಮಾಜಿ ಅಧ್ಯಕ್ಷ ಸುರೇಶ ನಾಯಕ ಮಾತನಾಡಿದರು. ಅಧ್ಯಕ್ಷ ಉತ್ಪಲ ಶಿರೋಡ್ಕರ ಅಧ್ಯಕ್ಷತೆ ವಹಿಸಿದ್ದರು. ಆರ್‌ಎಫ್‌ಒ ಎನ್.ಎಲ್. ನದಾಫ, ಗೌರವಾಧ್ಯಕ್ಷ ಬಸವರಾಜ ಇದ್ದರು.



ರಾಜ್ಯ ಪರಿಷತ್ ಸದಸ್ಯ ವಿನಾಯಕ ಪವಾರ ಪ್ರಾಸ್ತಾವಿಕ ಮಾತನಾಡಿದರು. ಖಜಾಂಚಿ ಗೌಡಪ್ಪ ಬನಕದಿನ್ನಿ ವರದಿ ವಾಚಿಸಿದರು. ಕಾರ್ಯದರ್ಶಿ ಪ್ರವೀಣ ನಾಯ್ಕ, ನಾಗರಾಜ ಇದ್ದರು. ನಿವೃತ್ತ ಶಿಕ್ಷಕರು ಹಾಗೂ ಸರಕಾರಿ ನೌಕರರನ್ನು ಸನ್ಮಾನಿಸಲಾಯಿತು.

# ಮಾರಿಕಾಂಬಾ ಪ್ರೌಢಶಾಲೆ ಹಳೆ ವಿದ್ಯಾರ್ಥಿಗಳ ಸಂಘದ ದಶಮಾನೋತ್ಸವ

● **ತತ್ವನಿಷ್ಠ, ಶಿರಸಿ:** ನಗರದ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲಾ ಹಳೆ ವಿದ್ಯಾರ್ಥಿಗಳ ಸಂಘ ಸ್ಥಾಪನೆಯಾಗಿ 10 ವರ್ಷಗಳನ್ನು ಪೂರೈಸುವುದರ ಜೊತೆಗೆ ಶಾಲೆಗೆ ವರ್ಷ ವರ್ಷವೂ ಅಗತ್ಯವಿರುವ ಕೆಲಸ ಕಾರ್ಯಗಳನ್ನು ನೆರವೇರಿಸುವಲ್ಲಿ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳ ಸಂಘ ಸಹಕಾರ ನೀಡುತ್ತ ಬಂದಿದೆ. ಯಶಸ್ವಿ ದಶಕವನ್ನು ಪೂರೈಸಿದ್ದರ ಪ್ರಯುಕ್ತ ಕಾರ್ಯಕ್ರಮವನ್ನು ಸ್ಮರಣೀಯವಾಗಿಸುವಲ್ಲಿ ಸಂಘದ ಪದಾಧಿಕಾರಿಗಳು ಭಾರತದ ಪ್ರಥಮ ಪ್ರಧಾನಿ ದಿ. ಪಂಡಿತ್ ಜವಾಹರ್ ಲಾಲ್ ನೆಹರು ಜನ್ಮದಿನದ ಪ್ರಯುಕ್ತ ಪ್ರೌಢಶಾಲೆಗೆ ತೆರಳಿ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಲಾಯಿತು. ಸಂಸ್ಥೆಯ ಉಪಪ್ರಾಂಶುಪಾಲರು ಮತ್ತು ಶಿಕ್ಷಕರನ್ನು ಭೇಟಿಯಾಗಿ ಸಂಸ್ಥೆಯ ಅಭಿವೃದ್ಧಿ ಕೆಲಸಗಳ ಕುರಿತು ಚರ್ಚಿಸಿ, ಅಗತ್ಯ ಕಾರ್ಯಗಳನ್ನು ತಿಳಿದುಕೊಂಡು ಹಳೆಯ ವಿದ್ಯಾರ್ಥಿಗಳ ಸಂಘದ ಸದಸ್ಯರನ್ನೆಲ್ಲ ಸಂಪರ್ಕಿಸಿ ನೆರವೇರಿಸಿಕೊಡುವ ಬಗ್ಗೆ ಮಾಹಿತಿ ನೀಡಲಾಯಿತು.



ಸಂಘದ ಅಧ್ಯಕ್ಷ ಶ್ರೀಪತಿ ನಾಯ್ಕ, ಪದಾಧಿಕಾರಿಗಳಾದ ಕಿರಣ್ ಶಿರಸಿಕರ್, ಮಹೇಶ್ ಶೆಟ್ಟಿ, ಪ್ರಶಾಂತ್ ಗುಡಿಗಾರ, ರಾಘವೇಂದ್ರ ಶೇಟ್, ರಾಘವೇಂದ್ರ ರೇವಣಕರ್, ರಾಘವೇಂದ್ರ ಶೆಟ್ಟಿ, ರಾಮು ನಗರ್ಕರ್, ದೇವರಾಯ ನಾಯ್ಕ ಮುಂತಾದವರು ಪಾಲ್ಗೊಂಡಿದ್ದರು.

## ತತ್ವನಿಷ್ಠ ವರದಿಗಾರರು

- ಶಿರಸಿ-ಮಂಜುನಾಥ ಈರಗೊಪ್ಪ 8971124937
- ಯಲ್ಲಾಪುರ-ಶ್ರೀಧರ ವೈದಿಕ 9483490345
- ಸಿದ್ದಾಪುರ-ನಿತಿನ ಹೆಗಡೆ ಮುತ್ತಿಗೆ 8550855071
- ಅಂಕೋಲಾ-ರಾಘು ಕಾಕರಮಠ 9449999775
- ಭಟ್ಕಳ-ಆರ್.ಕೆ. ಭಟ್ಕಳ 9448221117
- ಕುಮಟಾ-ಗಣೇಶ ಜೋಶಿ ಸಂಕೊಳ್ಳಿ 9482212898
- ದಾಂಡೇಲಿ-ಅಕ್ಷಯ ಗೋಸಾವಿ 9663591069
- ಬನವಾಸಿ-ಸುಧೀರ ನಾಯರ 9481608757
- ಗೋಕರ್ಣ- ಅರುಣ ಶೆಟ್ಟಿ 9986313639

## ರಾಷ್ಟ್ರ ಜಾಗೃತಿ ಬಾಲ್ಯದಿಂದಲೇ ಬರಲಿ



● **ತತ್ವನಿಷ್ಠ, ಶಿರಸಿ:** ತಾಲೂಕಿನ ಮತ್ತಿಗಾರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೋಷಕ-ಶಿಕ್ಷಕರ ಮಹಾಸಭೆ ಮತ್ತು ದಾಖಲಾತಿ ಜಾಗೃತಿ ಅಭಿಯಾನವನ್ನು ವಿಭಿನ್ನವಾಗಿ ಆಚರಿಸಲಾಯಿತು.

ನಿವೃತ್ತ ಸೈನಿಕ ಗಣಪತಿ ಭಟ್ ಅಬ್ಬಿಹದ್ದ ಅವರನ್ನು ಸನ್ಮಾನಿಸಿ, ಬಳಿಕ ಅವರಿಂದ ಗಡಿಯಲ್ಲಿನ ಅನುಭವಗಳನ್ನು ವಿವರಿಸುವ ಮೂಲಕ ಮಕ್ಕಳಿಗೆ ಪ್ರೇರಣೆ ನೀಡಲಾಯಿತು.

ಈ ವೇಳೆ ಮಾತನಾಡಿದ ಗಣಪತಿ ಭಟ್, ಮಕ್ಕಳು ಮಣ್ಣಿನ ಮೂರ್ತಿಗಳಿದ್ದಂತೆ. ಈ ಹಂತದಲ್ಲಿ ನಾವು ಅವರಿಗೆ ಯಾವ ಮಾರ್ಗದರ್ಶನ ನೀಡುತ್ತೇವೆಯೋ ಅದೇ ರೀತಿ ಬೆಳವಣಿಗೆ ಹೊಂದುತ್ತಾರೆ. ಹೀಗಾಗಿ, ರಾಷ್ಟ್ರ ಜಾಗೃತಿ ಬಾಲ್ಯದಿಂದಲೇ ಬರಬೇಕು. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬ ಮಾಹಿತಿಯನ್ನು ನಾವು ಈಗಿನಿಂದಲೇ ನೀಡಿದರೆ ಅವರು ಮುಂದೆ ರಾಷ್ಟ್ರ ವಿರೋಧಿ ಕೃತ್ಯದಲ್ಲಿ ಭಾಗಿಯಾಗಲು ಸಾಧ್ಯವಿಲ್ಲ ಎಂದರು. ಎಸ್‌ಡಿಎಂಸಿ ಅಧ್ಯಕ್ಷ ವಿನಾಯಕ ಹೆಬ್ಬಲಸು, ಗ್ರಾಮದ ಪ್ರಮುಖರಾದ ಡಿ.ಜಿ. ಹೆಗಡೆ ನೇರ್ಲದ್ದ, ಜಿ.ಎಸ್. ಹೆಗಡೆ ಹೆಬ್ಬಲಸು, ನಾಗವೇಣಿ ಆಚಾರಿ ಇತರರಿದ್ದರು.

**ಶಿರಸಿಯಲ್ಲಿ ಬಿಜೆಪಿ ಕಾರ್ಯಕರ್ತರ ಸಂಭ್ರಮಾಚರಣೆ**

# ಬಿಹಾರಿಗರು ದೃಢ ಆಡಳಿತ ಬಯಸಿದ್ದಾರೆ, ಗ್ಯಾರೆಂಟಿಯಲ್ಲ: ಸಾಲೇರ

● **ತತ್ವನಿಷ್ಠ, ಶಿರಸಿ:** ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಭರ್ಜರಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಶಿರಸಿಯಲ್ಲಿ ಬಿಜೆಪಿ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು.

ನಗರದ ಅಂಚೆ ವೃತ್ತದಲ್ಲಿ ಸೇರಿದ ಶಿರಸಿ ನಗರ ಹಾಗೂ ಗ್ರಾಮೀಣ ಮಂಡಳದ ನೂರಾರು ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿಯವರಿಗೆ ಜಯಕಾರ ಹಾಕಿದರು.

ನಗರ ಘಟಕ ಅಧ್ಯಕ್ಷ ಆನಂದ ಸಾಲೇರ ಮಾತನಾಡಿ, ರಾಜ್ಯದಲ್ಲಿ ಗ್ಯಾರೆಂಟಿ ಯೋಜನೆಗಳನ್ನು ಘೋಷಿಸಿದಂತೆ ಕಾಂಗ್ರೆಸ್ ಪಕ್ಷ ಬಿಹಾರದ ಜನತೆಗೂ ಇದೇ ರೀತಿಯ ಪೊಳ್ಳು ಆಶ್ವಾಸನೆ ನೀಡಿತ್ತು. ಬಿಹಾರದ ಜನತೆ ಈ ಗ್ಯಾರೆಂಟಿಗೆ ಜಗ್ಗಿಲ್ಲ, ಬಿಜೆಪಿಯ ದೃಢ ಆಡಳಿತವೇ ಬೇಕು ಎಂದು ನಿರ್ಧರಿಸಿದ್ದಾರೆ. 61 ಸ್ಥಾನಗಳಿಗೆ ಸ್ಪರ್ಧೆ ಮಾಡಿದ್ದ ಕಾಂಗ್ರೆಸ್ ಪಕ್ಷ ಇಂದು ಒಂದೇ ಕೈನಲ್ಲಿ ಎಣಿಸಬಹುದಾದಷ್ಟು ಸ್ಥಾನಕ್ಕೆ ಸೀಮಿತಗೊಂಡಿದೆ. ವೋಟ್ ಚೋರಿ ಎಂದು ಆರೋಪ ಮಾಡುತ್ತಿರುವ ರಾಹುಲ್ ಗಾಂಧಿಗೆ ಅಲ್ಲಿಯ ಜನತೆ ಉತ್ತರ ಕೊಟ್ಟಿದ್ದಾರೆ ಎಂದರು.



ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುಪ್ರಸಾದ ಹೆಗಡೆ ಹರ್ತೆಬೈಲ್ ಮಾತನಾಡಿ, ಬಿಹಾರದಲ್ಲಿ ಫಲಿತಾಂಶದ ಅವಲೋಕನ ಮಾಡಲೂ ಸಾಧ್ಯವಾಗದ ಸ್ಥಿತಿಗೆ ಕಾಂಗ್ರೆಸ್ ತಲುಪಿದೆ. ಇನ್ನು ವೋಟ್ ಚೋರಿ ಆಗಿದೆ, ಇವಿಎಂ ಹ್ಯಾಕ್ ಎನ್ನುವ ಮಾತು ರಾಹುಲ್ ಗಾಂಧಿಯವರಿಂದ ಕೇಳಿಬರಲಿದೆ. ರಾಹುಲ್ ಗಾಂಧಿ ಪ್ರವಾಸಿ ರಾಜಕಾರಣಿ ಇದ್ದಂತೆ. ಆಗಾಗ ಬಂದು ಇಲ್ಲ ಸಲ್ಲದ ಹೇಳಿಕೆ ನೀಡುತ್ತಾರೆ ಎಂದರು.

ಬಿಜೆಪಿ ಜಿಲ್ಲಾ ವಕ್ತಾರ ಸದಾನಂದ ಭಟ್ ನಿಡಗೋಡ ಮಾತನಾಡಿ, ಆರ್‌ಜೆಡಿ ಕಾಂಗ್ರೆಸ್ ಬಿಹಾರದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಅಪಪ್ರಚಾರ ಮಾಡಿದ್ದರು. ಮತ ಚೋರಿ ಎಂಬ ಸುಳ್ಳು ಆರೋಪ ಮಾಡಿ, ಚುನಾವಣಾ ಆಯೋಗಕ್ಕೂ ಅವಮಾನ ಮಾಡಿದ್ದಾರೆ. ಇಡೀ ರಾಷ್ಟ್ರದಲ್ಲಿ ಕಾಂಗ್ರೆಸನ್ನು ಜನ ತಿರಸ್ಕರಿಸಿದ್ದಾರೆ. ಬಿಹಾರದ ಫಲಿತಾಂಶದ ಬಳಿಕ ಹೈ ಕಮಾಂಡ್ ಮಾತನಾಡದ ಸ್ಥಿತಿ ತಲುಪಿದೆ. ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯ ನವೆಂಬರ್ ಕ್ರಾಂತಿ ಇನ್ನು ನಡೆಯಲು ಸಾಧ್ಯವಿಲ್ಲ. ಒಂದೊಮ್ಮೆ ರಾಜ್ಯದಲ್ಲಿಯೂ ಕಾಂಗ್ರೆಸ್‌ನ ಒಡಕು ಮೂಡಿದರೆ ಎಂಬ ಆತಂಕದಲ್ಲಿ ಇನ್ನು ಕಾಂಗ್ರೆಸ್ ಮೌನ ವಹಿಸಲಿದೆ ಎಂದರು.

ನಗರಸಭೆ ಅಧ್ಯಕ್ಷೆ ಶರ್ಮಿಳಾ ಮಾದನಗೇರಿ, ನಂದನ ಸಾಗರ, ಆರ್.ಡಿ. ಹೆಗಡೆ, ನಾಗರಾಜ ನಾಯ್ಕ ಮತ್ತಿತರರು ಇದ್ದರು.

# ಕಾನೂನು ಜ್ಞಾನ ಕೊರತೆಯಿಂದ ಅಪರಾಧ ಸಂಖ್ಯೆ ಹೆಚ್ಚಳ




**● ತತ್ತ್ವನಿಷ್ಠ, ಮುಂಡಗೋಡ:** ಕಾನೂನು ಜ್ಞಾನದ ಕೊರತೆಯಿಂದಾಗಿ ಸಮಾಜದಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚಲು ಕಾರಣವಾಗಿದೆ. ಕಾನೂನು ಅರಿವು ಪ್ರತಿಯೊಬ್ಬರಲ್ಲೂ ಬಂದರೆ ಮಾತ್ರ ಅಪರಾಧ ತಡೆಯಲು ಸಾಧ್ಯ ಎಂದು ಮುಂಡಗೋಡ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶೆ ಅಕ್ಷತಾ ಸಿ.ಆರ್. ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಬೆಂಗಳೂರು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಕಾರವಾರ, ತಾಲೂಕು ಕಾನೂನು ಸೇವಾ ಸಮಿತಿ ಮುಂಡಗೋಡ ಅಭಿಯೋಜನಾ ಇಲಾಖೆ ಮುಂಡಗೋಡ, ವಕೀಲರ ಸಂಘ ಮುಂಡಗೋಡ ಹಾಗೂ ಮುಂಡಗೋಡ ತಾಲೂಕಿನ ಇತರೆ ಇಲಾಖೆಗಳ ಸಹಯೋಗದೊಂದಿಗೆ ನಾಲ್ವಾ ಜಾಗೃತಿ ಯೋಜನೆ -2025, ತಳಮಟ್ಟದ ಮಾಹಿತಿ ಮತ್ತು ಪಾರದರ್ಶಕತೆಗಾಗಿ ನ್ಯಾಯ ಜಾಗೃತಿ ಯೋಜನೆ ಅಂಗವಾಗಿ ಮುಂಡಗೋಡ ತಾಲೂಕಿನ 16 ಗ್ರಾಮ ಪಂಚಾಯತ, 8 ಶಾಲೆಗಳು 5 ಅಂಗನವಾಡಿ ಕೇಂದ್ರಗಳು ಸೇರಿದಂತೆ ಒಟ್ಟೂ 30 ಕಡೆಗಳಲ್ಲಿ ಹಮ್ಮಿಕೊಳ್ಳಲಾದ ಕಾನೂನು ಅರಿವು ನೆರವು ಕಾರ್ಯಕ್ರಮಕ್ಕೆ ಇಲ್ಲಿಯ ಸಿವಿಲ್ ನ್ಯಾಯಾಯಲದ ಆವರಣದಲ್ಲಿ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಜನರಲ್ಲಿ ಕಾನೂನಿನ ಅರಿವು ಮೂಡಿಸುವ ಮೂಲ ಉದ್ದೇಶದಿಂದ ಕೈಗೊಳ್ಳುವ ಈ ಕಾರ್ಯಕ್ರಮ ಕೇವಲ ತೋರಿಕೆಗಾಗಿ ಸೀಮಿತವಾಗಬಾರದು. ಬದಲಾಗಿ ಪ್ರತಿಯೊಬ್ಬರೂ ಇದರ ಪ್ರಯೋಜನವನ್ನು ಪಡೆದು ಯಶಸ್ವಿಗೊಳಿಸಬೇಕು. ಇದರಲ್ಲಿ ಎಲ್ಲ ಇಲಾಖೆಗಳ ಪಾತ್ರ ಕೂಡ ಮುಖ್ಯವಾಗಿರುತ್ತದೆ. ಹಾಗಾಗಿ ಎಲ್ಲ ಇಲಾಖೆ ಅಧಿಕಾರಿಗಳು ಈ ಬಗ್ಗೆ ಹೆಚ್ಚಿನ ಗಮನಹರಿಸಿ ಜನಜಾಗೃತಿ ಮೂಡಿಸಲು ಕರೆ ನೀಡಿದರು.

ಮುಂಡಗೋಡ ತಹಶೀಲ್ದಾರ ಶಂಕರ ಗೌಡಿ, ಸಹಾಯಕ ಸರಕಾರಿ ಅಭಿಯೋಜಕ ಪ್ರಸಾದ ರಮೇಶ ಹೆಗಡೆ, ವಕೀಲರ ಸಂಘದ ಅಧ್ಯಕ್ಷ ಎನ್.ಎ ನಿಂಬಾಯಿ, ಉಪಾಧ್ಯಕ್ಷ ಎಸ್. ಎಮ್. ಮಲವಳ್ಳಿ, ಹಿರಿಯ ವಕೀಲ ಕೆ.ಎನ್. ಹೆಗಡೆ, ಸಿ.ಎಸ್. ಗಾಣಿಗೇರ, ಗುಡ್ಡಪ್ಪ ಕಾತೂರ, ಜ್ಯೋತಿ ಪಾಟೀಲ್, ಕೆ.ಎಸ್. ಗುಲ್ಬಾನವರ್, ಪೊಲೀಸ್ ನಿರೀಕ್ಷಕ ರಂಗನಾಥ ನೀಲಮ್ಮನವರ, ಕ್ಷೇತ್ರ ಶಿಕ್ಷಣಾಧಿಕಾರಿ ಸುಮಾ ಜಿ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಖೆ ಅಧಿಕಾರಿ ನಂದನಕುಮಾರ, ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಸಂತೋಷಕುಮಾರ ಹಾಲಕಲ್ಲಾಪುರ, ಕಾರವಾರ ಜಿಲ್ಲಾ ಮಹಿಳಾ ಸಬಲಿಕರಣದ ಯೋಜನಾಧಿಕಾರಿಗಳಾದ ವನಜಾ ನಾಯಕ ಮುಂತಾದವರು ಉಪಸ್ಥಿತರಿದ್ದರು. ರಾಜಶೇಖರ ಹುಬ್ಬಳ್ಳಿ ಸ್ವಾಗತಿಸಿದರು. ರಾಜು ಹಂಚಿನಮನಿ ನಿರೂಪಿಸಿದರು.

# ಅನಾರೋಗ್ಯ: ಆರ್ಥಿಕ ಸಹಾಯ



**● ತತ್ತ್ವನಿಷ್ಠ, ಭಟ್ಕಳ:** ಭಟ್ಕಳ ಟ್ಯಾಕ್ಷಿ ಚಾಲಕ ಮಾಲಕರ ಸಂಘದ ಸದಸ್ಸ ಹರೀಶ ಮೊಗೇರ ಅವರು ಅನಾರೋಗ್ಯಕ್ಕೆ ತುತ್ತಾದ ಕಾರಣ ಭಟ್ಕಳ ಟ್ಯಾಕ್ಷಿ ಚಾಲಕ ಮಾಲಕರ ಸಂಘದ ವತಿಯಿಂದ ಅವರ ಕುಟುಂಬ ನಿರ್ವಹಣೆಗೆ ಧನ ಸಹಾಯ ಮಾಡಲಾಯಿತು. ಈ ಸಂದಂರ್ಭದಲ್ಲಿ ಟ್ಯಾಕ್ಷಿ ಯುನಿಯನ್ ವತಿಹಿಂದ ಸಂಘದ ಅಧ್ಯಕ್ಷ ಗಣೇಶ ದೇವಡಿಗ, ಉಪಾಧ್ಯಕ್ಷ ಮೊಹಮ್ಮದ್ ಮುಷ್ತಾಕ್, ಪ್ರಧಾನ ಕಾರ್ಯದರ್ಶಿ ಜಗದೀಶ ಈರ ನಾಯ್ಕ , ಪಧಾದಿಕಾರಿಗಳಾದ ಶ್ರೀನಿವಾಸ ಮಂಜ್ಯಯ್ಯ ನಾಯ್ಕ , ಮೊಹಮ್ಮದ್ ಅದ್ನಾನ, ಮೊಹಮ್ಮದ್ ಸಲ್ಮಾನ ಮುಂತಾದವರು ಇದ್ದರು.

## ರಾಷ್ಟ್ರ ಮಟ್ಟದ ಕುಸ್ತಿಯಲ್ಲಿ ಕಂಚಿನ ಪದಕ



**● ತತ್ತ್ವನಿಷ್ಠ, ಜೋಯಿಡಾ:** ಹರಿಯಾಣದ ಪಾಣಿಪತ್‌ನಲ್ಲಿ ನಡೆದ 69ನೇ SGFI ರಾಷ್ಟ್ರ ಮಟ್ಟದ ಪ.ಪೂ. ಕಾಲೇಜುಗಳ ಕುಸ್ತಿ ಕ್ರೀಡಾಕೂಟದಲ್ಲಿ ಬಿ.ಜಿ.ವಿ.ಎಸ್. ಪ.ಪೂ ಕಾಲೇಜು ರಾಮನಗರದ (ಉ.ಕ) ಕುಸ್ತಿಪಟು ಮನಿಷಾ ಜಿ. ಸಿದ್ದಿ- 72 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಪಡೆದಿದ್ದಾಳೆ. ಇವರಿಗೆ ದೈಹಿಕ ಶಿಕ್ಷಕ ಸಂಜಯ ಗೌಡ ಅವರು ತರಬೇತಿ ನೀಡಿದ್ದಾರೆ.

## ನವ್ಯಾ ರಾಜ್ಯಮಟ್ಟಕ್ಕೆ ಆಯ್ಕೆ

**● ತತ್ತ್ವನಿಷ್ಠ, ಅಂಕೋಲಾ:** ಬಾಲ ವಿಕಾಸ ಅಕಾಡೆಮಿ ಧಾರವಾಡ ಇವರು



ಮಕ್ಕಳ ದಿನಾಚರಣೆಯ ಪ್ರಯುಕ್ತ ಆಯೋಜಿಸಿದ್ದ ರಾಜ್ಯ ಮಟ್ಟದ ಭಾಷಣ ಸ್ಪರ್ಧೆಯಲ್ಲಿ ತಾಲೂಕಿನ ವಿದ್ಯಾರ್ಥಿನಿ ಸಾಧನೆ ಮಾಡಿದ್ದಾಳೆ. ನವ ಭಾರತದ ನಿರ್ಮಾಣದಲ್ಲಿ ಜವಾಹರಲಾಲ್ ನೆಹರು ಕೊಡುಗೆ ಎಂಬ ವಿಷಯದ ಬಗ್ಗೆ ನಡೆದ ಉತ್ತರ ಕನ್ನಡ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯಲ್ಲಿ ಅಂಕೋಲಾ ತಾಲೂಕಿನ ಹೆಗ್ಗಾರ(ಪು) ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ನವ್ಯಾ ರಾಘವೇಂದ್ರ ಗಾಂವ್ಕರ್ ಶೆವ್ಕಾರ್ ಜಿಲ್ಲೆಗೆ ಮೊದಲ ಸ್ಥಾನ ಪಡೆಯುವ ಮೂಲಕ ಶಾಲೆಗೆ, ಊರಿಗೆ ಕೀರ್ತಿ ತಂದಿರುತ್ತಾಳೆ. ರಾಜ್ಯ ಮಟ್ಟಕ್ಕೂ ಆಯ್ಕೆಯಾಗಿರುತ್ತಾಳೆ. ಇವಳು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿಯೂ, ಚೆಸ್ ನಲ್ಲೂ ಕೂಡ ಪ್ರತಿಭಾವಂತ ವಿದ್ಯಾರ್ಥಿನಿ. ಇವಳು ಶೆವ್ಕಾರಿನ ರಾಘವೇಂದ್ರ ಗಾಂವ್ಕರ್ ಹಾಗೂ ಭಾಗೀರಥಿ ಗಾಂವ್ಕರ್ ಇವರ ಮಗಳು.ಇವಳ ಸಾಧನೆಗೆ ಶಾಲೆಯ ಮುಖ್ಯೋಧ್ಯಾಪರಾದ ಗಣೇಶ ಭಟ್ಟ ಹಳವಳ್ಳಿ, ಹೆಗ್ಗಾರ ಶಾಲಾ ಎಸ್ ಡಿ ಎಂ ಸಿ ಅಧ್ಯಕ್ಷ ನಾರಾಯಣ ಭಾಗ್ವತ್, ಸಹ ಶಿಕ್ಷಕರು, ಎಸ್ ಡಿ ಎಂ ಸದಸ್ಯರು, ಊರ ನಾಗರಿಕರು ಹರ್ಷವನ್ನು ವ್ಯಕ್ತಪಡಿಸಿದ್ದಾರೆ.

# ಅಂಕೋಲಾ ಪೊಲೀಸರ ಕರ್ತವ್ಯಪ್ರಜ್ಞೆ ಜನಶಕ್ತಿ ಸಂಘದಿಂದ ಗೌರವ

## ಪಾದಚಾರಿಗೆ ಡಿಕ್ಕಿ ಹೊಡೆದು ನಾಪತ್ತೆಯಾಗಿದ್ದ ಕಾರು ಮಹಾರಾಷ್ಟ್ರದಲ್ಲಿ ಪತ್ತೆ



**● ತತ್ತ್ವನಿಷ್ಠ, ಅಂಕೋಲಾ:** ಪಾದಚಾರಿಯನ್ನು ಅಪಘಾತಪಡಿಸಿ ನಾಪತ್ತೆಯಾಗಿದ್ದ ಕಾರನ್ನು ಮಹಾರಾಷ್ಟ್ರದಿಂದ ಪತ್ತೆ ಹಚ್ಚಿ ತಂದು ಬಡ ಕುಟುಂಬಕ್ಕೆ ನ್ಯಾಯ ಒದಗಿಸಿದ ಸಿಪಿಐ ಚಂದ್ರಶೇಖರ ಮಠಪತಿ ನೇತೃತ್ವದ ತಂಡವನ್ನು ಜನಶಕ್ತಿ ವೇದಿಕೆಯಿಂದ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿತು.

ಈ ಪ್ರಕರಣದದ ಪತ್ತೆ ಕಾರ್ಯದಲ್ಲಿ ವಿಶೇಷವಾಗಿ ಕರ್ತವ್ಯ ನಿರ್ವಹಿಸಿದ ಸಿಪಿಐ ಚಂದ್ರಶೇಖರ ಮಠಪತಿ ಪಿಎಸೈ ಸುನೀಲ ಹುಲ್ಲೋಳ್ಳಿ, ಎಎಸೈ ಮಹಾಬಲೇಶ್ವರ ಗಡೇರ ಹಾಗೂ ಹವಾಲ್ದಾರ ಮೋಹನ ಗೌಡರನ್ನು ಗೌರವಿಸಲಾಯಿತು.

ಜನಶಕ್ತಿ ವೇದಿಕೆಯ ಜಿಲ್ಲಾಧ್ಯಕ್ಷ ಮಾಧವ ನಾಯಕ ಮಾತನಾಡಿ, ಇತ್ತೀಚಿಗೆ ಬೊಳೆಯ ಜಮಗೋಡದಲ್ಲಿ ದಲಿತ ಕುಟುಂಬದ ಚಂದ್ರಹಾಸ ಆಗೇರ ಅವರಿಗೆ ಕಾರೊಂದು ಅಪಘಾತಪಡಿಸಿ ನಾಪತ್ತೆಯಾಗಿತ್ತು. ಅತ್ಯಂತ ಕ್ಲಿಷ್ಟಕರವಾದ ಪಕರಣವನ್ನು ನಾನಾ ಆಯಾಮಗಳಲ್ಲಿ ಪೊಲೀಸರು ತನಿಖೆ ನಡೆಸಿ ಅಂತೂ ಮಹಾರಾಷ್ಟ್ರದಲ್ಲಿ ಕಾರನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇದರಿಂದಾಗಿ ಕಡು ಬಡ ಕುಟುಂಬಕ್ಕೆ ನ್ಯಾಯ ದೊರಕಿದಂತಾಗಿದೆ.

**ಬ್ಯಾಂಕ್ ವಂಚಕ ಅರೆಸ್ಟ್:** ಹಾಗೆ ಲಾರಿ ಖರೀದಿಯ ಮೇಲೆ ಖಾಸಗಿ ಬ್ಯಾಂಕಗಳಲ್ಲಿ ಸಾಲ ಮಾಡಿ ಸ್ಥಳೀಯರ ಜಾಮೀನು ಭದ್ರತೆಯನ್ನು ಪಡೆದು, ಸಾಲ ಪಡೆದ ಲಾರಿಗಳನ್ನೆ ಮಾರಿ ಸ್ಥಳೀಯ ಜಾಮೀನುದಾರರಿಗೆ ಹಾಗೂ ಖಾಸಗಿ ಬ್ಯಾಂಕಗಳಿಗೆ ಮೋಸ ಮಾಡಿ ಕಳೆದ ಹಲವಾರು ವರ್ಷಗಳಿಂದ ತಲೆ ಮರೆಸಿಇಕೊಂಡಿದ್ದ ಆರೋಪಿ ನಜೀರ್ ಅಹಮ್ಮದ ಅವರನ್ನು ಹಿಡಿದು ತರುವಲ್ಲಿ ಅಂಕೋಲಾ ಪೊಲೀಸರ ಕಾರ್ಯ ಮಾದರಿಯಾಗಿದೆ. ಇಂತಹ ದಕ್ಷ ಅಧಿಕಾರಿಗಳಿಂದ ಅನೇಕ ಪ್ರಕರಣಗಳು ಪತ್ತೆಯಾಗುವಲ್ಲಿ ಸಹಕಾರಿಯಾಗಿದೆ. ಈ ಹಿನ್ನಲೆಯಲ್ಲಿ ಅಂಕೋಲಾ ಸಿಪಿಐ ಚಂದ್ರಶೇಖರ ಮಠಪತಿ ಅವರ ನೇತೃತ್ವದ ತಂಡವನ್ನು ಜನಶಕ್ತಿ ವೇದಿಕೆ ಅಭಿನಂದಿಸಿ ಸನ್ಮಾನಿಸಿದೆ ಎಂದರು.

> **ಚಂದ್ರಹಾಸ ಆಗೇರ ಅವರ ಸಾವು ಅಮಾನವೀಯವಾಗಿದೆ. ಅವರಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ಸಿಗದೇ ಸಾವನ್ನು ಕಾಣುವಂತಾಗಿದೆ. ಮೆಡಿಕಲ್ ಎಮರ್ಜೆನ್ಸಿಯ ಸೌಲಭ್ಯ ಅವರಿಗೆ ಸಿಗದೇ ಇರುವದು ದೌರ್ಭಾಗ್ಯವೆ ಸರಿ. ಈ ಬಗ್ಗೆ ನಾನು ನ್ಯಾಯಾಲಯದ ತನಿಖೆಗಾಗಿ ಮನವಿ ಮಾಡುತ್ತಿದ್ದೇನೆ.**
>
> **● ಮಾಧವ ನಾಯಕ, ಜಿಲ್ಲಾಧ್ಯಕ್ಷ ಜನಶಕ್ತಿ ವೇದಿಕೆ**

ಈ ಸಂದರ್ಭದಲ್ಲಿ ಜನಶಕ್ತಿ ವೇದಿಕೆಯ ತಾಲೂಕಾಧ್ಯಕ್ಷ ನಿತ್ಯಾನಂದ ನಾಯ್ಕ , ಪ್ರಮುಖರಾದ ವಿಜಯಕುಮಾರ ನಾಯ್ಕ , ಸುರೇಶ ನಾಯ್ಕ , ನಿತ್ಯಾನಂದ ನಾಯ್ಕ , ಸುರೇಶ ನಾಯ್ಕ , ಸಂದೇಶ ನಾಯ್ಕ , ಸುಂಮತ ನಾಯ್ಕ , ಗಫರ್, ನೂರ ಭಾಷಾ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

# ಕನ್ನಡ ಕಾರ್ತಿಕ ಕಾರ್ಯಕ್ರಮ



**● ತತ್ತ್ವನಿಷ್ಠ, ಯಲ್ಲಾಪುರ:** ಯಾಂತ್ರಿಕ ಬದುಕಿನ ಒತ್ತಡದಲ್ಲಿ ಸಾಹಿತ್ಯ ಪ್ರೀತಿ ಕಾಳಜಿ ಕ್ಷೀಣಿಸುತ್ತಿರುವುದು ದುರದೃಷ್ಟಕರ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಆರ್ ಡಿ ಜನಾರ್ದನ ಹೇಳಿದರು.

ಅವರು ಬುಧವಾರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಭವನದಲ್ಲಿ ಜಿಲ್ಲಾ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಕನ್ನಡ ಕಾರ್ತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಾಹಿತ್ಯಕ್ಕೆ ಸಮಾಜ ಪರಿವರ್ತನೆಯ ಶಕ್ತಿ ಇದೆ. ಸಾಹಿತ್ಯ ಆಸ್ವಾದನೆಯಿಂದ ಮಾನಸಿಕ ನೆಮ್ಮದಿ ಮೂಡಲು ಸಾಧ್ಯ. ಸಾಹಿತ್ಯವನ್ನು ಅನುಭವಿಸುತ್ತ ಓದುವುದರಿಂದ ಕೃತಿಕಾರ ರೂಪಿಸಿದ ಪಾತ್ರಗಳಲ್ಲಿನ ಜೀವಂತಿಕೆ ಅರಿತು ಪರಿಪೂರ್ಣ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯ ಎಂದರು.

ಅರ್ಥಧಾರಿ ಎಂ ಎನ್ ಹೆಗಡೆ ಹಳವಳ್ಳಿ ಯಕ್ಷಗಾನ ಪ್ರಸಂಗಗಳು ಹಾಗೂ ಕನ್ನಡ ಸಾಹಿತ್ಯ ಕುರಿತು ಉಪನ್ಯಾಸ ನೀಡಿ, ಯಕ್ಷಗಾನ ಲೋಕಜ್ಞಾನ ನೀಡುವ ಕಲೆಯಾಗಿದೆ.

ಸಾಹಿತ್ಯ ಪ್ರದರ್ಶನವಾಗಿ ಪರಿವರ್ತಿತವಾದ ಕಲೆ. ಕನ್ನಡ ಭಾಷೆ ಅತ್ಯಂತ ಶುದ್ಧವಾಗಿರುವುದು ಯಕ್ಷಗಾನದಲ್ಲಿ ಮಾತ್ರ.

ಇಲ್ಲಿ ಕಟ್ಟುನಿಟ್ಟಾಗಿ ಕನ್ನಡ ಭಾಷೆಯ ಶಬ್ದಗಳನ್ನು ಮಾತ್ರ ಬಳಸಲಾಗುತ್ತಿದೆ. ಪ್ರಸಂಗ ಸಾಹಿತ್ಯದ ಕುರಿತು ಸಾಹಿತ್ಯ ಚರಿತ್ರೆಯಲ್ಲಿ ಯಕ್ಷಗಾನ ಕವಿಗಳ ಉಲ್ಲೇಖ ಮಾಡದೇ ನಿರ್ಲಕ್ಷಿಸಲಾಗಿದೆ ಎಂದರು.

ಕಸಾಪ ತಾಲೂಕು ಅಧ್ಯಕ್ಷ ವಿದ್ವಾನ್ ಸುಬ್ರಹ್ಮಣ್ಯ ಭಟ್ಟ ಕನೇನಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ತಾಲೂಕಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ ಎಸ್ ಭಟ್ಟ ಆನಗೋಡ, ಉಪನ್ಯಾಸಕ ಓಂಪ್ರಕಾಶ, ಕಸಾಪ ಗೌರವ ಕಾರ್ಯದರ್ಶಿ ಸಂಜೀವಕುಮಾರ ಹೊಸ್ಕೇರಿ ಉಪಸ್ಥಿತರಿದ್ದರು.

ನಂದಿತಾ ಸಂಗಡಿಗರು ಪ್ರಾರ್ಥಿಸಿದರು. ಕ.ಸಾ.ಪ ಗೌರವ ಕಾರ್ಯದರ್ಶಿ ಜಿ.ಎನ್.ಭಟ್ಟ ತಟ್ಟಿಗದ್ದೆ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಕೀನಾ ನಿರ್ವಹಿಸಿದರು.

# ಉಂಚಳ್ಳಿ ಶಾಲೆಯಲ್ಲಿ ಸಾಮಾಜಿಕ ಪರಿಶೀಲನಾ ಸಭೆ ಯಶಸ್ವಿ



**● ತತ್ತ್ವನಿಷ್ಠ, ಸಿದ್ದಾಪುರ:** ಹೆಗ್ಗರಣಿ ಪಂಚಾಯತ್ ವ್ಯಾಪ್ತಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಉಂಚಳ್ಳಿ (ಮಾಸ್ತಿಬೈಲ್) ಮತ್ತು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಉಂಚಳ್ಳಿಯಲ್ಲಿ 2025–26 ನೇ ಸಾಲಿನ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಗೆ ಸಂಬಂಧಿಸಿದ ಸಾಮಾಜಿಕ ಪರಿಶೋಧನಾ ಶಾಲಾ ಸಭೆ ಶುಕ್ರವಾರ ಜರುಗಿತು.

ಸಭೆಗೆ ಮುನ್ನ ಕಳೆದ ಎರಡು ದಿನಗಳಿಂದ ಸಾಮಾಜಿಕ ಪರಿಶೋಧನಾ ತಂಡವು 2023–24 ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಯೋಜನೆಯಡಿ ಶಾಲೆಗಳಿಗೆ ಬಂದಿದ್ದ ಅನುದಾನಗಳ ಬಳಕೆ, ಮಕ್ಕಳಿಗೆ ಲಭ್ಯವಾಗುವ ಮೂಲಭೂತ ಸೌಕರ್ಯಗಳು ಮತ್ತು ಅವು ಫಲಾನುಭವಿಗಳಿಗೆ ಸರಿಯಾಗಿ ಮುಟ್ಟಿರುವ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿತ್ತು. ಪರಿಶೀಲನಾ ವರದಿಯನ್ನು ಇಂದು ಶಾಲಾ ಸಭೆಯಲ್ಲಿ ಸಾರ್ವಜನಿಕವಾಗಿ ಮಂಡಿಸಲಾಯಿತು.

ಸಭೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು, ಶಿಕ್ಷಣ ಇಲಾಖಾಧಿಕಾರಿಗಳು, ಗ್ರಾಮ ಪಂಚಾಯತ್ ವಾರ್ಡ್ ಸದಸ್ಯರು, ಪಂಚಾಯತ್ ಕಾರ್ಯದರ್ಶಿ, ಸಾಮಾಜಿಕ ಪರಿಶೋಧನಾ ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗ, ಎಸ್. ಡಿ.ಎಮ್.ಸಿ ಅಧ್ಯಕ್ಷರು ಹಾಗೂ ಸದಸ್ಯರು,



ಪಾಲಕ-ಪೋಷಕರು, ಸಮುದಾಯದವರು, ಶಿಕ್ಷಕರು, ವಿದ್ಯಾರ್ಥಿಗಳು, ಅಡುಗೆಯವರು ಮತ್ತು ಅಂಗನವಾಡಿ ಸಿಬ್ಬಂದಿ ಉಪಸ್ಥಿತರಿದ್ದರು.

ಮಕ್ಕಳ ದಿನಾಚರಣೆ ಪ್ರಯುಕ್ತ ಸಾಮಾಜಿಕ ಪರಿಶೋಧನಾ ತಾಲೂಕ ಘಟಕದ ನಾಗರಾಜ ಹೆಗಡೆ ಮತ್ತು ಅವರ ತಂಡ — ಗ್ರಾಮ ಸಂಪನ್ಮೂಲ ವ್ಯಕ್ತಿಗಳಾದ ನಾಗರಾಜ ದೇವಾಡಿಗ, ದಿವ್ಯಾ ನಾಯ್ಕ , ಕೆ.ಎಲ್. ಸಂತೋಷ, ಗೌಡ ಅವರೊಂದಿಗೆ — ಕಲಿಕೆಯಲ್ಲಿ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗುರುತಿಸಿ ಬಹುಮಾನ ವಿತರಿಸಿ ಅಭಿನಂದಿಸಿದರು.

# ವಾಸುಕಿ ನಾಗದೇವತಾ ಮಂದಿರ ವಾರ್ಷಿಕೋತ್ಸವ

**● ತತ್ತ್ವನಿಷ್ಠ, ಸಿದ್ದಾಪುರ:** ಪಟ್ಟಣದ ಹಾಲದಕಟ್ಟ ನಾಗರಕಟ್ಟ ಪ್ರದೇಶದಲ್ಲಿರುವ ಶ್ರೀ ಕ್ಷೇತ್ರಪಾಲ ಶ್ರೀ ನಾಗದೇವತಾ ಮತ್ತು ಶ್ರೀ ಚೌಡೇಶ್ವರಿ ದೇವರ 16ನೇ ವಾರ್ಷಿಕ ವರ್ದಂತಿ ಉತ್ಸವ ಹಾಗೂ ಸುಬ್ರಹ್ಮಣ್ಯ ಷಷ್ಠಿ ಪ್ರಯುಕ್ತ ಕಾರ್ತಿಕ ದೀಪೋತ್ಸವ ಕಾರ್ಯಕ್ರಮಗಳು ನ.26ರಂದು



ವೈಭವಯುತವಾಗಿ ಜರುಗಲಿವೆ ಎಂದು ಮಂದಿರದ ಆಡಳಿತ ಮಂಡಳಿ ತಿಳಿಸಿದೆ.

ಕಾರ್ಯಕ್ರಮಗಳು ಬೆಳಿಗ್ಗೆ 7.35ಕ್ಕೆ ಇಂದ್ರ ಪ್ರತಿಷ್ಠೆ, ನಾಂದಿ, ಧ್ವಜಾರೋಹಣ ಮತ್ತು ತೋರಣ ಮಹೂರ್ತದೊಂದಿಗೆ ಆರಂಭವಾಗಲಿವೆ. ನಂತರ 8.15ಕ್ಕೆ ಪುಣ್ಯವಾಚನ, ಸ್ಥಳಶುದ್ಧಿ , ಕಳಶ ಸ್ಥಾಪನೆ, ಮಹಾಭಿಷೇಕ ಕಾರ್ಯಕ್ರಮಗಳು ನಡೆಯಲಿವೆ. 10.15ರಿಂದ ಕಲಾವೃದ್ಧಿ ಹವನ, ನವಗ್ರಹ ಶಾಂತಿ, ನಾಗಾರಾಧನೆ ಹಾಗೂ ಸುಬ್ರಹ್ಮಣ್ಯ ಹೋಮ ನೆರವೇರಲಿದೆ. ಇದೇ ವೇಳೆ 8.45ರಿಂದ ಸಾಮೂಹಿಕ ಶ್ರೀ ಸತ್ಯನಾರಾಯಣ ವ್ರತ ನಡೆಯಲಿದೆ.

ಮಧ್ಯಾಹ್ನ 12.31ಕ್ಕೆ ಪೂರ್ಣಾಹುತಿ, ಕುಂಕುಮಾರ್ಚನೆ, ಉಡಿ ಸೇವೆ, ಮಹಾಮಂಗಳಾರತಿ ಹಾಗೂ ಪ್ರಸಾದ ವಿತರಣೆ ನಡೆಯಲಿದ್ದು , 2.15ಕ್ಕೆ ಭಕ್ತರಿಗಾಗಿ ಮಹಾ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿದೆ.

ಸಂಜೆ 5 ಗಂಟೆಗೆ ಲಲಿತಾ ಸಹಸ್ರನಾಮ ಪಠಣ, 6 ಗಂಟೆಗೆ ಮಹಿಳಾ ಮಂಡಳಿಯಿಂದ ಭಜನೆ, 7 ಗಂಟೆಗೆ ಕಾರ್ತಿಕ ದೀಪೋತ್ಸವ, ಸನ್ಮಾನ, ಅಷ್ಟಾವಧಾನ ಸೇವೆಯಲ್ಲಿ ನೃತ್ಯಸೇವೆ, ಹರಾಜು ಕಾರ್ಯಕ್ರಮ ಮತ್ತು ಪುರೋಹಿತರ ಸನ್ಮಾನ ನಡೆಯಲಿದೆ. ನಂತರ ಮಹಾಮಂಗಳಾರತಿ ಮತ್ತು ಪ್ರಸಾದ ವಿತರಣೆ ಮೂಲಕ ಕಾರ್ಯಕ್ರಮಗಳು ಸಮಾರೋಪಗೊಳ್ಳಲಿವೆ.

ಈ ಸಕಲ ಧಾರ್ಮಿಕ ವಿಧಿಗಳು ವೇದಮೂರ್ತಿ ಮೋಹನ್ ಕುಮಾರ್ ಜೈನ್ (ಬಿದರುರು–ಕಾರ್ಗಲ್), ವೇದಮೂರ್ತಿ ದಿನೇಶ್ ಭಟ್ (ಬೇಡ್ಕಣಿ), ಮತ್ತು ದಿನೇಶ್ ಭಟ್ (ಕೊನಳ್ಳಿ ) ಮಾರ್ಗದರ್ಶನದಲ್ಲಿ ನೆರವೇರಲಿವೆ.

## ವಲಯ ಮಟ್ಟದ ಪ್ರತಿಭಾ ಕಾರಂಜಿ

# ಕಲೆಯನ್ನು ಗುರುತಿಸಲು ಪ್ರತಿಭಾ ಕಾರಂಜಿ ಮಹತ್ವಪೂರ್ಣ ವೇದಿಕೆ



**● ತತ್ತ್ವನಿಷ್ಠ, ದಾಂಡೇಲಿ:** ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರ ಹಳಿಯಾಳ ಮತ್ತು ಕನ್ಯಾ ವಿದ್ಯಾಲಯ ಪ್ರೌಢಶಾಲೆಯಲ್ಲಿ ಇವರ ಸಂಯುಕ್ತ ಆಶ್ರಯದಡಿ ಕನ್ಯಾ ವಿದ್ಯಾಲಯ ಪ್ರೌಢಶಾಲೆಯಲ್ಲಿ ವಲಯ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕಸಾಪ ಜಿಲ್ಲಾಧ್ಯಕ್ಷ ಬಿ.ಎನ್. ವಾಸರೆ ವಿದ್ಯಾರ್ಥಿಗಳ ಪ್ರತಿಭೆಗಳನ್ನು ಗುರುತಿಸಲು ಪ್ರತಿಭಾ ಕಾರಂಜಿ ಅತ್ಯಂತ ಮಹತ್ವಪೂರ್ಣವಾದ ವೇದಿಕೆ. ಕಲೆ ಇದ್ದಲ್ಲಿ ಸಂಸ್ಕೃತಿ ಸದೃಢವಾಗಿರುತ್ತದೆ. ಸಂಸ್ಕೃ ಇದ್ದಲ್ಲಿ ಸೌಹಾರ್ದತೆಯ ವಾತಾವರಣ ನಿರ್ಮಾಣವಾಗಲು ಸಾಧ್ಯ. ಪಾಲಕರು ತಮ್ಮ ಮಕ್ಕಳನ್ನು ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸಲು ಸದಾ ಪ್ರೇರೇಪಿಸಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ಎಸ್. ಎಸ್. ನೂಲಿನ್, ಹಳೆದಾಂಡೇಲಿ ಸರಕಾರಿ ಉರ್ದು ಪ್ರೌಢಶಾಲೆಯ ಮುಖ್ಯೋಪಾಧ್ಯಯ ಅಬ್ದುಲ್ ರೆಹಮಾನ್ ಅವರು ಮಕ್ಕಳ ಪ್ರತಿಭೆಗೆ ಸೂಕ್ತ ನ್ಯಾಯ ಕಲ್ಪಿಸುವ ವ್ಯವಸ್ಥೆಯನ್ನು ಪ್ರತಿಭಾ ಕಾರಂಜಿಯಲ್ಲಿ ಅಳವಡಿಸಲಾಗಿದೆ. ಮಕ್ಕಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದೇ ಈ ಕಾರ್ಯಕ್ರಮದ ಮುಖ್ಯ ಆಶಯವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕನ್ಯಾ ವಿದ್ಯಾಲಯ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯೆನಮಿತಾ ನಾರ್ವೇಕರ ಅವರು ವಿದ್ಯಾರ್ಥಿಗಳು ಪಾಠದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಪ್ರತಿಭಾ ಕಾರಂಜಿ ಪ್ರೇರಣಾದಾಯಕವಾಗಿದೆ ಎಂದರು.

ವೇದಿಕೆಯಲ್ಲಿ ಕನ್ಯಾ ವಿದ್ಯಾಲಯ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಕಾರ್ಯದರ್ಶಿ ರಾಜೇಂದ್ರ ಕೋಡ್ಕಣಿ, ಅರುಣ್ ನಾರ್ವೇಕರ, ಕನ್ಯಾ ವಿದ್ಯಾಲಯ ಪಿಯು ಕಾಲೇಜಿನ ಪ್ರಾಚಾರ್ಯ ಹನುಮಂತ ಕುಂಬಾರ, ಜನತಾ ವಿದ್ಯಾಲಯ ಪ್ರೌಢಶಾಲೆಯ ಪ್ರಭಾರಿ ಮುಖ್ಯೋಧ್ಯಾಯ ಎಂ.ಬಿ. ಅರವಳ್ಳಿ, ಉಪನ್ಯಾಸಕ ಶಿವಾಜಿ ಜೋಮಣ್ಣನವರ, ಸಿ.ಆರ್.ಪಿಗಳಾದ ಲಲಿತಾ, ಶ್ರೀದೇವಿ ಮೊದಲಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕನ್ಯಾ ವಿದ್ಯಾಲಯ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಕಾರ್ಯದರ್ಶಿ ರಾಜೇಂದ್ರ ಕೋಡ್ಕಣಿ, ಅರುಣ್ ನಾರ್ವೇಕರ ಮತ್ತು ನಮಿತಾ ನಾರ್ವೇಕರ ದಂಪತಿಗಳನ್ನು, ಸಿ.ಆರ್. ಪಿಗಳಾದ ಲಲಿತಾ ಮತ್ತು ಶ್ರೀದೇವಿ ಹಾಗೂ ಶಾಲಾ ಮುಖ್ಯೋಪಾಧ್ಯಯ ಬಿಜು ನಾಯ್ಕ ಅವರನ್ನು ಸನ್ಮಾನಿಸಲಾಯ್ತು.

ಕನ್ಯಾ ವಿದ್ಯಾಲಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಬಿಜು ನಾಯ್ಕ ಸ್ವಾಗತಿಸಿದ ಕಾರ್ಯಕ್ರಮಕ್ಕೆ ಶಿಕ್ಷಕಿ ರೂಪಾ ಭಜಂತ್ರಿ ವಂದಿಸಿದರು. ಶಿಕ್ಷಕ ಮಹಾಂತೇಶ ಹಿರೇಮಠ ಕಾರ್ಯಕ್ರಮವನ್ನು ನಿರೂಪಿಸಿದರು.

# ಅಪರಿಚಿತ ಗ್ರಾಹಕರ ಮೇಲೆ ನಿಗಾ ವಹಿಸಿ



**● ತತ್ತ್ವನಿಷ್ಠ, ಶಿರಸಿ:** ಶಿರಸಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಜ್ಯುವೇಲರಿ ಶಾಪ್‌ಗಳ ಭದ್ರತೆ ಹಾಗೂ ಸುರಕ್ಷತೆ ಹಿತದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಠಾಣೆಯ ಗಣಪತಿ ಭವನದಲ್ಲಿ ಡಿಎಸ್‌ಪಿ ಗೀತಾ ಪಾಟೀಲ್ ಅಧ್ಯಕ್ಷತೆಯಲ್ಲಿ ಸಭೆ ಹಮ್ಮಿಕೊಂಡು ಕೆಲವು ಅಗತ್ಯ ಸಲಹೆ-ಸೂಚನೆ ನೀಡಲಾಯಿತು.

ಡಿಎಸ್‌ಪಿ ಗೀತಾ ಪಾಟೀಲ್ ಮಾತನಾಡಿ, ಜ್ಯುವೇಲರಿ ಶಾಪ್‌ಗಳಲ್ಲಿ ಅತ್ಯಾಧುನಿಕ ಸಿಸಿ ಕ್ಯಾಮೆರಾ, ಭದ್ರವಾದ ಲಾಕರ್ ಅಳವಡಿಸಬೇಕು. ಸೆಕ್ಯೂರಿಟಿ ಗಾಡ್‌ಗಳನ್ನು ಕಡ್ಡಾಯವಾಗಿ ನೇಮಕಗೊಳಿಸಬೇಕು. ಬರ್ಗುಲರ್ ಅಲರಾಂ, ಸೆನ್ಸಾರ್ ಮೋಷನ್ ಲೈಟ್ಗಳು, ಫೇಸ್ ರಿಕಾಗ್ನೈಸರ್ ಕ್ಯಾಮೆರಾ ಅಳವಡಿಕೆ ಮಾಡಬೇಕು. ಜ್ಯುವೇಲರಿ ಶಾಪ್‌ಗಳಿಗೆ ಬರುವ ಅಪರಿಚಿತ ಗ್ರಾಹಕರ ಮೇಲೆ ನಿಗಾ ವಹಿಸಬೇಕಿದ್ದು , ಸಂಶಯಾಸ್ಪದ ವ್ಯಕ್ತಿಗಳ ಕುರಿತು, ಬಂಗಾರ, ಬೆಳ್ಳಿ, ಉಂಗುರ, ಮೂರ್ತಿ, ಸರ ಇತ್ಯಾದಿ ಮಾರಾಟ ಮಾಡಲು ಬರುವವರ ಮೇಲೆ ನಿಗಾ ವಹಿಸಿ ಹಾಗೂ ಪೊಲೀಸರಿಗೆ ಮಾಹಿತಿ ರವಾನಿಸಬೇಕು. ಹೆಚ್ಚಿನ ಹಣ, ಬಂಗಾರ ಆಭರಣಗಳನ್ನು ಬ್ಯಾಂಕ್ ಲಾಕರ್ಗೆ ಜಮಾ ಮಾಡುವುದು ಕಡ್ಡಾಯವಾಗಿದೆ. ಕಟ್ಟಡದ ಸುರಕ್ಷತೆ, ಶಾಪ್ ಸುತ್ತಮುತ್ತ ಸಾಕಷ್ಟು ಬೆಳಕು ಇರುವಂತೆ ನೋಡಿಕೊಳ್ಳಬೇಕು ಎಂದರು.

ಶಿರಸಿ ನಗರ ಠಾಣೆ ಪಿಎಸ್‌ಐ ನಾಗಪ್ಪ ಬಿ., ತನಿಖಾ ಪಿಎಸ್‌ಐ ನಾರಾಯಣ ರಾಠೋಡ್ ಮತ್ತಿತರರು ಇದ್ದರು.

## ಸಂಪಾದಕೀಯ

# ಕೆಡುತ್ತಿದೆ ನಂದಿನಿ ತುಪ್ಪ, ಗುಣಮಟ್ಟ ತಪ್ಪದಂತೆ ಕಾಪಾಡಿ

ಕರ್ನಾಟಕದ ಹೆಮ್ಮೆ, ನಂದಿನಿ ಬ್ರಾಂಡ್‌ಗೆ ದೇಶದಾದ್ಯಂತ ಅಪಾರ ಬೇಡಿಕೆ ಇದೆ. ವಿಶೇಷವಾಗಿ ನಂದಿನಿ ತುಪ್ಪವು ಪಾಕ ವೈಭವದ ಅಂಗವಾಗಿ ಮನೆಮಾತಾಗಿದ್ದು, ವಿವಿಧ ರಾಜ್ಯಗಳಿಗೂ ದೊಡ್ಡ ಪ್ರಮಾಣದಲ್ಲಿ ರವಾನೆ ಆಗುತ್ತಿದೆ. ಆದರೆ ಇತ್ತೀಚೆಗೆ ತುಪ್ಪ ಮಾರುಕಟ್ಟೆಯನ್ನು ಕಾಡುತ್ತಿರುವ ನಕಲಿ ಉತ್ಪನ್ನಗಳ ಜಾಲವು ಗ್ರಾಹಕರ ನಂಬಿಕೆಗೆ ದೊಡ್ಡ ಹೊಡೆತ ನೀಡುತ್ತಿದೆ. ತಿರುಪತಿಗೆ ಪ್ರಸಿದ್ಧ ಪ್ರಸಾದವಾದ ಲಡ್ಡು ತಯಾರಿಕೆಗೆ ಒಂದು ಕಾಲದಲ್ಲಿ ಕರ್ನಾಟಕದ ತುಪ್ಪ ಪೂರೈಕೆ ಆಗುತ್ತಿತ್ತು. ಆದರೆ ಟೆಂಡರ್ ಪ್ರಕ್ರಿಯೆಯಲ್ಲಿ ಈ ಅವಕಾಶ ತಪ್ಪಿಹೋಯಿತು. ಆದರೆ ಅಲ್ಲಿಗೆ ಪೂರೈಸುತ್ತಿದ್ದ ತುಪ್ಪ ಸಹ ನಕಲಿ ಎನ್ನುವುದು ಇತ್ತೀಚೆಗೆ ಸಾಬೀತಾದ ಹಿನ್ನೆಲೆ ಮತ್ತೆ ನಂದಿನಿಗೆ ಬೇಡಿಕೆ ಬರುವ ನಿರೀಕ್ಷೆ ಹೊಂದಲಾಗಿತ್ತು. ಆದರೆ ಈಗ ಅದೂ ಸಹ ನಿರಾಸೆಯಾಗಿ ಬದಲಾಗಿದೆ.

ಕೆಎಂಎಫ್ ಮತ್ತು ಟಿಟಿಡಿ ನಡುವಿನ ಬೆಲೆ ಗೊಂದಲ ಮತ್ತು ಟೆಂಡರ್ ಸ್ಪರ್ಧೆಯಿಂದಾಗಿ 2023ರಲ್ಲಿ ನಂದಿನಿ ತುಪ್ಪ ಪೂರೈಕೆ ತಾತ್ಕಾಲಿಕವಾಗಿ ನಿಲ್ಲಿಸಿತ್ತು. ಟಿಟಿಡಿ ಇ-ಟೆಂಡರ್ ಮೂಲಕ ಪೂರೈಕೆದಾರರನ್ನು ಆಯ್ಕೆ ಮಾಡುವ ನಿಯಮ ಪಾಲಿಸಿಕೊಂಡಿರುವುದರಿಂದ ಕೆಎಂಎಫ್‌ಗೆ ನಿರಂತರ ಪೂರೈಕೆಯ ಅವಕಾಶ ಲಭಿಸಿರಲಿಲ್ಲ. ಆದರೆ 2024ರ ಸೆಪ್ಟೆಂಬರ್‌ನಲ್ಲಿ ಟಿಟಿಡಿ 350 ಮೆಟ್ರಿಕ್ ಟನ್ ತುಪ್ಪ ಪೂರೈಕೆಗೆ ಕೆಎಂಎಫ್‌ಗೆ ಅವಕಾಶ ನೀಡಿದ್ದು, ಪೂರೈಕೆ ಪುನಃ ಆರಂಭವಾಗಿದೆ. ಆದರೆ ಈಗ ಅದರ ಮೇಲೂ ನಕಲಿಯ ಕರಿನೆರಳು ಬೀಳುವ ಸಾಧ್ಯತೆ ಇದೆ.

ಈ ಹಿಂದೆ 2022ರಲ್ಲಿ ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರಗಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ನಕಲಿ ನಂದಿನಿ ತುಪ್ಪ, ಬೆಣ್ಣೆ, ಪೇಡಾ ತಯಾರಿಕೆ ಜಾಲ ಪತ್ತೆಯಾಗಿತ್ತು. ಸುಮಾರು 3.5 ಕೋಟಿ ರೂ. ಮೌಲ್ಯದ ನಕಲಿ ಉತ್ಪನ್ನಗಳನ್ನು ವಶಪಡಿಸಿಕೊಳ್ಳಲಾಗಿತ್ತು. 2023–24ರಲ್ಲಿ ಆಹಾರ ಸುರಕ್ಷತಾ ಘಟಕದ ಪರಿಶೀಲನೆಗಳಲ್ಲಿ 120ಕ್ಕೂ ಹೆಚ್ಚು ನಕಲಿ ಹಾಲು-ಹಾಲು ಉತ್ಪನ್ನ ಘಟಕಗಳು ಪತ್ತೆಯಾದದ್ದು ಈ ಅಡ್ಡವ್ಯವಹಾರ ವ್ಯಾಪಕವಾಗಿರುವುದನ್ನು ಸೂಚಿಸುತ್ತದೆ. ಇದೆಲ್ಲಾ ಗಮನಿಸುತ್ತಿದ್ದರೆ, ಕೆಎಂಎಫ್‌ನ ಗಮನ ಕೊಂಚ ಅತ್ತಿತ್ತ ಆದರೂ ನಕಲಿ ಹಾವಳಿ ಹೆಚ್ಚಾಗಲಿದೆ.

ರಾಜ್ಯದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಉತ್ಪಾದನೆ ವರ್ಷದಿಂದ ವರ್ಷಕ್ಕೆ ಏರಿಕೆ ಕಂಡುಬರುತ್ತಿದೆ. 2019ರಲ್ಲಿ ದಿನಕ್ಕೆ 72 ಲಕ್ಷ ಲೀಟರ್ ಇದ್ದ ಹಾಲು ಸಂಗ್ರಹಣೆ 2024ರ ವೇಳೆಗೆ 84–86 ಲಕ್ಷ ಲೀಟರ್‌ಗಳಿಗೆ ಏರಿಕೆಯಾಗಿದೆ. ತುಪ್ಪ, ಬೆಣ್ಣೆ, ಖೋವಾ ಸೇರಿದಂತೆ ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟದಲ್ಲೂ 15–20% ಏರಿಕೆಯಿದೆ. ಬೇಡಿಕೆಯೇ ಹೆಚ್ಚಾಗಿರುವ ಕಾರಣ ನಕಲಿ ಜಾಲಕ್ಕೆ ಮಾರುಕಟ್ಟೆಯಲ್ಲಿ ಅವಕಾಶ ಸಿಕ್ಕಿದೆ. ಇದಕ್ಕೆ ಈಗಲೇ ಕಡಿವಾಣ ಹಾಕದಿದ್ದರೆ ಇತರೆ ರಾಜ್ಯಗಳ ಉತ್ಪನ್ನದ ಮೇಲೆ ಜನ ನಿರೀಕ್ಷೆ ಕಳೆದುಕೊಂಡಂತೆ ಕೆಎಂಎಫ್ ಉತ್ಪನ್ನದ ಮೇಲೂ ಕಳೆದುಕೊಳ್ಳಬೇಕಾಗುತ್ತದೆ.

ಈ ಹಾವಳಿಗೆ ತಡೆಗಟ್ಟಲು ಕೆಎಂಎಫ್ ಕೂಡಲೇ ಹಲವು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಪ್ಯಾಕೇಜಿಂಗ್ ಹೋಲೋಗ್ರಾಂ, ಕ್ಯುಆರ್ ಟ್ರ್ಯಾಕಿಂಗ್ ವ್ಯವಸ್ಥೆ ಕಡ್ಡಾಯವಾಗಬೇಕು. ಮಾರುಕಟ್ಟೆ ಮತ್ತು ಗೋದಾಮು ಮಟ್ಟದಲ್ಲಿ ವಿಶೇಷ ಪರಿಶೀಲನಾ ಪಡೆ ರಚಿಸಬೇಕು. ಸಾರ್ವಜನಿಕರಿಗೆ ನಕಲಿ-ನಿಜ ಉತ್ಪನ್ನಗಳನ್ನು ಗುರುತಿಸುವ ಕುರಿತು ಜಾಗೃತಿ ಮೂಡಿಸಬೇಕು. ಆನ್‌ಲೈನ್ ಮಾರಾಟ ಪ್ಲಾಟ್‌ಫಾರ್ಮ್‌ಗಳಲ್ಲಿ ನಂದಿನಿ ಬ್ರಾಂಡ್ ನಕಲಿ ಜಾಹೀರಾತುಗಳನ್ನು ನಿಗ್ರಹಿಸಬೇಕು. ನಕಲಿ ತಯಾರಕರಿಗೆ ಕಠಿಣ ಶಿಕ್ಷೆಗಾಗುವಂತೆ ಕಾನೂನು ತಿದ್ದುಪಡಿ ಮಾಡಿ ವೇಗವಾದ ಕ್ರಮ ಕೈಗೊಳ್ಳಬೇಕು.

ನಂದಿನಿ ಬ್ರಾಂಡ್ ಎಂದರೆ ಗುಣಮಟ್ಟದ ಭರವಸೆ — ಈ ಹೆಸರು ಮಸಕಾಗದಂತೆ ಕೆಎಂಎಫ್ ಈಗಲೇ ದೃಢವಾದ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಜನನಂಬಿಕೆಯನ್ನು ಕಾಪಾಡುವುದು ಕಾಲದ ಆವಶ್ಯಕತೆಯಾಗಿದೆ.

# ಶ್ರೇಷ್ಠ ಕಾಶಿಯ ದುರಂತ ಇತಿಹಾಸದ ಹಿನ್ನೆಲೆ

**ಸಂಸ್ಕೃತ ವಿದ್ವತ್ಸಾಹಿತ್ಯದ ಅಂತಿಮ ಯುಗದ ಪ್ರಖರ ಪ್ರತಿನಿಧಿ, ಪಂಡಿತರಾಜ ಜಗನ್ನಾಥ (ಆಂಧ್ರ ಮೂಲದ) ಕವಿ, ಸಂಗೀತಗಾರ ಮತ್ತು ವೈಯ್ಯಾಕರಣ ಸೇರಿದಂತೆ ಸಕಲ ಶಾಸ್ತ್ರಗಳಲ್ಲಿ ಅದ್ವಿತೀಯ ಪಾಂಡಿತ್ಯ ಗಳಿಸಿದ್ದ, ದಕ್ಷಿಣದಲ್ಲಿ ಮನ್ನಣೆ ಸಿಗದೆ, "ದಿಲ್ಲಿಯವನಾದರೇನು, ಜಗದೊಡೆಯನಾದರೇನು, ನನ್ನ ಆಕಾಂಕ್ಷೆ ಪೂರೈಸಿದರೆ ಸಾಕು" ಎಂಬ ಸ್ವಾಭಿಮಾನದಿಂದ ಮೊಘಲ್ ದೊರೆ ಷಹಜಹಾನನ ಆಸ್ಥಾನವನ್ನು ಸೇರಿ 'ಪಂಡಿತರಾಜ'ನಾಗಿ ಮೆರೆದರು. ಷಹಜಹಾನನ ಪುತ್ರಿ ಲವಂಗಿಯನ್ನು ಮದುವೆಯಾದ ಕಾರಣದಿಂದಾಗಿ, ವಿರೋಧಿಗಳ ಕುತಂತ್ರದಿಂದಾಗಿ ಧರ್ಮಭ್ರಷ್ಟನೆಂದು ಬಹಿಷ್ಕಾರಕ್ಕೆ ಒಳಗಾದರು. ಕೊನೆಗೆ, ಕಾಶಿಗೆ ಮರಳಿದಾಗಲೂ ಆಶ್ರಯ ಸಿಗದೆ ವೃದ್ಧಾಪ್ಯದಲ್ಲಿ ಕಷ್ಟಪಡಬೇಕಾಗಿ ಬಂತು. ಪಂಡಿತರಾಜ ಜಗನ್ನಾಥರ ಬದುಕು ಕುರಿತ ಪರಿಚಯವನ್ನು ಕೆಲ ಕಂತುಗಳ ರೂಪದಲ್ಲಿ ಓದುಗರಿಗೆ ಅರ್ಪಿಸುತ್ತಿದ್ದೇವೆ.**



✍ ಸದ್ಯೋಜಾತ ಭಟ್ಟ

## ಪುರಾ-ತತ್ತ್ವ

ಸಂಸ್ಕೃತ ಸಾಹಿತ್ಯದ ಸೊಗಡು ಸತ್ವಹೀನವಾಗಿ ದೀಪ್ತವಾಗಿದ್ದ ಪ್ರಕಾಶವು ಆರುವಂತಾದಾಗ ತನ್ನೆರಡೂ ಸಾಹಿತ್ಯಿಕ ಮನಸ್ಸೆಂಬ ಕೈಗಳನ್ನಡ್ಡವಿಟ್ಟು ಮತ್ತೆ ಸಾಹಿತ್ಯವನ್ನು ಬೆಳಗಿಸಿ ಪ್ರಕಾಶಿಸಿದವನು ಪಂಡಿತರಾಜ ಜಗನ್ನಾಥ. ಪ್ರಾಯಶಃ ಸಂಸ್ಕೃತ ವಿದ್ವತ್ಸಾಹಿತ್ಯದ ಅಂತಿಮಯುಗದ ಅತಿಪ್ರಸಿದ್ಧ ಸಾಹಿತ್ಯಿಕ ಪ್ರತಿನಿಧಿ. ಈತ ಕವಿಯೂ ಹೌದು, ಸಂಗೀತಗಾರನೂ ಹೌದು, ಪೂರ್ವ ಮೀಮಾಂಸಾ ತರ್ಕ-ವಿತರ್ಕ, ವೈಯ್ಯಾಕರಣ, ವೇದಾಂತ, ವೈಶೇಷಿಕ, ವಿಶೇಷಣನ್ಯಾಯ, ಶಾಸ್ತ್ರಾಲಂಕಾರಗಳ ಅದ್ವಿತೀಯ ವಿದ್ವನ್ಮಣಿಯೂ ಆಗಿದ್ದ. ಮೂಲತಃ ಆಂಧ್ರಪ್ರದೇಶದ ಪೂರ್ವ ಗೋದಾವರಿಯ ಅಮಲಾಪುರದ ಸಮೀಪದ ಬಳಿಯಣ ಅಥವಾ ಮುಂಗಡದವನು. ಉಪದ್ರಷ್ಟವಾರ ಎಂದು ಮನೆಯ ಹೆಸರು. ತಂದೆ ಪೇರು ಭಟ್ಟ, ತಾಯಿ ಮಹಾಲಕ್ಷ್ಮಿ. ದಕ್ಷಿಣದಲ್ಲೆಲ್ಲೂ ತನ್ನ ವಿದ್ವತ್ತಿಗೆ ಮನ್ನಣೆ ದೊರೆಯದಿದ್ದಾಗ ತನ್ನ ಅವಸ್ಥೆಯನ್ನು ನೆನೆದು ಮರುಗುತ್ತಾ ಮಾರ್ಮಿಕವಾಗಿ

ದಿಲ್ಲೀಶ್ವರೋ ವಾ ಜಗದೀಶ್ವರೋ ವಾ **ಮನೋರಥಾನ್ ಪೂರಯಿತುಂ ಸಮರ್ಥಃ |**
**ಅನ್ಯೈಃ ನೃಪಾಲೈಃ ಪರಿದೀಯಮಾನಂ ಶಾಕಾಯ ವಾ ಸ್ಯಾತ್ ಲವಣಾಯ ವಾ ಸ್ಯಾತ್ ||**

"ದಿಲ್ಲಿಯವನಾದರೇನು, ಜಗದೊಡೆಯನಾದರೇನು ನನ್ನ ಮನಸ್ಸಿನಲ್ಲಿ ಉಂಟಾಗಿರುವ ಅಭಿಲಾಷೆಯನ್ನು ಪೂರೈಸುವವನಾದರೆ ಸಾಕು. ಉಪ್ಪಿಗೆ ಸಾಕಾದರೆ ಸೊಪ್ಪಿಗೆ ಸಾಕಾಗುವುದಿಲ್ಲವೆಂದು ನುಡಿಯುತ್ತಾನೆ."

ಮುಂದೆ ಮೊಘಲ್ ರಾಜ ಷಹಜಹಾನನÀ ಆಸ್ಥಾನದಲ್ಲಿ 'ಪಂಡಿತರಾಜ'ನಾಗಿ, 'ಕವೀಶ್ವರ'ನಾಗಿ, 'ಸಂಗೀತಕಲಾಸುಧಾನಿಧಿ'ಯಾಗಿ ಮನ್ನಣೆ ಪಡೆದ ಮಹಾಸ್ವಾಭಿಮಾನಿ ಎನ್ನಿಸಿಕೊಳ್ಳುತ್ತಾನೆ. ತನ್ನ ಆಶ್ರಯದಾತ ಮೊಘಲ್ ದೊರೆಯ ಭಾವ ಅಸಫ್‌ಖಾನನನ್ನು ಹೊಗಳಿ ಬರೆದ 'ಅಸಫ್ ವಿಲಾಸ', ಮೇವಾಡದ ಜಗತ್‌ಸಿಂಗನ ಕುರಿತಾದ 'ಜಗದಾಭರಣ', ಕಾಮರೂಪದ ಪ್ರಾಣನಾರಾಯಣನ ನೆನಪಲ್ಲಿ ರಚಿಸಿದ 'ಪ್ರಾಣಾಭರಣ', ಗಂಗಾ-ಯಮುನಾ-ವಿಷ್ಣು-ಲಕ್ಷ್ಮಿಯರ ಸ್ತುತಿಯಾದ 'ಗಂಗಾಲಹರಿ', 'ಅಮೃತಲಹರಿ', 'ಕರುಣಾಲಹರಿ' ಮತ್ತು 'ಲಕ್ಷ್ಮಿಲಹರಿಗಳು', ಮುಕ್ತಕಗಳ ಸಂಗ್ರಹ. 'ಭಾಮಿನೀವಿಲಾಸ' ಅಲಂಕಾರಶಾಸ್ತ್ರ, ವ್ಯಾಕರಣೇತ್ಯಾದಿ ಸಕಲ ಕ್ಷೇತ್ರಗಳಲ್ಲಿಯೂ ಸಾಹಿತ್ಯದ ಕೃಷಿಮಾಡಿ 14ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸುತ್ತಾನೆ. ತನ್ನ ಸಮಕಾಲೀನ ಕವಿಗಳ ಮಧ್ಯದಲ್ಲಿ ಸವ್ಯಸಾಚಿ ಎನ್ನಿಸಿಕೊಳ್ಳುತ್ತಾನೆ. ಸಂಸ್ಕೃತ ಭಾಷಾಸಾಹಿತ್ಯದಲ್ಲಿ ಆನಂದವರ್ಧನನ 'ಧ್ವನ್ಯಾಲೋಕ'ಕ್ಕೆ ಸರಿಸಮನಾಗಿ ನಿಲ್ಲ ಬಲ್ಲ ಇನ್ನೊಂದು ಕೃತಿಯಿದ್ದರೆ ಅದು ಜಗನ್ನಾಥನ 'ರಸಗಂಗಾಧರ'ವೊಂದೇ. ತನ್ನ ಅಪ್ರತಿಮ ಪಾಂಡಿತ್ಯದಿಂದ ಮಹಾ ಮಹಾ ವಿದ್ವಾಂಸರನ್ನೆಲ್ಲ ಸೋಲಿಸಿ ಶಾಸ್ತ್ರೀಯ ಸಿದ್ಧಾಂತಗಳನ್ನೆಲ್ಲ ಖಂಡಿಸಿ ಗ್ರಂಥಗಳನ್ನು ಬರೆದ. `ಸಿದ್ಧಾಂತ ಕೌಮುದೀ' ಎನ್ನುವ ಗ್ರಂಥಕ್ಕೆ ಭಟ್ಟೋಜಿ ದೀಕ್ಷಿತರು ಬರೆದ `ಮನೋರಮಾ' ಎನ್ನುವ ವ್ಯಾಖ್ಯಾನಗ್ರಂಥಕ್ಕೆ ಪ್ರತಿಯಾಗಿ `ಮನೋರಮಾ ಕುಚಮರ್ದನ' ಎನ್ನುವ ಗ್ರಂಥವನ್ನೂ, ಅಪ್ಪಯ್ಯ ದೀಕ್ಷಿತರ 'ಚಿತ್ರಮೀಮಾಂಸ'ಕ್ಕೆ 'ಚಿತ್ರಮೀಮಾಂಸಖಂಡನ' ಎಂಬ ಟೀಕೆಯನ್ನೂ ಬರೆದನೆಂದು ಸಂಸ್ಕೃತ ಕವಿ ಚರಿತ್ರೆಯ ಎರಡನೇ ಸಂಪುಟದಲ್ಲಿದೆ. ಹೀಗೆ ಬರೆದು ವಿರೋಧಿಗಳಿಂದ ಉದ್ಧಟರಾಜನೆಂದೂ ಕರೆಸಿಕೊಂಡು ಖ್ಯಾತನಾದ.

ಈತನ ಕುರಿತಾಗಿ ಇನ್ನೊಂದು ಕಥೆ ಇದೆ, ದಿಲ್ಲಿಯ ರಾಜನಾಗಿದ್ದ ಷಹಜಹಾನನ ಆಸ್ಥಾನದಲ್ಲಿದ್ದಾಗ, ಷಹಜಹಾನನ ಮಿತ್ರರಾಜನೊಬ್ಬ ಬರುತ್ತಾನಂತೆ. ಆತ ಬಂದಾಗ ಮೌಲ್ವಿಯ ಜೊತೆ ಈತನ ವಾದ ನಡೆಯುತ್ತಿತ್ತಂತೆ. ಇದನ್ನು ನೋಡಿದ ರಾಜ ಒಂದು ದಿನದ ಮಟ್ಟಿಗಾದರೂ ತನ್ನ ಆಸ್ಥಾನದ ವಿದ್ವಾಂಸನಾಗಲು ಆಹ್ವಾನ ನೀಡುತ್ತಾನೆ. ಆಗ ಮೇಲಿನ ಶ್ಲೋಕದಂತೆ 'ದಿಲ್ಲೀಶ್ವರೋ ವಾ ಜಗದೀಶ್ವರೋ ವಾ ಮನೋರಥಾನ್ ಪೂರಯಿತುಂ ಸಮರ್ಥಃ' ಎಂದು ಹೇಳುತ್ತಾನೆ. ಯಾರಾದರೇನು ಅವಕಾಶ ಸಿಕ್ಕಿದೆಡೆ ಹೋಗುವೆ ಎಂದು ಆಹ್ವಾನ ಸ್ವೀಕರಿಸಿ ಹೋಗುತ್ತಾನೆ.

ಜಗನ್ನಾಥ ಪಂಡಿತ ತನ್ನ ಕವಿತಾ ಸಾಮರ್ಥ್ಯದ ಮೇಲೆ ಅದೆಷ್ಟು ಅಭಿಮಾನಿಯಾಗಿದ್ದನೆಂದರೆ, ತನ್ನ ಕವಿತೆಯೆಯನ್ನು ಕದಿಯಬಹುದು ಎನ್ನುವ ಭಾವನೆ ಇತ್ತು ಎನ್ನುವುದು ಅವನ ಭಾಮಿನೀ ವಿಲಾಸದ **'ದುರ್ವೃತ್ತಾ ಜಾರಜನ್ಮಾನೋ ಹರಿಷ್ಯಂತೀತಿ ಶಂಕಯಾ | ಮದೀಯಪದ್ಯರತ್ನಾನಾಂ ಮಂಜೂಷೈಷಾ ಕೃತಾ ಮಯಾ ||'** ಎನ್ನುವ ಮಾತುಗಳಿಂದಲೇ ಗೊತ್ತಾಗುತ್ತದೆ.

ಕೆಟ್ಟನಡತೆಯ ವೇಶ್ಯಾಪುತ್ರರು ಕದಿಯಬಹುದೆಂಬ ಭಯದಿಂದ ನನ್ನ ಪದ್ಯರತ್ನಗಳ ಈ ಪೆಟ್ಟಿಗೆಯನ್ನು ತಯಾರಿಸಿದ್ದೇನೆ ಎಂದು ವಿರೋಧಿಗಳಿಗೆ ಬೈಗುಳ ಸಲ್ಲಿಸಿಯೇ ಜಗನ್ನಾಥ ತನ್ನ ಸುಪ್ರಸಿದ್ಧ ಮುಕ್ತಕಸಂಗ್ರಹವಾದ 'ಭಾಮಿನಿವಿಲಾಸ'ವನ್ನು ಪ್ರಾರಂಭಿಸುತ್ತಾನೆ.

ಪಂಡಿತರಾಜನ ಬರಹಗಳೇ ಹಾಗೆ ವಿಚಿತ್ರ. "ಬಾವಿಯೇ ತಗ್ಗಿನಲ್ಲಿರುವೆಯೆಂದು ಎಂದೂ ವಿಷಾದ ಪಡದಿರು. ನಿನ್ನಂತರಂಗ ತಿಳಿನೀರಿನಿಂದ ತುಂಬಿದೆ, ನೀನು ಅನ್ಯರ ಗುಣವನ್ನು [ಹಗ್ಗವನ್ನು] ಗ್ರಹಿಸುವೆ." ಎಂದು ಕೀಳರಿಮೆಯಿಂದ ಕುಗ್ಗಿದ ಸದ್ಗುಣಿಗಳಿಗೆ ಒಂದು ಕಡೆ ಸಮಾಧಾನ ಹೇಳಿದರೆ ಇನ್ನೊಮ್ಮೆ. . . .

**``ನೈರ್ಗುಣ್ಯಮೇವ ಸಾಧೀಯೋ ಧಿಗಸ್ತು ಗುಣಗೌರವಮ್''**

ಸದ್ಗುಣಗಳಿಗೆ ಧಿಕ್ಕಾರ, ಗುಣಹೀನತೆಯನ್ನೇ ಸಾಧಿಸಬೇಕು. ಇತರ ಮರಗಳು ನಳನಳಿಸಿದರೆ ಶ್ರೀಗಂಧದ ಮರಗಳು ಕತ್ತರಿಸಲ್ಪಡುತ್ತವೆ ಎಂದು ಕಿಡಿಕಾರುತ್ತಾನೆ. "ನೀಚರ ಮನೆಯಲ್ಲಿ ಸಮೃದ್ಧಿ, ಜ್ಞಾನಿಗಳ ಮನೆಯಲ್ಲಿ ದಾರಿದ್ರ್ಯ ಕೋಲಾಹಲ; ಸತ್ಪುರುಷರು ಅಲ್ಪಾಯುಗಳು, ದುಷ್ಟರಿಗೆ ನೂರಾರು ವರ್ಷದ ಆಯುಷ್ಯ; ನಿನ್ನ ದುರ್ನೀತಿಯನ್ನು ಕಂಡು ಸಿಟ್ಟು ನೆತ್ತಿಗೇರುತ್ತಿದೆ. ಏನು ಮಾಡಲಿ ? ನಾನು ದೀನ, ನೀನು ಜಗದೀಶ" ಎಂದು ಜಗನ್ನಾಥ ಒಂದೆಡೆ ಜಗದೀಶ್ವರನನ್ನೇ ತರಾಟೆಗೆ ತೆಗೆದುಕೊಂಡರೆ ಮತ್ತೊಂದೆಡೆ. . . "ಮಧುರಕೋಮಲಕಾಂತ ಮಂಜುಳ ಕವಿತಾಪಾಠಗಳಿಂದ ತನ್ನ ಆರಾಧ್ಯ ದೈವವನ್ನು ಭಕ್ತಿಪೂರ್ವಕವಾಗಿ ನೆನೆಯುತ್ತಾನೆ." ಇಂಥಹ ಜಗನ್ನಾಥ ಪಂಡಿತನ ಜೊತೆ ಚರ್ಚಿಸಲು ಆಗಿನ ಕಾಲದ ಮಹಾ ಮಹಾಮೇಧಾವಿಗಳೂ ಹೆದರುತ್ತಿದ್ದರಂತೆ. ಪಂಡಿತಕುಲವನ್ನೆಲ್ಲ ಚೆಂಡಾಡಿದ ಮೇಲೂ `ನಖಾನಾಂ ಪಾಂಡಿತ್ಯ ಪ್ರಕಟಯತು ಕಸ್ಮಿನ್?' ಸಿಂಹವು ಮಾಂಸವನ್ನು ಸಿಗಿಯುವಂತೆ ಎದುರಾಳಿಗಳನ್ನು ಸಿಗಿಯುವ ತನ್ನ ಪಾಂಡಿತ್ಯಕ್ಕೆ ಬಲಿಯೇ ಸಿಗುತ್ತಿಲ್ಲವಲ್ಲ ಎಂದು ಒಂದು ಕಡೆ ಹಾಸ್ಯಮಾಡುತ್ತಾನೆ. ಜಯಪುರದಲ್ಲಿ ಓರ್ವ ಮುಸಲ್ಮಾನ ಧರ್ಮಗುರು ಅಲ್ಲಿಯ ಹಿಂದೂ ಪಂಡಿತರನ್ನೆಲ್ಲ ವಾದದಲ್ಲಿ ಸೋಲಿಸಿದ್ದ. ಅವನ ಜೊತೆ ವಾದಕ್ಕೆ ಯಾರೂ ಮುಂದಾಗದಿದ್ದಾಗ ಜಗನ್ನಾಥನು ಅರೇಬಿಕ್‌ನಲ್ಲಿಯೇ ಕುರಾನನ್ನು ಅಭ್ಯಾಸ ಮಾಡಿ ಆ ಧರ್ಮಗುರುವಿನೊಡನೆ ವಾದಮಾಡಿ, ಆತನನ್ನು ಸೋಲಿಸಿದ ಬಳಿಕ, ಜಗನ್ನಾಥನ ಕೀರ್ತಿಯು ದೇಶಾದ್ಯಂತ ಹರಡಿತಂತೆ.

ಈ ಘಟನೆಯ ನಂತರವೇ ಜಗನ್ನಾಥ ಮತ್ತು ಮೊಘಲ್ ದೊರೆ ಷಹಜಹಾನ್ ಇಬ್ಬರೂ ಆಪ್ತಮಿತ್ರರಾದರು.

ಜಗನ್ನಾಥ ಮತ್ತು ಷಹಜಹಾನ್ ಒಮ್ಮೆ ಚದುರಂಗವಾಡುತ್ತಿದ್ದಾಗ ಷಹಜಹಾನನ ಸಾಕುಮಗಳು (ಈಕೆ ಅರಮನೆಯ ಪರಿಚಾರಿಕೆ ಎನ್ನುವ ವಾದವೂ ಇದೆ) ಲವಂಗಿ ರಾಜನಿಗಾಗಿ ಚಿನ್ನದ ಹೂಜಿಯಲ್ಲಿ ನೀರು ತಂದಳಂತೆ. ಅವಳನ್ನು ನೋಡಿದ ಕೂಡಲೇ ಜಗನ್ನಾಥ

**ಇಯಂ ಸುಸ್ತನೀ ಮಸ್ತಕನ್ಯಸ್ತಕುಂಭಾ**
**ಕುಸುಂಭಾರುಣ ಚಾರು ಚೇಲಂ ದಧಾನಾ |**
**ಸಮಸ್ತಸ್ಯ ಲೋಕಸ್ಯ ಚೇತಃಪ್ರವೃತ್ತಿಂ ಗೃಹೀತ್ವಾ**
**ಘಟೇ ಸ್ಥಾಪಯಿತ್ವೇವ ಭಾತಿ ||**

"ಅರುಣವರ್ಣದ ಬಟ್ಟೆಯನ್ನುಟ್ಟು, ತಲೆಯ ಮೇಲೆ ಕಳಶವನ್ನು ಹೊತ್ತ ಈಕೆ ಸಮಸ್ತ ಲೋಕದ ಚೈತನ್ಯವನ್ನೇ ಹೊತ್ತು ತರುತ್ತಿರುವಂತೆ ಹೊಳೆಯುತ್ತಿದ್ದಾಳೆ" ಎನ್ನುತ್ತಾನೆ.

ಈತನ ಪಾಂಡಿತ್ಯವನ್ನು ಕಂಡು ಸಹಿಸಲಾರದ ಇತರ ಜನ ಕಾಯುತ್ತಿದ್ದರು. ಮುಂದೆ ಲವಂಗಿಯನ್ನು ಮದುವೆಯಾದ ಜಗನ್ನಾಥ ಪಂಡಿತನಿಗೆ ಅವರ ಚಿತಾವಣೆಯಂತೆ ಬಹಿಷ್ಕಾರ ಹಾಕಲಾಯ್ತು. ಷಹಜಹಾನನ ಮಗ ದಾರಾಶುಕೋವ್‌ಗೆ ಸಂಸ್ಕೃತ ಭಾಷೆಯೊಂದಿಗೆ ವೇದಾಂತವನ್ನು ಕಲಿಸಿ ನಮ್ಮ ದರ್ಶನಗಳು, ಉಪನಿಷತ್ತುಗಳನ್ನು ಪರ್ಷಿಯನ್ನಿಗೂ ಅಲ್ಲಿಂದ ಕಾಲಾನುಕ್ರಮದಲ್ಲಿ ಇಂಗ್ಲೀಷಿಗೂ ಭಾಷಾಂತರಗೊಂಡು ವಿಶ್ವವಿಖ್ಯಾತಗೊಳ್ಳಲು ಮೂಲ ಕಾರಣನಾದವನು ಕೂಡ ಇದೇ ಜಗನ್ನಾಥ ಪಂಡಿತ. ಔರಂಗಾಜೇಬ ಪಟ್ಟಕ್ಕೆ ಬಂದ ಕೂಡಲೇ ತಂದೆ ಷಹಜಹಾನನನ್ನು ಬಂಧಿಸಿ ಜೈಲಲ್ಲಿಟ್ಟ, ತನ್ನ ಅಣ್ಣ ದಾರಾಶುಕೋವ್‌ನಿಂದ ಹಿಂದೂ ಹತ್ಯಾಕಾಂಡ ಮಾಡುವ ಕುರಿತಾಗಿ ಸಂಪೂರ್ಣ ಮಾಹಿತಿ ಪಡೆದುಕೊಂಡ. ಕಾಶಿಯ ವಿದ್ವಾಂಸರನ್ನು ನಿರ್ದಯನಾಗಿ ಕೊಂದ, ದೇವಾಲಯಗಳ ನಾಶಮಾಡಿದ. ಕೊನೆಗೆ ತನಗೆ ಭಾರತದ ಅಸ್ತಿತ್ವವನ್ನು ಪರಿಚಯಿಸಿದ ಅಣ್ಣ ದಾರಾಶುಕೋವ್‌ನನ್ನೇ ಸಾರ್ವಜನಿಕರೆದುರಲ್ಲಿ ಕೊಂದ. ಜಗನ್ನಾಥ ಈಗ ಅಕ್ಷರಶಃ ನಿರ್ಗತಿಕನಾದ. ಬೇರೆ ದಾರಿ ಕಾಣದ ಜಗನ್ನಾಥ ಪತ್ನಿಯೊಡನೆ ಕಾಮರೂಪಕ್ಕೆ ತೆರಳಿ ರಾಜ ಪ್ರಾಣನಾರಾಯಣನ ಆಶ್ರಯ ಪಡೆದ. ಔರಂಗಾಜೇಬ್ ಕಾಮರೂಪವನ್ನು ಮುತ್ತಿಗೆ ಹಾಕಿದಾಗ ಅಲ್ಲಿಂದಲೂ ಹೊರಟು ದೇಶ ಸಂಚಾರ ಮಾಡಿ ಕೊನೆಗೆ ಕಾಶಿಗೆ ಬಂದ. ಅಷ್ಟರಲ್ಲಾಗಲೇ ಅವನಿಗೆ ತೀರಾ ವಯಸ್ಸಾಗಿತ್ತು. ಧರ್ಮಭ್ರಷ್ಟನಿಗೆ ಆಶ್ರಯ ನೀಡಲು ಕಾಶಿಯ ಪ್ರಜೆಗಳು ಸಿದ್ಧರಿರಲಿಲ್ಲ. ಒಂದು ದಿನ ಬೆಳ್ಳಂಬೆಳಗ್ಗೆ ಪಂಡಿತರಾಜ ಕಾಶಿಯ ಗಂಗೆಯ ಘಾಟಿನ ಮೇಲೆ ದಾರಿಗಡ್ಡವಾಗಿ ಮಲಗಿದ್ದ. ಜನರೆಲ್ಲ ಗಂಗಾಸ್ನಾನಕ್ಕಾಗಿ ಬರುತ್ತಿದ್ದರು. ಅದೇ ದಾರಿಯಲ್ಲಿ ಸ್ನಾನಕ್ಕೆ ಬಂದಿದ್ದ ಜಗನ್ನಾಥನ ಪರಮ ವಿರೋಧಿ ಅಪ್ಪಯ್ಯ ದೀಕ್ಷಿತರು(ಅಪ್ಪಯ್ಯ ದೀಕ್ಷಿತರು ಜಗನ್ನಾಥ ಪಂಡಿತರಾಜನ ಪೂರ್ವಕಾಲೀನರು. ಆದರೆ ಇದು ಯಾವ ಅಪ್ಪಯ್ಯ ದೀಕ್ಷಿತರೋ ತಿಳಿದು ಬರುತ್ತಿಲ್ಲ.) ದಾರಿ ಮಧ್ಯ ಯಾರೋ ಮಲಗಿದ್ದು ನೋಡಿ ತಾತ್ಸಾರದಿಂದ ಬೈದರು.

`ಕಿಂ ನಿಃಶಂಕ ಶೇಷೇ ಶೇಷೇ ವಯಸಿ ತ್ವಮಾಗತೇ ಮೃತ್ಯೌ'

ಮರಣ ಸಮೀಪಿಸಿರುವ ಈ ಇಳಿ ವಯಸ್ಸಿನಲ್ಲಿ ಇಲ್ಲಿ ಬಂದು ಹೀಗೆ ಮಲಗಿರುವಿರಲ್ಲ?

ಜಗನ್ನಾಥ ಪಂಡಿತ ಮುಸುಕು ಸರಿಸಿ ನಿಧಾನಕ್ಕೆ ನಿದ್ದೆಯಿಂದೆದ್ದು ಮೇಲೆ ನೋಡಿದ... . . . . .

ಮುಂದುವರಿಯುವುದು...

# ಮಡಿಲಿಗೆ ಬಂದ ಬದುಕನ್ನು ಬದಲಿಸುವ ಮಾಯಾ



✍ ಗಣೇಶ್ ಜೋಶಿ

## ವತ್ಸಲೆ

ಹೊಸ ಜೀವದ ಆಗಮನದ ದಿನಗಳು ಹತ್ತಿರವಾಗುತ್ತಿದ್ದಂತೆ ರಾಜೇಶನ ಮನಸ್ಸಿನಲ್ಲಿ ಅಚಂಚಲ ಉತ್ಸಾಹ ಮತ್ತು ನಿಶ್ಶಬ್ಧ ಆತಂಕ ಎರಡೂ ಬೆರಳಾಡುತ್ತಿದವು. ತನ್ನ ಮಡದಿಯ ಪ್ರತಿಯೊಂದು ಹೆಜ್ಜೆಯನ್ನೂ ಪಹರೆಗಾಳಿಯ ಕಣ್ಣಿನಿಂದ ಗಮನಿಸುತ್ತ, ಅವಳಿಗೆ ಏನಾದರೂ ಆಗಿಬಿಡಬಹುದೆಂಬ ಚಿಂತೆ ಅವನನ್ನು ಬಿಟ್ಟು ಹೋಗುತ್ತಿರಲಿಲ್ಲ. ಆದರೆ ವತ್ಸಲಾಳ ಮುಖದಲ್ಲಿ ಯಾವತ್ತೂ ಒಂದೇ ಬೆಳಕು, ಹೊಸ ಬದುಕಿನ, ಹೊಸ ಪ್ರೀತಿಯ, ಹೊಸ ಬಲದ ಛಾಯೆ ಕಾಣುತ್ತಿತ್ತು.

ವತ್ಸಲಾ ಈಗ ಮನೆಗೆ ಬರುವರು, ಹೋಗುವವರು ಎಲ್ಲರ ಮಾತಿನ ಕೇಂದ್ರ. ಆಕೆಯ ಗರ್ಭಕಾಲದ ಪ್ರತಿಯೊಂದು ಕ್ಷಣವನ್ನೂ ಅತ್ತೆ-ಮಾವಂದಿರು ಕಾಳಜಿಯಿಂದ ನೋಡಿಕೊಳ್ಳುತ್ತಿದ್ದರು. "ವತ್ಸಲಾ, ನೀನು ಈಗ ನಮ್ಮ ಮನೆಯ ದೇವತೆ," ಎಂದು ಅತ್ತೆ ಪ್ರತಿ ದಿನ ಹೇಳುವುದು, ಮಗಳಿಲ್ಲದೆ ಬೆಳೆದ ವತ್ಸಲಾಳ ಹೃದಯದಲ್ಲಿ ಅಳವಾದ ಸಂತೋಷ ಹೊಮ್ಮಿಸುತಿತ್ತು.

ಶ್ರೀಕಾಂತನು ಆಗಾಗ ಅಂಗಡಿಯಿಂದ ಬಂದು ಮಗಳ ಜೊತೆ ಕುಳಿತು ಮಾತಾಡುತ್ತಿದ್ದ. "ನೀನು ತಾಯಿಯನ್ನು ಕಾಣಲಿಲ್ಲ, ಆದರೆ ನೀನು ತಾಯಿಯಾಗುತ್ತಿರುವುದು ನನ್ನ ಬದುಕಿನ ದೊಡ್ಡ ಬಹುಮಾನ," ಎಂದು ಹೇಳುವಾಗ ಅವನ ಕಣ್ಣುಗಳಲ್ಲಿ ಹೆಮ್ಮೆಯ ಜೊತೆಗೆ ಮೃದುವಾದ ನೋವು ಮಿನುಗುತಿತ್ತು. ದೂರದಲ್ಲಿದ್ದರೂ ಮಗಳ ಹಾದಿಯ ಪ್ರತಿಯೊಂದು ಹೆಜ್ಜೆಯಲ್ಲೂ ಆತ ತನ್ನ ಹೃದಯದಲ್ಲಿಯೇ ಗಮನಿಸುತ್ತಿದ್ದ.

ಅಂತೂ ಬದುಕಿನ ಅತ್ಯಂತ ಮಂಗಲ ದಿನ ಉದಯಿಸಿತು. ಮುಂಜಾನೆಯ ಗಾಳಿಯಲ್ಲಿ ಏನೋ ಮಧುರವಾದ ಭಾವರಾಗ. ವತ್ಸಲಾಳ ನೋವು ಶುರುವಾಯಿತೆಂದು ತಿಳಿದ ಕ್ಷಣ, ರಾಜೇಶನ ಮುಖದಲ್ಲಿ ಭಯ-ಸಂತೋಷಗಳ ಮಿಶ್ರ ಭಾವನೆ. ಆಸ್ಪತ್ರೆಗೆ ಸಾಗುವಾಗ ಅವನು ವತ್ಸಲಾಳ ಕೈಯಲ್ಲಿ ತನ್ನ ಕೈ ಹಚ್ಚಿಕೊಂಡೇ ಹೋದ.

"ನೀವೇನು ಚಿಂತಿಸಬೇಡಿ, ನಾನು ಇದ್ದೇನೆ," ಎಂದು ನಿಧಾನವಾಗಿ ಹೇಳಿದಾಗ, ವತ್ಸಲಾಳ ತುಟಿಯ ಮೇಲಿನ ನಗು ನೋವನ್ನೇ ಮರೆಮಾಡಿಕೊಂಡಿತು. ಸಮಯ ಮಿಡಿಯುತ್ತಾ ಹೋಯಿತು. ಆ ಕ್ಷಣಗಳೆಲ್ಲ ರಾಜೇಶಗೆ ಯುಗಗಳಂತೆ ಅನಿಸಿತು. ಕೊನೆಗೂ ಹೊರಬಂದ ನವಜೀವದ ರೋದನ ಆ ಕುಟುಂಬದ ಬದುಕಿಗೆ ಬೆಳಕಿನ ಜ್ಯೋತಿ ಬೆಳಗಿಸಿದಂತಾಯಿತು.

ಮಗುವಿನ ಮುದ್ದಾದ ಕಣ್ಣುಗಳು, ಪುಟ್ಟ ಬೆರಳುಗಳು ಅದು ದೇವರ ವರ ಎನ್ನುವಷ್ಟು ಶುಭ್ರ. ವತ್ಸಲಾಳ ಕಣ್ಣು ತುಂಬಿಬಿಟ್ಟವು. ತನ್ನ ಮಡಿಲಲ್ಲಿ ಮಗುವನ್ನು ಹಿಡಿದಾಗ, ಬದುಕಿನ ಎಲ್ಲ ನೋವುಗಳು ಒಂದೇ ಕ್ಷಣದಲ್ಲಿ ಕರಗಿ ಹೋಗಿದವು. ರಾಜೇಶನ ಕಣ್ಣುಗಳೂ ತೇವಗೊಂಡವು. "ಇದು ನಮ್ಮ ಬದುಕಿನ ಹೊಸ ಅಧ್ಯಾಯ," ಎಂದು ವತ್ಸಲಾಳ ಕಡೆ ನೋಡಿದಾಗ ಅವಳ ಮುಖದಲ್ಲಿ ತಾಯಿ ಎಂಬ ಹೆಮ್ಮೆಯ ಪ್ರಕಾಶ ಉದಯಿಸಿತು.

ಮನೆಯ ಎಲ್ಲರೂ ಸಂಭ್ರಮದಲ್ಲಿ ಮುಳುಗಿದರು. ಅತ್ತೆ-ಮಾವಂದಿರು ಹೊಸ ಅಜ್ಜ-ಅಜ್ಜಿ ಎಂಬ ಜವಾಬ್ದಾರಿ ಹೊತ್ತುಕೊಂಡ ಸಂತೋಷದಲ್ಲಿ ತೇಲಿದರು. ಸಾಕಷ್ಟು ದೂರದಲ್ಲಿದ್ದರೂ ರಾಮಚಂದ್ರ, ಹಾಗೂ ಸುಶೀಲಾ ಕೂಡಾ ಮಗುವಿನ ಸುದ್ದಿ ಕೇಳಿ ಆನಂದದ ಕಣ್ಣೀರ ಜೊತೆಗೆ ಮನದುಂಬಿ ನಕ್ಕರು.

ಶ್ರೀಕಾಂತನ ಸಂತೋಷ ಮಾತ್ರ ಎಲ್ಲರಿಗಿಂತ ಮೌನ ಮತ್ತು ಆಳವಾದದ್ದು. ಮಗಳ ಮಡಿಲಲ್ಲಿದ್ದ ಆ ಪುಟ್ಟ ಜೀವ ಅವನಿಗೆ ಮತ್ತೆ ಬದುಕಿನ ಅರ್ಥವನ್ನು ಕೊಟ್ಟಂತಾಯಿತು. ಅವನು ಮಗುವಿನ ಮುಖವನ್ನು ನೋಡಿ, "ನನ್ನ ತಾಯಿಯ ರೂಪದಂತೆ ಇದೆ," ಎಂದು ಹಸನ್ಮುಖದಿಂದ ಹೇಳಿದಾಗ, ವತ್ಸಲಾಳ ಕಣ್ಣಿನಲ್ಲಿ ನವಜೀವದ ಕಿರಣಗಳು ಮಿನುಗಿದವು.

ಹೊಸ ಜೀವನದ ಬಾಗಿಲಲ್ಲಿ ನಿಂತಿದ್ದ ವತ್ಸಲಾ ಈಗ ತಾಯಿ. ಜೀವನದ ಹೊಸ ಹಾದಿಯಲ್ಲಿ ಅವಳಿಗೆ ಜೊತೆಯಾಗಿ ನಿಂತಿದ್ದ ಗಂಡ, ಕುಟುಂಬ, ಹಾಗೂ ಅವಳನ್ನು ಅಪ್ಪಿಕೊಂಡ ರೀತಿ ಆ ಪುಟ್ಟ ಮಗುವಿನ ಹೊಸ ಆಶಾ ಕಿರಣವಾಗಿತ್ತು. ತಾಯಿಯಿಲ್ಲದ ಹೆಣ್ಣೊಬ್ಬಳು ತಾಯಿಯಾಗಿ ತಾಯ್ತನದ ನಿರ್ವಹಣೆಗೆ ಅಣಿಯಾಗಿದ್ದು ಸಂಭ್ರಮವಲ್ಲದೇ ಇನ್ನೇನು ಹೇಳಿ.

ವತ್ಸಲಾಳ ಬಾಳು ಈಗ ಮತ್ತಷ್ಟು ಮಧುರ, ಮತ್ತಷ್ಟು ಪೂರಣ. ಮಗುವಿನ ಮುಖ ನೋಡಿ ಹೊಸ ಬದುಕನ್ನು ನಿರೀಕ್ಷಿಸುತ್ತಿದ್ದ ವತ್ಸಲಾ ಸಂಭ್ರಮದ ಕಡಲಿನಲ್ಲಿ ತೇಲುತ್ತಿದ್ದಳು. ನೋವಿನ ದಿನಗಳು ಒಂದೊಂದಾಗಿ ಸರಿದು ಸರಿದು ಸಂಭ್ರಮವೇ ಮನೆ ಮಾಡಿದಾಗ ವತ್ಸಲಾಳ ಬದುಕು ಬಂದಾಗ ಎಂದುಕೊಳ್ಳುತ್ತಿದ್ದರು ಎಲ್ಲರೂ.

ಆಸ್ಪತ್ರೆಯ ಎಲ್ಲಾ ಚಟುವಟಿಕೆ ಮುಗಿಸಿದ ಗಂಡ ರಾಜೇಶ ವತ್ಸಲಾಳೊಂದಿಗೆ ಮನೆಗೆ ಹೊರಡಲು ಸಿದ್ಧನಾಗಿದ್ದಾನೆ. ಕುಟುಂಬದ ಸದಸ್ಯರಲ್ಲಿ ಸಂಭ್ರಮ ಮನೆ ಮಾಡಿದೆ. ಆರತಿ ಮಾಡಿ ಮಗುವನ್ನು ಮನೆಯೊಳಗೆ ಬರಮಾಡಿಕೊಳ್ಳಲು ಸಿದ್ಧತೆ ನಡೆದಿದೆ. ರಾಜೇಶ ಕಾರಿನಲ್ಲಿ ಮಡದಿ ಹಾಗೂ ಮಗಳನ್ನು ಕುಳ್ಳಿರಿಸಿಕೊಂಡು ಆಸ್ಪತ್ರೆಯಿಂದ ಹೊರಟಿದ್ದಾನೆ. ಮಗಳಿಗೆ ಹೆಸರಿಡುವುದು ಏನು? ಯಾವೆಲ್ಲಾ ಹೆಸರು ಬೇಕೆಂಬ ಬಗ್ಗೆ ಚಿಂತನೆ ನಡೆಯುತ್ತಿದೆ.

ಹಲವಾರು ನೋವು ನುಂಗಿ, ಸಂತೋಷದ ಸಂಕಲನವಾದ ವತ್ಸಲಾಳ ಬದುಕು ಮುಂದಿಯೂ ಹೀಗೆಯೇ ಇರಬಹುದೆಂಬ ನಿರೀಕ್ಷೆಯಲ್ಲಿ ಎಲ್ಲರೂ ಇದ್ದರು. ಆದರೆ ವತ್ಸಲಾಳ ನಿಜವಾದ ಬದುಕು ಇಲ್ಲಿದಲೇ ಪ್ರಾರಂಭವಾಗಿತ್ತು.

# ಸಂಸ್ಕಾರವಿಲ್ಲದ ಮಾತು ಸಮಾಜದಿಂದಲೇ ದೂರಮಾಡುತ್ತೆ

"ಕುಟಿಲ ವಚನವದು ಕೆಟ್ಟದು ಮನ ವಿಷಮಯವಹುದು ಸಾಧು ವಚನ ಪರಿಶುದ್ಧ ಮಧುರ ಸುಧೆಯನೆ ಸುರಿಸುವುದು" ಕುಟಿಲ ಮಾತು ಕೆಟ್ಟದ್ದು ಅದರಿಂದ ಮನಸ್ಸು ವಿಷಮಯಯವಾಗುವುದು ಒಳ್ಳೆಯ ಮಾತು ಪರಿಶುದ್ಧವಾಗಿದ್ದು ಮಧುರ ಸುಧೆಯನ್ನು ಹರಿಸುವುದು ಎಂದು ಸಂತ ಕಬೀರರು ಮಾತಿನ ಮಹತ್ವವನ್ನು ಹೇಳಿದ್ದಾರೆ. ನಮ್ಮ ಮಾತು ಉತ್ತಮ ಭಾಷೆ ಹಾಗೂ ಉತ್ತಮ ಉದ್ದೇಶವನ್ನು ಹೊಂದಿರಬೇಕು. ಕೇಳುವವರ ಮನಸ್ಸನ್ನು ನೋಯಿಸದೆ ಪ್ರಫುಲ್ಲಗೊಳಿಸುವಂತಿರಬೇಕು. ಮನಸ್ಸು ಅರಳಿಸುವಂತಿರಬೇಕು. ಕೆರಳಿಸುವಂತಿರಬಾರದು. ಕೆಟ್ಟ ಮಾತು ಕೆಟ್ಟ ಪರಿಣಾಮವನ್ನುಂಟುಮಾಡುತ್ತದೆ. ಸಮಾಜದಿಂದ ಸ್ನೇಹಿತರಿಂದ ನಮ್ಮನ್ನ ದೂರ ಮಾಡುತ್ತದೆ. ಕಲಹಕ್ಕೆ ಕಾರಣವಾಗುತ್ತದೆ. ಸಂಬಂಧಗಳು ಕೆಡುತ್ತವೆ. ದ್ವೇಷದ ವಾತಾವರಣ ಸೃಷ್ಟಿಯಾಗುತ್ತದೆ. ಆದ್ದರಿಂದ ಮಾತು ಹಿತವಾಗಿರಲಿ. "ಬಹಿರಂಗದ ಯುದ್ಧ ಮೊದಲು ಪ್ರಾರಂಭವಾಗುವುದು ಅಂತರಂಗದಲ್ಲಿ" ಎಂಬ ಮಾತಿದೆ. ಹಾಗಾಗಿ ನಾವು ಅಂತರಂಗವನ್ನು ಮೊದಲು ಶುದ್ಧವಾಗಿಟ್ಟುಕೊಳ್ಳಬೇಕು. ಅಂತರಂಗ ಶುದ್ಧವಾಗಿದ್ದರೆ ನಮ್ಮಿಂದ ಶುದ್ಧವಾದ ಮಾತುಗಳೇ ಹೊರ ಬರುತ್ತವೆ. ಅಂತರಂಗದಲ್ಲಿ ಕೊಳಕಿದ್ದರೆ ಹುಳುಕಿದ್ದರೆ ನಮ್ಮ ಮಾತಿನಲ್ಲೂ ಕೊಳಕು ಹುಳುಕು ಹೊರಬರುತ್ತದೆ. ಮಾತು ಮಾನವೀಯ ಸಂಬಂಧದ ನಡುವಿನ ಗೋಡೆಯಾಗದೆ ಸೇತುವೆಯಾಗಲಿ. ಅದು ಮನಸ್ಸು ಮನಸ್ಸುಗಳನ್ನು ಬೆಸೆಯಲಿ. ಅಂತಹ ಮಾತು ನಮ್ಮದಾಗಲಿ." ಅತಿಯಾದ ಮಾತದು ಒಳಿತಲ್ಲ ಬಿಡು ನಿನಗೆ ಅತಿಯಾದ ಮೌನವದು ಹಿತವಲ್ಲ ಸತ್ಯ. ಅತಿ ಹೆಚ್ಚು ಮಳೆ ಬಿಸಿಲು ಹಿತತರದು ಜಗಕೆಲ್ಲ ಇತಿಮಿತಿಯು ಹಿತವಹುದು" ಎಂದು ಕವಿ ಹೇಳಿದ್ದು ಅದಕ್ಕೇ.

ಮಾತಿನ ಹಿಂದೆ ಸತ್ಯವಿದ್ದಾಗ ಮಾತಿನ ಮುಂದೆ ಸತ್ಯವಿದ್ದಾಗ ಮಾತಿಗೊಂದು ಮಹತ್ವವಿದೆ. ಮಾತೆಂಬುದು ಮನಸ್ಸಿನ ಪ್ರತಿನಿಧಿಯೂ ಹೌದು... ವ್ಯಕ್ತಿತ್ವದ ಪ್ರತಿನಿಧಿಯೂ ಹೌದು. ಆದರೆ ಇಂದು ಪ್ರತಿಕೂಲ ಪರಿಸ್ಥಿತಿ ಇದೆ. "ಸತ್ಯ ಮಾತನಾಡಿದರೆ ಸತ್ತೇ ಹೋಗುತ್ತೇವೆ" ಎನ್ನುವಂತೆ ಸುಳ್ಳಿನ ಸಾಮ್ರಾಜ್ಯದಲ್ಲಿ ನಾವು ಬದುಕುತ್ತಿದ್ದೇವೆ. ಈ ಸುಳ್ಳಿನ ಸಾಮ್ರಾಜ್ಯವನ್ನು ಸತ್ಯದ ಸಾಮ್ರಾಜ್ಯವಾಗಿ ಬದಲಿಸಲು ಶಕ್ಯವಿದೆ. ಅದಕ್ಕೆ ಬೇಕಾದದ್ದು ಗಟ್ಟಿ ಮನಸ್ಸು. ನಾವು ನಮ್ಮ ಮನಸ್ಸನ್ನು ಮೊದಲು ಸರಿಪಡಿಸಿಕೊಳ್ಳಬೇಕು. ಮನಸ್ಸು ಸರಿಯಾದರೆ ಮಾತು ಸರಿಯಾಗುತ್ತದೆ. ಮಾತು ಸರಿಯಾದರೆ ಗುಣಾತ್ಮಕ ಬದಲಾವಣೆಗಳಾಗುತ್ತವೆ. ಸಮಾಜದಲ್ಲಿ ಅಂತಹ ಬದಲಾವಣೆಗಳಾದಾಗ ಸುದೃಢ ಸುಂದರ ಸಮಾಜ ನಿರ್ಮಾಣವಾಗುತ್ತದೆ. "ಮಾತಿನಿಂದಲೇ ಕಲಹ ಮಾತಿನಿಂದಲೇ ಮುನಿಸು ಮಾತಿನಿಂದಲೇ ವೈಮನಸ್ಸು" ಯಾರಿಗೆ ಮಾತಿನ ಮೇಲೆ ನಿಯಂತ್ರಣವಿದೆಯೋ ಆತ ಎಲ್ಲವನ್ನು ಜಯಿಸಬಲ್ಲ. ಮಾತು ಅನಗತ್ಯವಾಗಿ ಬಳಸಿದಷ್ಟು ಹೆಚ್ಚು ವಿಕೋಪಕ್ಕೆ ತಲುಪುತ್ತದೆ. ಶಿಸ್ತು, ಸಂಯಮ, ಧ್ವನಿಯ ಏರಿಳಿತ ಇವುಗಳು ಮಾತಿನ ಪರಿಣಾಮವನ್ನು ನಿರ್ಧರಿಸುತ್ತವೆ. ಹಾಗಾಗಿ ಮಾತು ಮುತ್ತಿನಂತಿರಲಿ. ಮೆತ್ತಗಿರಲಿ, ಹೊತ್ತಿಗೆ ಸರಿಯಾಗಿರಲಿ.

ನಾವು ಆಡುವ ಮಾತು ಅದು ಶಾಂತಿ ನೆಲೆಸಲು ಕಾರಣವಾಗಬೇಕು. ಇತರರ ಶಾಂತಿಗೆ ಶ್ರಮಿಸುತ್ತಾ ಶ್ರಮಿಸುತ್ತಾ ನಾವು ಶಾಂತಿಯನ್ನು ಪಡೆಯುತ್ತೇವೆ. ಮಾತಿಗೆ ತುಂಬಾ ಮಹತ್ವವಿದೆ ಅದು ಜಗಳಕ್ಕೆ ಕಾರಣವಾಗಬಹುದು ಅಥವಾ ಶಾಂತಿಗೆ ಕಾರಣವಾಗಬಹುದು. ಮಾತು ಮೃದುವಾಗಿದ್ದರೆ, ಕೇಳಲು ಹಿತವಾಗಿದ್ದರೆ, ಹೇಳುವುದನ್ನು ಪ್ರೀತಿಯಿಂದ ಮನಮುಟ್ಟುವಂತೆ ಹೇಳುತ್ತಿದ್ದರೆ ಅಂತಹ ಮಾತು ಸೌಹಾರ್ದತೆಯ ವಾತಾವರಣ ಸೃಷ್ಟಿಸುತ್ತದೆ. ಅದೇ ಮಾತು ಕಠಿಣವಾಗಿದ್ದರೆ, ಕೊಂಕುನುಡಿಯಾಗಿದ್ದರೆ, ಮನ ನೋಯಿಸುವಂತಿದ್ದರೆ ಅಲ್ಲಿ ಖಂಡಿತವಾಗಿ ವಾತಾವರಣ ಕದಡುತ್ತದೆ. ಅದು ದ್ವೇಷ, ಅಸೂಯೆಗೆ ಕಾರಣವಾಗುತ್ತದೆ. ಹಾಗಾಗಿ ಮಾತನಾಡುವಾಗ ತುಂಬಾ ಎಚ್ಚರಿಕೆಯಿಂದ ಇರಬೇಕು. ಇತರರಿಗೆ ಪ್ರಿಯವಾಗುವ, ಹಿತವೆನಿಸುವ ಮಾತನಾಡುವುದರಿಂದ ಕೇವಲ ಇತರರಿಗೆ ಮಾತ್ರ ಸಂತೋಷವಾಗುವುದಿಲ್ಲ ಬದಲಾಗಿ ನಮಗೂ ಅದರಲ್ಲಿ ಸಂತೋಷವಾಗುತ್ತದೆ. ಕೇವಲ ನಾನೊಬ್ಬ ಸುಖಿಯಾಗಿದ್ದರೆ ಸಾಲದು ಎಲ್ಲರೂ ಸುಖವಾಗಿರಬೇಕು ಎಂಬ ಬದುಕಿನ ಅರ್ಥವಾಗುತ್ತದೆ. "ಗುಡಿಯ ಶಿಲ್ಪವು ಚಂದ, ಅಡಿಕೆ ತೋಟವು ಚಂದ,ನಡೆ ನುಡಿಯು ಚಂದವಿರೆ ಗಂಧ ಸೂಸುವುದಯ್ಯ" ಅಂತ ಕವಿ ಒಬ್ಬರು ಹೇಳುತ್ತಾರೆ. ನಿಮ್ಮ ಮಾತಿಗೊಂದು ಅರ್ಥವಿರಲಿ, ನಿಮ್ಮ ಮಾತಿಗೊಂದು ನೀತಿ ಇರಲಿ, ನಿಮ್ಮ ಮಾತಿಗೊಂದು ಪ್ರೀತಿ ಇರಲಿ, ನಿಮ್ಮ ಮಾತು ಕೇವಲ ಮನೆ ಕಟ್ಟುವಂತಿರದೆ ನಾಡು ಕಟ್ಟುವಂತಿರಲಿ. "ಒಲುಮೆ ಇರಲೆಂದೆಂದು ನಿನ್ನಯಾ ಮಾತಿನಲಿ. ಒಲುಮೆ ಇರೆ ಅದರಿಂದ ಮಧುರ ಬಾಂಧವ್ಯ. ಕುಲುಮೆಯಂತಿರಲದುವು ಎಲ್ಲರನು ನೋಯಿಪುದು. ಗೆಲುವೆಂತು ಸಾಧ್ಯವದು? ಅಂತ ಕವಿ ಹೇಳುವುದು ಇದನ್ನೇ.

ಕಾಗೆಯನ್ನು ಕಂಡರೆ ಎಲ್ಲರೂ ಓಡಿಸುತ್ತಾರೆ. ಆದರೆ ಕೋಗಿಲೆಯನ್ನು ಎಲ್ಲರೂ ಇಷ್ಟಪಡುತ್ತಾರೆ. ತನ್ನ ಮಧುರವಾದ ಸ್ವರದಿಂದ ಅದು ಇಡೀ ಜಗತ್ತನ್ನೇ ಗೆದ್ದಿದೆ. ಹಾಗೆಯೇ ನಾವು ಮಧುರವಾದ ಮಾತಿನಿಂದ ಜಗತ್ತನ್ನೇ ಗೆಲ್ಲಬಹುದು. ಆ ಕಾಗೆ ಹಾಗೂ ಕೋಗಿಲೆ ರೂಪದಲ್ಲಿ ಒಂದೇ...ಆದರೆ ಕಾಗೆಯದು ಕರ್ಕಶ ಸ್ವರ, ಕೋಗಿಲೆಯದು ಮಧುರ..... ಕೋಗಿಲೆ ತನ್ನ ಮಧುರ ನಿನಾದದಿಂದ ಎಲ್ಲರ ಮನೆಗೆದ್ದರೆ ಕಾಗೆಯನ್ನ ಎಲ್ಲರೂ ದೂರವಿಡುತ್ತಾರೆ. ಹಾಗೆ ಸಂಸ್ಕಾರವಿಲ್ಲದ ಮಾತು ನಮ್ಮನ್ನು ಸಮಾಜದಿಂದ ದೂರವಿಡುತ್ತದೆ. ಯಾರು ಸಂಸ್ಕಾರ ಹೀನರಂತೆ ಮಾತನಾಡುತ್ತಾರೋ ಅಂಥವರನ್ನು ಯಾರೂ ಇಷ್ಟಪಡುವುದಿಲ್ಲ. ಆದರೆ ಯಾರ ಮಾತು ಸಂಸ್ಕಾರ ಪೂರ್ಣವಾಗಿರುತ್ತದೋ, ಕೇಳಲು ಹಿತವಾಗಿರುತ್ತದೋ ಅಂಥವರನ್ನು ಸಮಾಜ ಗುರುತಿಸುತ್ತದೆ... ಗೌರವ ಭಾವದಿಂದ ಕಾಣುತ್ತದೆ. ಹಾಗಾಗಿ ಮಾತು ಮುತ್ತಿನಂತಿರಬೇಕು. ಮಾತಿನ ಕುರಿತು ಕವಿವಾಣಿಯೊಂದು



✍ ರವೀಂದ್ರ ಭಟ್ಟ ಸೂರಿ

## ನಡೆಯಲೊಂದು ನುಡಿ

ಹೇಳುವುದು ಹೀಗೆ...." ಅನ್ಯರಾ ಗುಣವನ್ನು ಅರಿಯದೆಯೆ ನೀನೆಂದು, ಮುನ್ನ ನಿಂದಿಸಲದುವು ನಿನಗೆ ತರವಲ್ಲ. ಚೆನ್ನವದು ಅರಿಯುವುದು ಮಾತನಾಡುವ ಮುನ್ನ, ಚಿನ್ನಒಪ್ಪುದು ಮಾತು" ಅಂತ.

ಕತ್ತಿ ಬಳಸುವಾಗ ಎಚ್ಚರಿಲ್ಲದಿದ್ದರೂ ನಾಲಿಗೆ ಬಳಸುವಾಗ ಎಚ್ಚರವಿರಲಿ" ನಾಲಿಗೆ ಸರಿ ಇದ್ದರೆ ಲೋಕವೇ ಸರಿ. ನಮ್ಮ ಇಂದ್ರಿಯಗಳನ್ನು ನಾವು ವಶದಲ್ಲಿಟ್ಟುಕೊಳ್ಳಬೇಕು. ಇಂದ್ರಿಯಗಳನ್ನು ಯಾರು ವಶದಲ್ಲಿಟ್ಟುಕೊಳ್ಳುವರೋ ಅವರು ಎಲ್ಲರಿಂದಲೂ ಗೌರವಕ್ಕೆ ಪಾತ್ರರಾಗುತ್ತಾರೆ. ನಾಲಿಗೆ ಮತ್ತು ಹಲ್ಲಿಗೆ ಒಮ್ಮೆ ಜಗಳವಾಯಿತಂತೆ. ಕಾರಣವಿಷ್ಟೇ ಒಮ್ಮೆ ತುಟಿ ಒಣಗಿದಾಗ ಒದ್ದೆ ಮಾಡಲು ನಾಲಿಗೆ ಹೊರಬಂತು. ಹಲ್ಲುಗಳು ಈ ಸಂದರ್ಭದಲ್ಲಿ ಕಚ್ಚಿದವು. ಪ್ರತೀಕಾರಕ್ಕಾಗಿ ಸಮಯ ಕಾಯುತ್ತಿದ್ದ ನಾಲಿಗೆ ಧಡಿಯನೊಬ್ಬ ಎದುರುಬಂದ ಸಮಯ ನೋಡಿ ನಾಲ್ಕು ಅವಾಚ್ಯ ಶಬ್ದಗಳನ್ನು ಮಾತನಾಡಿತು....! ಕೋಪದಿಂದ ಆತ ಬಡಿದಾಗ ನಾಲ್ಕು ಹಲ್ಲುಗಳು ಉದುರಿ ಇಪ್ಪತ್ತೆಂಟು ಉದುರಿ ಹೋದವು. ವಿನಾಕಾರಣ ಇನ್ನೊಬ್ಬರಿಗೆ ತೊಂದರೆ ಕೊಟ್ಟರೆ, ಸುಳ್ಳು ಹೇಳಿದರೆ, ಅಹಂಕಾರದಿಂದ ನಡೆದರೆ ನಾವು ಕೆಳಕ್ಕೆ ಬೀಳುತ್ತೇವೆ ಎಂಬುದಕ್ಕೆ ನಿದರ್ಶನವಿದು. ನಾನು ಎಂಬುದನ್ನು ಬಿಟ್ಟು ಎಲ್ಲರಲ್ಲೂ ಒಂದಾಗೋಣ. ಅಂದಾಗ ಮಾತ್ರ ಚಂದದ ಜೀವನ ನಮ್ಮದಾಗಲು ಸಾಧ್ಯ. ಬೇರೆಯವರ ಬಗ್ಗೆ ಕೀಳು ಭಾವನೆ ಬೇಡ. ನಾನೇ ಶ್ರೇಷ್ಠನೆಂಬ ಅಹಂಕಾರ ಬೇಡ. ಇತರರ ಬಗ್ಗೆ ಮಾತನಾಡುವಾಗ ಎಚ್ಚರವಿರಲಿ. ನಮ್ಮನ್ನು ನಾವು ಗೆದ್ದರೆ ಮಾತ್ರ ಜಗತ್ತನ್ನ ಗೆಲ್ಲಲು ಸಾಧ್ಯ. ನಮ್ಮನ್ನು ನಾವು ಗೆಲ್ಲಲಾಗದಿದ್ದರೆ ನಾಶವಾಗುತ್ತೇವೆ.

# ಬಿಹಾರದಲ್ಲಿ ಬಿಜೆಪಿಯದ್ದು ವಿಶ್ವಾಸದ ಗೆಲುವು: ಗುರುಪ್ರಸಾದ

● **ತತ್ತ್ವನಿಷ್ಠ, ಶಿರಸಿ:** ಬಿಹಾರದ ವಿಧಾನಸಭಾ ಚುನಾವಣೆಯಲ್ಲಿ ಗಳಿಸಿದ್ದು ವಿಶ್ವಾಸದ ಗೆಲುವು, ಬಿಜೆಪಿಯ ವಿಕಾಸದ ರಾಜನೀತಿಯತ್ತ ಜನರ ಒಲವು ಹೆಚ್ಚುತ್ತಿರುವುದರ ಸಂಕೇತವಾಗಿದೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುಪ್ರಸಾದ ಹೆಗಡೆ ಹರ್ತೆಬೈಲ್ ಹೇಳಿದರು.


ಅವರು ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ್ದು, ಐತಿಹಾಸಿಕ ಗೆಲುವನ್ನು ಬಿಜೆಪಿ ಹಾಗೂ ಎನ್‌ಡಿಎ ಮೈತ್ರಿಕೂಟ ಸಾಧಿಸಿದೆ. ಪ್ರಧಾನಿ ನರೇಂದ್ರ ಮೋದಿ ಜನಪ್ರಿಯತೆ ಹಾಗೂ ಅಭಿವೃದ್ಧಿ ಪರ ಆಡಳಿತದಲ್ಲಿ ಜನತೆ ಭರವಸೆ ಇಟ್ಟುಕೊಂಡಿದ್ದಾರೆ ಎನ್ನುವುದು ಇನ್ನೊಮ್ಮೆ ಸಾಬೀತಾಗಿದೆ. ವೋಟ್ ಚೋರಿ ಅಂತ ಹೇಳಿಕೊಂಡು ರಾಹುಲ್ ಗಾಂಧಿ ಮತ್ತವರ ಕಾಂಗ್ರೆಸ್ ದೇಶದ ಎಲ್ಲೆಡೆ ಅಪಪ್ರಚಾರ ಮಾಡುತ್ತಾ ಇತ್ತು, ಇದಕ್ಕೆ ಮತದಾರರು ತಕ್ಕ ಉತ್ತರ ಕೊಟ್ಟಿದ್ದಾರೆ. ಜೆನ್ ಝೀ ಹಾಗೂ ಒಟ್ಟಾರೆ ಜನರ ದಿಕ್ಕು ತಪ್ಪಿಸುವ ಕಾಂಗ್ರೆಸ್ ಮತ್ತು ಘಟಬಂಧನ್ ಪ್ರಯತ್ನ ವಿಫಲವಾಗಿದೆ. ಬಿಜೆಪಿ ವೋಟ್ ಚೋರಿ ಮಾಡಿಲ್ಲ, ಬದಲಾಗಿ ಜನಸಾಮಾನ್ಯರ ಹೃದಯ ಗೆದ್ದಿದೆ. ಇದು ಮತದಾರರ ದಿಲ್ ಚೋರಿ ಎಂದು ಹೇಳಿದ್ದಾರೆ.



ಬಾಂಬ್ ಬ್ಲಾಸ್ಟ್‌ನಲ್ಲಿಯೂ ಸ್ವಾರ್ಥ ಎಣಿಸುವ, ರಾಜಕೀಯ ಲೆಕ್ಕಾಚಾರ ಹಾಕುವ ಕಾಂಗ್ರೆಸ್ ಮುಖಭಂಗ ಅನುಭವಿಸಿದೆ. ಜಾತಿ ಜಾತಿಗಳನಡುವೆ ಸಂಘರ್ಷ ಮೂಡಿಸುವ, ಮುಸ್ಲಿಂ ತುಷ್ಟೀಕರಣ, ಮತ ಬ್ಯಾಂಕ್ ರಾಜಕಾರಣ ಮಾಡುವ ತನ್ನ ಹಳೆಯ ಕಾರ್ಯಶೈಲಿಗೆ ಜೋತುಬಿದ್ದಿರುವ ಕಾಂಗ್ರೆಸ್ಸಿಗೆ ಜನರೇ ತಕ್ಕ ಪಾಠ ಕಲಿಸಿದ್ದಾರೆ ಎಂದು ಗುರುಪ್ರಸಾದ ಹೆಗಡೆ ಹೇಳಿದ್ದಾರೆ. ಬಿಜೆಪಿ ಟೀಕಿಸುವ ಭರದಲ್ಲಿ ಸೂರ್ಯೋಪಾಸನೆಯ ಪವಿತ್ರ ಛಟ್ ಪೂಜೆಯನ್ನೂ ಕೂಡಾ ನಾಟಕ ಎಂದು ರಾಹುಲ್ ಗಾಂಧಿ ಅಪಮಾನಿಸಿದ್ದರು. ಹಿಂದೂ ಆಚರಣೆಗಳ ಅವಹೇಳನದ ಕರ್ಮಫಲ ಕಾಂಗ್ರೆಸ್ಸಿಗೆ ಲಭಿಸಿದೆ. ಬಿಹಾರ ಫಲಿತಾಂಶದ ಕುರಿತು ಮಾಧ್ಯಮದ ಪ್ರಶ್ನೆಗೆ ಸಿಎಂ ಸಿದ್ದರಾಮಯ್ಯ ನಂಗೇನೂ ಗೊತ್ತಿಲ್ಲ, ನಾನು ಬಿಹಾರಕ್ಕೆ ಹೋಗಿಲ್ಲ ಅಂದಿದ್ದಾರೆ. ಡಿ.ಕೆ. ಶಿವಕುಮಾರ್ ಬಿಹಾರಕ್ಕೆ ಹೋಗಿದ್ದು ಏನೂ ಪ್ರಯೋಜನವಾಗಿಲ್ಲ ಅಂತ ಪರೋಕ್ಷವಾಗಿ ಸಿಎಂ ಟಾಂಗ್ ನೀಡಿದ್ದಾರೆ ಎಂದರು.

ಕಾಂಗ್ರೆಸ್ ಪಾಲಿಗೆ ಇನ್ನು ಉಳಿದಿರುವುದು ಮತ್ತೆ ಅದೇ ಇವಿಎಂ ಹ್ಯಾಕ್ ಎನ್ನುವ ಸುಳ್ಳು ಸುದ್ದಿಯ ಪ್ರಚಾರ ಅಷ್ಟೇ. ಈ ಸಂದರ್ಭದಲ್ಲಿ ರಾಹುಲ್ ಗಾಂಧಿ ಎಲ್ಲಿದ್ದಾರೋ ಗೊತ್ತಿಲ್ಲ, ಚುನಾವಣೆ ಪ್ರಚಾರ ಮತ್ತು ಅವಲೋಕನದ ಕ್ಷಣದಲ್ಲೂ ಅವರು ವಿದೇಶದಲ್ಲಿ ಇರ್ತಾರೆ, ಅವರದ್ದು ಪ್ರವಾಸಿ ರಾಜಕೀಯ ಎಂದು ತಿರುಗೇಟು ನೀಡಿದರು.

## ವಿಜೃಂಭಣೆಯಿಂದ ನಡೆದ ಕಾರ್ತಿಕೋತ್ಸವ



● **ತತ್ತ್ವನಿಷ್ಠ, ಶಿರಸಿ:** ನಗರದ ಮರಾಠಿಕೊಪ್ಪದ ಅಂಜನಾದ್ರಿ ಬೆಟ್ಟದ ಪ್ರಸಿದ್ಧ ಮಾರುತಿ (ಹನುಮಂತ) ದೇವಸ್ಥಾನದ ಕಾರ್ತಿಕೋತ್ಸವ ಶನಿವಾರ ಅತ್ಯಂತ ವಿಜೃಂಭಣೆಯಿಂದ ಜರುಗಿತು. ಕಾರ್ತಿಕೋತ್ಸವದ ಪ್ರಯುಕ್ತ ಆಂಜನೇಯನಿಗೆ

ವಿಶೇಷ ಅಲಂಕಾರ, ಪೂಜೆ, ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಲಾಯಿತು. ಸಾವಿರಾರು ಭಕ್ತರು ಹನುಮಂತನ ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು.

## ನ. 22ರಂದು ಡಾನ್ಸ್ ಕನ್ನಡ ಡಾನ್ಸ್

● **ತತ್ತ್ವನಿಷ್ಠ, ಸಿದ್ದಾಪುರ:** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನಾಡ ದೇವಿ ಜನಪದ ವೇದಿಕೆ ವತಿಯಿಂದ ನ. 22ರಂದು ಸಂಜೆ 6.30ಕ್ಕೆ ಪಟ್ಟಣದ ನೆಹರು ಮೈದಾನದಲ್ಲಿ ಡಾನ್ಸ್ ಕನ್ನಡ ಡಾನ್ಸ್ ಸ್ಪರ್ಧೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷ ಅನಿಲ್ ಕೊಠಾರಿ ತಿಳಿಸಿದ್ದಾರೆ. ಸ್ಪರ್ಧೆಯಲ್ಲಿ ಗುಂಪು ನೃತ್ಯ ಹಾಗೂ ವೈಯಕ್ತಿಕ ನೃತ್ಯಕ್ಕೆ ಅವಕಾಶ ನೀಡಲಾಗಿದೆ. ಆಯ್ಕೆಯಾದ ವಿಜೇತರಿಗೆ ಪ್ರಥಮ ದ್ವಿತೀಯ ಬಹುಮಾನ ಹಾಗೂ ಪುನೀತ್ ರಾಜಕುಮಾರ ಟ್ರೋಫಿ ನೀಡಲಾಗುವುದು. ಕನ್ನಡ ಹಾಡುಗಳಿಗೆ ಮಾತ್ರ ಅವಕಾಶ ಇದೆ. ನ. 18ರ ಒಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ 9972267765, 7892431990, 7022522554 ಈ ನಂಬರ್‌ಗೆ ಸಂಪರ್ಕಿಸಲು ಅವರು ತಿಳಿಸಿದ್ದಾರೆ.

## ಆಕಸ್ಮಿಕ ಬೆಂಕಿ ಮಹಿಳೆ ಸಾವು

● **ತತ್ತ್ವನಿಷ್ಠ, ಮುಂಡಗೋಡ:** ಮನೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಮನೆಯಲ್ಲಿದ್ದ ಒಂಟಿ ಮಹಿಳೆ ಸಜೀವ ದಹನವಾಗಿದ್ದಾರೆ. ತಾಲೂಕಿನ ಹನುಮಾಪುರ ಗ್ರಾಮದಲ್ಲಿ ಶನಿವಾರ ಘಟನೆ ನಡೆದಿದೆ. ಫಕ್ಕೀರವ್ವ ರಾಮಣ್ಣ ಆಲೂರ(70) ಬೆಂಕಿ ಅನಾಹುತಕ್ಕೆ ಬಲಿಯಾದ ವೃದ್ಧ ಮಹಿಳೆ. ಆಕಸ್ಮಿಕವಾಗಿ ಮನೆಗೆ ಬೆಂಕಿ ತಗುಲಿ ಹೊತ್ತಿ ಉರಿಯಲಾರಂಭಿಸಿದೆ. ಸುತ್ತಮುತ್ತಲಿನ ಜನ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ದಾವಿಸಿದ ಮುಂಡಗೋಡ ಅಗ್ನಿಶಾಮಕ ದಳ ಸಿಬ್ಬಂದಿ ಬೆಂಕಿಯನ್ನು ನಂದಿಸಿದರು. ಅಷ್ಟರಲ್ಲಿ ಮಹಿಳೆ ಬೆಂದು ಹೋಗಿದ್ದು , ಬಳಿಕ ಅವರಿಗೆ ಮುಂಡಗೋಡ ಸರಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿ ಕಿಮ್ಸ್ ಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.



**ಚಿಕ್ಕಬಳ್ಳಾಪುರದಲ್ಲಿ ನಡೆದ ರಾಜ್ಯಮಟ್ಟದ ಶಾಲಾ ಶಿಕ್ಷಣ ಇಲಾಖೆ ಆಯೋಜಿಸಿದ್ದ ಎಸ್‌ಜಿಎಫ್‌ಐ ಕರಾಟೆ ಕ್ರೀಡಾಕೂಟದಲ್ಲಿ ಸಿದ್ದಾಪುರದ ಡೋಜೊ ಕರಾಟೆ ತರಬೇತಿ ಕೇಂದ್ರದ ವಿದ್ಯಾರ್ಥಿಗಳಾದ ಸಾಧನ , ರಿದಾ ಐಮನ್, ಸೌಜನ್ಯ ಕಂಚಿನ ಪದಕ ಪಡೆದಿದ್ದಾರೆ.**

# ಅಧಿಕಾರಿ, ಜನಪ್ರತಿನಿಧಿಗಳು ಒಟ್ಟಾದರೆ ಕೆಲಸ ಸುಲಭ: ಹೆಬ್ಬಾರ್

● **ತತ್ತ್ವನಿಷ್ಠ, ಯಲ್ಲಾಪುರ:** ಅಧಿಕಾರಿಗಳು, ಜನಪ್ರತಿನಿಧಿಗಳು ಕೂಡಿ ಕಾರ್ಯ ನಿರ್ವಹಿಸಿದರೆ, ಮಾತ್ರ ಅಭಿವೃದ್ಧಿ ಕೆಲಸ ಸುಲಭವಾಗುತ್ತದೆ ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

ಪಟ್ಟಣದ ಸರ್ಕಾರಿ ನೌಕರರ ಸಂಘದ ಆವರಣದಲ್ಲಿ ನೌಕರ ಸಂಘದ ನೂತನ ಕಟ್ಟಡದ ಭೂಮಿಪೂಜೆ ನೆರವೇರಿಸಿ ಮಾತನಾಡಿ, ನಿರ್ದಿಷ್ಟ ಗುರಿ, ಉದ್ದೇಶ ಈಡೇರಿಕೆಗೆ ಶ್ರಮ ಪಡುವ, ತನ್ಮತೆಯಿಂದ ಕೆಲಸ ಮಾಡುವ ದೃಢ ಸಂಕಲ್ಪದಿಂದ ಮಾತ್ರ ಯಶಸ್ಸು ಸಾಧ್ಯವಾಗುತ್ತದೆ. ಸಮಾಜದ ಎಲ್ಲರ ಆಶೋತ್ತರಗಳನ್ನು ಈಡೇರಿಸುವ ಕಟ್ಟಡ ಇಲ್ಲಿ ಬೇಗ ತಲೆಎತ್ತಿ ನಿಲ್ಲಬೇಕು ಎಂದ ಅವರು, ನೂತನ ಕಟ್ಟಡದ ಕಾಮಗಾರಿಗೆ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ 10 ಲಕ್ಷ ರೂ. ನೀಡುವುದಾಗಿ ಘೋಷಿಸಿದರು.

ವಿಧಾನ ಪರಿಷತ್ ಸದಸ್ಯ ಎಸ್ ವಿ ಸಂಕನೂರು ಮಾತನಾಡಿ, ನೀತಿ, ಪ್ರೀತಿ, ಜಾಣ್ಮೆ ಇದ್ದರೆ ಮಾತ್ರ ಸಂಘಟನೆ ಯಶಸ್ವಿಯಾಗಲು ಸಾಧ್ಯ. ಷಡಾಕ್ಷರಿ ಮುಂದಾಳತ್ವದ ತಾರತಮ್ಯ ಇಲ್ಲದ ನಾಯಕತ್ವ ಹೊಂದಿರುವುದು ಉತ್ತಮ ಬೆಳವಣಿಗೆ. ನೌಕರರ ಪ್ರಮುಖ ಬೇಡಿಕೆಯಾದ ಎನ್ ಪಿಎಸ್ ರದ್ದುಪಡಿಸಿ ಒಪಿಎಸ್ ತರುವುದಕ್ಕೆ ನಾವು ಬದ್ದರಾಗಿದ್ದೇವೆ ಎಂದು ಹೇಳಿ, ನೌಕರ ಸಂಘದ ನೂತನ ಕಟ್ಟಡ ಕಾಮಗಾರಿಗೆ 5 ಲಕ್ಷ ರೂ ಮೊದಲ ಹಂತದಲ್ಲಿ ನೀಡುವುದಾಗಿ ಭರವಸೆ ನೀಡಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ ಜಗದೀಶ ಮಾತನಾಡಿ, ತಾಲೂಕಾಧ್ಯಕ್ಷ ಹೊಸ್ಕೇರಿ ಮುಂದಾಳತ್ವದಲ್ಲಿ ನೂತನ ಕಟ್ಟಡ ಬಹುಬೇಗ ಎದ್ದು ನಿಲ್ಲಲಿ ಎಂದು ಶುಭ ಹಾರೈಸಿದರು.



ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ ಎಸ್ ಷಡಾಕ್ಷರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಜ್ಯದ ಎಲ್ಲ ಸರ್ಕಾರಿ ನೌಕರರಿಗೆ ನ್ಯಾಯ ಕೊಡಿಸುವ ಕೆಲಸ ಮಾಡುತ್ತಿದ್ದೇನೆ. ಸರ್ಕಾರ ಹಾಗೂ ಸಂಘಟನೆಯಿಂದ ನೌಕರ ಸಂಘದ ನೂತನ ಕಟ್ಟಡಕ್ಕೆ25 ಲಕ್ಷ ರೂ ಕೊಡುವ ಪ್ರಯತ್ನ ಮಾಡುತ್ತೇನೆ. ಸಿಬ್ಬಂದಿ ಕೊರತೆ, ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ನೌಕರರು ಒತ್ತಡದಲ್ಲಿ ಕೆಲಸ ಮಾಡಬೇಕಾಗಿದೆ. ಇಡೀ ದೇಶದಲ್ಲಿ ಕರ್ನಾಟಕ ಸಂಘ ತೆರಿಗೆ ಸಂಗ್ರಹದಲ್ಲಿ ಎರಡನೇಯ ಸ್ಥಾನದಲ್ಲಿದೆ. ಅಪಘಾತದಲ್ಲಿ ಸರ್ಕಾರಿ ನೌಕರ ಮೃತನಾದರೆ ಒಂದು ಕೋಟಿ ಪರಿಹಾರ ನೀಡಲಾಗುತ್ತದೆ. 25 ಲಕ್ಷ ನೌಕರ ಬಂಧುಗಳಿಗೆ ಆರೋಗ್ಯ ವಿಮೆ ಜಾರಿಗೆ ಬಂದಿದೆ. ನೌಕರ ಪರವಾಗಿ ಸಂಘಟನೆ ಬದ್ಧತೆಯಿಂದ ಕೆಲಸ ಮಾಡುತ್ತಿದೆ. ನೌಕರ ಸ್ನೇಹಿ ಕೆಲಸ ಮಾಡಲಾಗುತ್ತದೆ ಎಂದರು.

ಸಂಘದ ರಾಜ್ಯ ಗೌರವಾಧ್ಯಕ್ಷ ಬಸವರಾಜ, ವಿವಿಧ ಸಂಘಟನೆಯ ಪ್ರಮುಖರಾದ ಮಲ್ಲಿಕಾರ್ಜುನ ಬಳ್ಳಾರಿ, ಸಿದ್ದನಗೌಡ ಧಾರವಾಡ, ಮೋಹನ ಕುಮಾರ, ಸಂಜೀವಕುಮಾರ ನಾಯ್ಕ , ಕಿರಣ ಕುಮಾರ ನಾಯ್ಕ , ವಿಜಯ ಮಿರಾಶಿ, ವಆರ್ ಆರ್ ಭಟ್ಟ , ನಾರಾಯಣ ನಾಯಕ, ಎಸ್ ಆರ್ ನಾಯಕ, ಅಜೇಯ ನಾಯಕ, ಚಂದ್ರಶೇಖರ ಎಸ್ ಸಿ, ತಹಸೀಲ್ದಾರ ಚಂದ್ರಶೇಖರ ಹೊಸ್ಮನಿ, ಬಿಇಒ ರೇಖಾ ನಾಯ್ಕ , ಕಟ್ಟಡ ತಾಂತ್ರಿಕ ಅಭಿಯಂತರ ಶಿವಕುಮಾರ ನಾಯ್ಕ ಇದ್ದರು.

ಇದೇ ಸಂದರ್ಭದಲ್ಲಿ ಸಂಘದ ಮಾಜಿ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಸರ್ಕರಿ ನೌಕರರ ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಲಾಯಿತು.

ಶಿಕ್ಷಕಿ ಸುವರ್ಣಲತಾ, ಸಂಘದ ತಾಲೂಕು ಅಧ್ಯಕ್ಷ ಸಂಜೀವಕುಮಾರ ಹೊಸ್ಕೇರಿ, ಶಿಕ್ಷಣ ಸಂಯೋಜಕ ಸುಧಾಕರ ನಾಯಕ, ಸಿ ಆರ್ ಪಿ ಚಂದ್ರಹಾಸ ನಾಯ್ಕ ನಿರ್ವಹಿಸಿದರು.

# ಗಣ್ಯರ ಪುತ್ತಳಿ ನಿರ್ಮಾಣಕ್ಕೆ ಶಾಸಕರ ಆಸಕ್ತಿ ಸ್ವಾಗತಾರ್ಹ

● **ತತ್ತ್ವನಿಷ್ಠ, ಬನವಾಸಿ:** ಕದಂಬರ ರಾಜ ಮಯೂರವರ್ಮ ಹಾಗೂ ಆದಿಕವಿ ಪಂಪರ ಪುತ್ಥಳಿ ಸ್ಥಾಪಿಸಲು ರಾಜ್ಯಸರ್ಕಾರಕ್ಕೆ ಮನವಿ ಮಾಡುತ್ತೇನೆ ಎಂಬ ಶಾಸಕರ ಹೇಳಿಕೆಯನ್ನು ಕದಂಬ ಸೈನ್ಯ ಸ್ವಾಗತಿಸುತ್ತದೆ ಎಂದು ಕದಂಬ ಸೈನ್ಯದ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ ತಿಳಿಸಿದರು.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ್ದು, ಇತ್ತೀಚೆಗೆ ಬನವಾಸಿಯಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಶಾಸಕ ಶಿವರಾಮ್ ಹೆಬ್ಬಾರ್ ಕನ್ನಡದ ಪ್ರಥಮ ರಾಜಧಾನಿ ಬನವಾಸಿಯಲ್ಲಿ ರಾಜ ಮಯೂರವರ್ಮನ ಮೂರ್ತಿ ಸ್ಥಾಪನೆಗಾಗಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡುತ್ತೇನೆ ಎಂದು ಹೇಳಿರುವುದು ಸ್ವಾಗತಾರ್ಹ. ಈ ಕುರಿತು ಹಲವಾರು ಬಾರಿ ಕದಂಬ ಸೈನ್ಯಯು ( ಕನ್ನಡ ಸಂಘಟನೆ) ರಾಜ್ಯಾದ್ಯಂತ ಹೋರಾಟ ಮಾಡಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ನವರಿಗೆ ಮನವಿ ಸಲ್ಲಿಸಿ ಬಂದಿದೆ ಎಂದು ವಿವರಿಸಿದರು.

ಬನವಾಸಿಯಲ್ಲಿ ಆದಿ ಕವಿ ಪಂಪನ ಪುತ್ಥಳಿ ಸ್ಥಾಪಿಸಲು ಮತ್ತು ಬೆಂಗಳೂರು ವಿಧಾನ ಸೌಧ ಮುಂದೆ ಮಯೂರ ವರ್ಮ ಪುತ್ಥಳಿ ಸ್ಥಾಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಬೇಕೆಂದು ಶಾಸಕ ಶಿವರಾಮ್ ಹೆಬ್ಬಾರ್ ರವರಲ್ಲಿ ಮನವಿ ಮಾಡುತ್ತೇವೆ. ಬನವಾಸಿಯಲ್ಲಿ ರಾಜ ಮಯೂರವರ್ಮನ ಪುತ್ಥಳಿ ಸ್ಥಾಪನೆಯಾದರೆ ಶಾಸಕರ ಕಾರ್ಯ ಸದಾ ಬನವಾಸಿಗರ ಮತ್ತು ಕನ್ನಡಾಭಿಮಾನಿಗಳ ಮನದಲ್ಲಿ ಶಾಶ್ವತವಾಗಿ ಉಳಿಯಲಿದೆ ಎಂದರು.

ಕದಂಬ ಸೈನ್ಯದ ರಾಜ್ಯ ಉಪಾಧ್ಯಕ್ಷ ಡಾ ದೇವನಹಳ್ಳಿ ದೇವರಾಜ್, ರಾಜ್ಯ ಕಾರ್ಯದರ್ಶಿ ಎನ್. ಸಿ. ಕಾಂಬಳೆ, ರಾಜ್ಯ ಸಹ ಕಾರ್ಯದರ್ಶಿ ವಿನಾಯಕ ಸಂಡೂರ, ನಾಗೇಶ್ ಮಂಡ್ಯ, ಉತ್ತರ ಕನ್ನಡ ಜಿಲ್ಲೆ ಸಂಚಾಲಕ ಗುತ್ಯಪ್ಪ ಮಾದರ ಬನವಾಸಿ, ಹೊನ್ನಾವರ ತಾಲೂಕು ಉಪಾಧ್ಯಕ್ಷ ಹೊನ್ನಪ್ಪ ನಾರಾಯಣ ನಾಯ್ಕ , ಗಣಪತಿ ನಾರಾಯಣ ನಾಯ್ಕ , ನಾರಾಯಣ ಉಪ್ಪಾರ ಲೋಕೇಶ್ ಸಿದ್ದಾರ್ಥ್, ಸರ್ವ ಪದಾಧಿಕಾರಿಗಳು ಶಾಸಕರ ಹೇಳಿಕೆಯನ್ನು ಶ್ಲಾಘಿಸಿದ್ದಾರೆ.

## ಶಾಲೆ ಬಿಟ್ಟಿದ್ದ 11 ಮಕ್ಕಳು ಮರುಪ್ರವೇಶ



● **ತತ್ತ್ವನಿಷ್ಠ, ಮುಂಡಗೋಡ:** ತಾಲೂಕಿನ ಬೆಡಸಗಾಂವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾನವಳ್ಳಿ ಗ್ರಾಮದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರ ವಿರುದ್ಧಕ್ಕೆ ಪಾಲಕರು ವ್ಯಕ್ತಪಡಿಸಿದ್ದ ಅಸಮಾಧಾನದ ಪರಿಣಾಮವಾಗಿ ಕಳೆದ ಒಂದು ವಾರದಿಂದ ಶಾಲೆಗೆ ಬಾರದಿದ್ದ ಮಕ್ಕಳನ್ನು ಶಿಕ್ಷಣಾಧಿಕಾರಿಗಳ ಮನವೋಲಿಕೆಯ ನಂತರ ಯಶಸ್ವಿಯಾಗಿ ಶಾಲೆಗೆ ಮರಳಿ ಕಳುಹಿಸಲಾಗಿದೆ.

ಶಾನವಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 31 ಮಕ್ಕಳು ವ್ಯಾಸಂಗ ಮಾಡುತ್ತಿರುವುದರಲ್ಲಿ ಸುಮಾರು 11 ಮಕ್ಕಳನ್ನು ಪಾಲಕರು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು "ಮನಬಂದಂತೆ ವರ್ತಿಸುತ್ತಿದ್ದಾರೆ" ಎಂಬ ಆರೋಪದ ಹಿನ್ನೆಲೆಯಲ್ಲಿ ಒಂದು ವಾರದಿಂದ ಶಾಲೆಗೆ ಕಳುಹಿಸಿರಲಿಲ್ಲ. ಇದರಿಂದ ಮಕ್ಕಳ ಶಿಕ್ಷಣ ಹಿನ್ನಡೆಗೊಳ್ಳುತ್ತಿರುವ ಮಾಹಿತಿ ತಿಳಿದ ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಸುಮಾ ಶಾಲೆಗೆ ಭೇಟಿ ನೀಡಿ, ಶಾಲಾಭಿವೃದ್ಧಿ ಸಮಿತಿ ಹಾಗೂ ಪಾಲಕರೊಂದಿಗೆ ಸಭೆ ನಡೆಸಿ ಸುದೀರ್ಘ ಚರ್ಚೆ ನಡೆಸಿದರು.

ಸಭೆಯಲ್ಲಿ ಪಾಲಕರು, "ಅಧ್ಯಕ್ಷರನ್ನು ಬದಲಿಸಿದರೆ ಮಾತ್ರ ಮಕ್ಕಳನ್ನು ಶಾಲೆಗೆ ಕಳುಹಿಸುತ್ತೇವೆ" ಎಂಬ ನಿಲುವು ಕೈಗೊಂಡಿದ್ದರು. ಮಕ್ಕಳ ಹಿತದೃಷ್ಟಿಯಿಂದ ಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಕರು ಮಧ್ಯಸ್ಥಿಕೆ ವಹಿಸಿ, ಇತ್ತಿದ್ದ ಶಾಲಾಭಿವೃದ್ಧಿ ಸಮಿತಿ ಸದಸ್ಯರಲ್ಲೊಬ್ಬರ ಹೆಸರನ್ನು ಮುಂದಿರಿಸಿ ಉಳಿದ 6 ತಿಂಗಳ ಅವಧಿಗೆ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡುವ ಬಗ್ಗೆ ಒಪ್ಪಂದಕ್ಕೆ ಬಂದರು. ನಂತರ ಪಾಲಕರು ಮಕ್ಕಳನ್ನು ಮರು ಶಾಲೆಗೆ ಕಳುಹಿಸಿದರು.

# ಜೋಯಿಡಾ: ಸುಕನ್ಯಾ ದೇಸಾಯಿಗೆ 'ಕರುನಾಡ ರತ್ನ' ಪ್ರಶಸ್ತಿ

● **ತತ್ತ್ವನಿಷ್ಠ, ಜೋಯಿಡಾ:** ತಾಲೂಕಿನಲ್ಲಿ ಕಳೆದ 15 ವರ್ಷಗಳಿಂದ ಪ್ರೇರಣಾ ಸಂಸ್ಥೆಯನ್ನು ನಿರ್ಮಿಸಿ ಬೆಳೆಸಿಕೊಂಡು ಸಾಹಿತ್ಯ, ಸಮಾಜಸೇವೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪ್ರಭಾವಿ ಪಾತ್ರವಹಿಸಿರುವ ಸುಕನ್ಯಾ ದೇಸಾಯಿ ಅವರಿಗೆ ಪ್ರತಿಷ್ಠಿತ 'ಕರುನಾಡ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಗಿದೆ.

ಈ ಪ್ರಶಸ್ತಿಯನ್ನು ನಿನ್ನೆ ಬೆಂಗಳೂರಿನ ಜ್ಞಾನ ಭಾರತಿಯ ಕಲಾಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆದಿ ಚುಂಚನಗಿರಿಯ ಶ್ರೀ ಸೌಮ್ಯನಾಥ ಸ್ವಾಮೀಜಿ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ನಾಡೋಜ ಮನು ಬಳಿಗಾರ್, ಮಾಜಿ ಶಾಸಕ ನೆ.ಲ. ನರೇಂದ್ರ ಬಾಬು ಸೇರಿದಂತೆ ಗಣ್ಯರ ಸಮ್ಮುಖದಲ್ಲಿ ಪ್ರದಾನ ಮಾಡಲಾಯಿತು.

ಸುಕನ್ಯಾ ದೇಸಾಯಿ ಅವರು ಪ್ರೇರಣಾ ಸಂಸ್ಥೆಯ ಮೂಲಕ ಜಿಲ್ಲೆಯ ಹಾಗೂ ರಾಜ್ಯದ ಅನೇಕ ಕಲಾವಿದರು, ಸಾಹಿತಿಗಳಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ವೇದಿಕೆ ಸೃಷ್ಟಿಸಿ, ತಮ್ಮದೇ ಯೂಟ್ಯೂಬ್ ಚಾನಲ್ ಮೂಲಕ ಹೊಸ







ಕಲಾವಿದರನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹಲವು ಪುಸ್ತಕಗಳ ರಚನೆ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿಯೂ ಗಣನೀಯ ಸಾಧನೆ ಮಾಡಿದ್ದಾರೆ. ತಾಳಮದ್ದಳೆ ಅರ್ಥಗಾರಿಕೆ ಹಾಗೂ ಭಜನೆ ಕ್ಷೇತ್ರದಲ್ಲಿಯೂ ಹೆಸರು ಗಳಿಸಿದ್ದಾರೆ.

ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಸಮ್ಮೇಳನಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಅವರು ಈಗಾಗಲೇ ಅನೇಕ ಗೌರವ-ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಇವರ ಸಾಹಿತ್ಯ, ಸಮಾಜಸೇವೆ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ನೀಡಿರುವ ವಿಶಿಷ್ಟ ಕೊಡುಗೆ ಮನಗಂಡು 'ಕರುನಾಡ ರತ್ನ' ಪ್ರಶಸ್ತಿ ನೀಡಿ ಸನ್ಮಾನಿಸಲಾಗಿದೆ.

## ☛ ಒಂದನೇ ಪುಟದಿಂದ...

### ಕುಂಟತ್ತ ಸಾಗಿದೆ ಹೆದ್ದಾರಿ

ರಸ್ತೆ ಅಗಲೀಕರಣಗೊಳಿಸುವ ಜಾಗದಲ್ಲಿರುವ ಮರಗಳನ್ನು ಕಟಾವುಗೊಳಿಸಿದರೂ, ಗುತ್ತಿಗೆದಾರನ ನಿರ್ಲಕ್ಷ್ಯದಿಂದ ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿರುವುದು ಏಕೆ ಎಂಬ ಪ್ರಶ್ನೆಗೆ ತನ್ನದೇ ಆದ ಉತ್ತರವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ನೀಡುತ್ತಿದೆ. ಮಳೆಗಾಲ ಮುಕ್ತಾಯಗೊಂಡರೂ, ಕಾಮಗಾರಿಗೆ ವೇಗ ನೀಡದ ಕಾರಣ ಸವಾರರು ದಿನನಿತ್ಯ ತೊಂದರೆ ಅನುಭವಿಸುವಂತಾಗಿದೆ.

ನಗರದ ನಿಲೇಕಣಿಯ ಮೀನು ಮಾರುಕಟ್ಟೆಯಿಂದ ಜಿಲ್ಲೆಯ ಗಡಿ ಪ್ರದೇಶ ದಾಸನಕೊಪ್ಪದವರೆಗೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವನ್ನು ಬಿಜಾಪುರ ಮೂಲದ ಅಮ್ಮಾಪುರ ಇನ್ಫ್ರಾಸ್ಟಕ್ಚರ್ ಕಂಪೆನಿ ಗುತ್ತಿಗೆ ಪಡೆದಿದ್ದು , ರಸ್ತೆ ಅಗಲೀಕರಣಕ್ಕೆ ಡಿಪಿಆರ್ ಹಾಗೂ ಅವಶ್ಯವಿರುವ ಖಾಸಗಿ ಮತ್ತು ಸರ್ಕಾರಿ ಭೂಮಿಯನ್ನು ಗುರುತಿಸಿ ಭೂಸ್ವಾಧೀನ ಕೋರಿಕೆಯನ್ನೂ ವಿಳಂಬ ಮಾಡಿದೆ. ತಾಲೂಕಾಡಳಿತದಿಂದ ಒತ್ತಡ ಹೆಚ್ಚಿದಾಗ ಗುತ್ತಿಗೆ ಕಂಪೆನಿ 223 ಕಟ್ಟಡ ಗುರುತಿಸಿ ವರದಿ ಸಲ್ಲಿಸಿದೆ. ಅದರಲ್ಲಿ 72 ಸರ್ಕಾರಿ ಭೂಮಿಯಾಗಿದ್ದು , ವರದಿಯ ಪ್ರಕಾರ 65.35 ಲಕ್ಷ ರೂ. ಪರಿಹಾರದ ಹಣ ಎನ್‌ಎಚ್‌ಎಐ ನಿಂದ ಬರಬೇಕಿರುವುದು ಬಾಕಿ ಉಳಿದಿದೆ. ಖಾಸಗಿ ಜಾಗದಲ್ಲಿರುವ 153 ಕಟ್ಟಡದ ಬಗ್ಗೆ ಎನ್‌ಎಚ್‌ಎಐ ಮರು ಸರ್ವೆಗೆ ಹಾಕಲಾಗಿದೆ. ರಸ್ತೆ ನಿರ್ಮಾಣಕ್ಕೆ ಮೀನಮೇಷ ಎದುರಿಸುತ್ತಿರುವುದರಿಂದ 2 ವರ್ಷದೊಳಗಡೆ ಮುಕ್ತಾಯಗೊಳ್ಳಬೇಕಿದ್ದ ಕಾಮಗಾರಿಯು 4 ವರ್ಷವಾದರೂ ಮುಕ್ತಾಯಗೊಳ್ಳದಿರುವ ವ್ಯಾಪಕ ಟೀಕೆ ವ್ಯಕ್ತವಾಗುತ್ತಿದೆ.

ಕೆಲವು ಕಡೆಗಳಲ್ಲಿ ರಸ್ತೆ ಅಗಲೀಕರಣದ ನೆಪದಲ್ಲಿ ಅಗೆದು ಹಾಕಲಾಗಿದ್ದು , ಅಗೆದ ಕಡೆಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸದೇ ಬೇಕಾಬಿಟ್ಟಿಯಾಗಿ ಕಾಮಗಾರಿಯನ್ನು ಗುತ್ತಿಗೆ ಕಂಪೆನಿ ನಡೆಸುತ್ತಿದೆ. ಅಗೆದ ಕಾರಣ ರಸ್ತೆಯ ತುಂಬೆಲ್ಲ ಧೂಳಿನಿಂದ ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳು ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. ಗಂಭೀರ ಸಮಸ್ಯೆ ಎದುರಿಸುತ್ತಿದ್ದರೂ, ಧೂಳು ಅಡಗಿಸಲು ನೀರು ಹಾಕುತ್ತಿಲ್ಲ. ಮನಸ್ಸಿಗೆ ಬಂದಂತೆ ಕಾಮಗಾರಿ ನಡೆಸುತ್ತಿದ್ದಾರೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

### ನಾಯಿ ದಾಳಿ : ಸಲ್ಲಿಕೆಯಾಗದ ಅರ್ಜಿ

ಆದರೆ, ಜನ ಜಾಗೃತಿ ಕೊರತೆಯಿಂದ ಬೀದಿ ನಾಯಿ ಆಕ್ರಮಣಕ್ಕೆ ಒಳಗಾದವರು ಸ್ಥಳೀಯ ಆಡಳಿತಕ್ಕೆ ಮಾಹಿತಿ ನೀಡುತ್ತಿಲ್ಲ. ನಾಯಿ ದಾಳಿಗೆ ಒಳಗಾಗಿ ಸರ್ಕಾರಿ ಆಸ್ಪತ್ರೆಗೆ ದಾಖಲಾದವರ ಮಾಹಿತಿಯೂ ಸಮನ್ವಯದ ಕೊರತೆಯಿಂದ ನಗರ ಸಂಸ್ಥೆಗಳಿಗೆ ತಲುಪುತ್ತಿಲ್ಲ. ನಾಯಿ ಆಕ್ರಮಣಕ್ಕೆ ಒಳಗಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಪಡೆಯುವವರ ವಿವರ ಸರ್ಕಾರಕ್ಕೆ ಸಿಗುತ್ತಿಲ್ಲ. ಈ ಎಲ್ಲಾ ಹಿನ್ನಲೆ ಸಂತ್ರಸ್ತರಿಗೆ ಬೀದಿ ನಾಯಿಗಳ ಆಕ್ರಮಣಕ್ಕೆ ಒಳಗಾದವರಿದ್ದರೂ ಸಿಗಬೇಕಾದ ಸೌಲಭ್ಯ ಸಿಗುತ್ತಿಲ್ಲ.

ಬೀದಿ ನಾಯಿ ಕಚ್ಚಿ ಗಾಯಗೊಂಡ ಪ್ರತಿಯೊಬ್ಬರಿಗೂ 5 ಸಾವಿರ ರೂ ಕನಿಷ್ಠ ನೆರವು ನೀಡುವಂತೆ ಸರ್ಕಾರ ಸೂಚಿಸಿದೆ. ನಾಯಿ ಆಕ್ರಮಣದಿಂದ ಸಾವನಪ್ಪಿದವರ ಕುಟುಂಬಕ್ಕೆ 5 ಲಕ್ಷ ರೂ ಪರಿಹಾರ ಒದಗಿಸಲು ನಿರ್ದೇಶನವಿದೆ. ಇದಕ್ಕಾಗಿ ಸ್ಥಳೀಯ ಸಂಸ್ಥೆ ಮುಖ್ಯಸ್ಥರು, ತಾಲೂಕು ಆರೋಗ್ಯ ಅಧಿಕಾರಿಗಳು, ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ಸ್ಥಳೀಯ ಸಂಸ್ಥೆ ಆರೋಗ್ಯ ಅಧಿಕಾರಿ ಮಟ್ಟದಲ್ಲಿ ಸಮಿತಿ ರಚಿಸಲಾಗಿದೆ.

ಬೀದಿ ನಾಯಿ ದಾಳಿ ನಡೆದ ನಂತರ ದೂರು ಬರೆದೇ ಇದ್ದರೂ ಆಸ್ಪತ್ರೆಯಲ್ಲಿ ದಾಖಲಾಗುವ ರೋಗಿಯ ಆಧಾರದ ಮೇಲೆ ವಿವರ ಪಡೆದು ಮುಂದಿನ ಕ್ರಮ ಜರುಗಿಸಲು ಸರ್ಕಾರದ ನಿರ್ದೇಶನವಿದೆ. ದಾಳಿಗೆ ಒಳಗಾದವರಿಗೆ ಯೋಗ್ಯ ಚಿಕಿತ್ಸೆ ಒದಗಿಸುವುದು, ಮಹಜರು ನಡೆಸುವುದು, ಪರಿಹಾರ ವಿತರಣೆವರೆಗಿನ ಎಲ್ಲಾ ಜವಾಬ್ದಾರಿಗಳನ್ನು ಸಮಿತಿಗೆ ವಹಿಸಲಾಗಿದೆ. ಆದರೆ, ಇಲಾಖೆಗಳ ನಡುವಿನ ಸಮನ್ವಯ ಕೊರತೆ ಹಾಗೂ ಜನ ಜಾಗೃತಿ ಸಮಸ್ಯೆಯಿಂದ ಬೀದಿ ನಾಯಿ ದಾಳಿಗೆ ಒಳಗಾದವರಿಗೆ ಪರಿಹಾರ ಸಿಗುತ್ತಿಲ್ಲ.

### ಆರ್‌ಎಸ್‌ಎಸ್ ಪಥ ಸಂಚಲನ

ಚಿತ್ತಾಪುರದ ಬಜಾಜ್ ಕಲ್ಯಾಣ ಮಂಟಪದಿಂದ ಆರಂಭವಾದ ಪಥಸಂಚಲನವು ಅಂಬೇಡ್ಕರ್ ವೃತ್ತ, ಕೆನರಾ ಬ್ಯಾಂಕ್ ಸರ್ಕಲ್ ಮಾರ್ಗವಾಗಿ ಎಪಿಎಂಸಿವರೆಗೂ ಪೊಲೀಸರ ಸರ್ಪಗಾವಲಿನಲ್ಲಿಸುಮಾರು ಒಂದು ಗಂಟೆಯ ಕಾಲ ನಡೆಯಿತು.

ಪಥಸಂಚಲನದಲ್ಲಿ 300 ಕಾರ್ಯಕರ್ತರು ಹಾಗೂ 50 ಬ್ಯಾಂಡ್ ವಾದಕರಿಗೆ ಮಾತ್ರ ಅವಕಾಶ ನೀಡಲಾಗಿತ್ತು. ಆರ್‌ಎಸ್‌ಎಸ್ ಕಾರ್ಯಕರ್ತರ ಪಟ್ಟಣದ ನಿಗದಿತ ಮಾರ್ಗದಲ್ಲಿ ಸಾಗಿ ಬರುತ್ತಿದ್ದಾಗ ಜನರು ಪುಷ್ಪವೃಷ್ಟಿ ಮಾಡಿದರು.

ಪಥಸಂಚಲನದ ಹಿನ್ನಲೆಯಲ್ಲಿ ಎಸ್ಪಿ ನೇತೃತ್ವದಲ್ಲಿ ಚಿತ್ತಾಪುರದಲ್ಲಿ ಪೊಲೀಸರು ರೂಟ್ ಮ್ಯಾಪ್ ಮಾಡಿದ್ದರು. ಪಥಸಂಚಲನ ನಡೆದ ಬಜಾಜ್ ಕಲ್ಯಾಣ ಮಂಟಪದ ಬಳಿ ತಲಾ ಒಂದು ಕೆಎಸ್‌ಆರ್‌ಪಿ, ಡಿಎಆರ್ ತುಕಡಿ ಸೇರಿ 650 ಪೊಲೀಸರು, 250 ಹೋಮ್ ಗಾರ್ಡ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಚಿತ್ತಾಪುರದಲ್ಲಿ ಪಥಸಂಚಲನ ನಡೆಸುವುದಕ್ಕೆ ಅನುಮತಿ ಕೋರಿ ಆರ್‌ಎಸ್‌ಎಸ್ ಪಥಸಂಚಲನದ ಸಂಚಾಲಕ ಅಶೋಕ್ ಪಾಟೀಲ್ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರು. ಆದರೆ ಜಿಲ್ಲಾಡಳಿತ ಮನವಿಯನ್ನು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ವಿಚಾರ ಸಂಬಂಧ ಎರಡು ಬಾರಿ ಶಾಂತಿ ಸಭೆ ನಡೆದಿತ್ತು. ಮೊದಲ ಬಾರಿಗೆ ಅ.28ರಂದು ಜಿಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆದಿತ್ತು. ಈ ಸಭೆ ವಿಫಲವಾಗಿದ್ದ ಹಿನ್ನಲೆಯಲ್ಲಿ ಹೈಕೋರ್ಟ್ ಸೂಚನೆಯಂತೆ 2ನೇ ಬಾರಿ ಶಾಂತಿ ಸಭೆಯನ್ನು ಬೆಂಗಳೂರಿನ ಅಡ್ವೊಕೇಟ್ ಜನರಲ್ (ಎಜಿ) ಕಚೇರಿಯಲ್ಲಿ ನ.5ರಂದು ನಡೆಸಲಾಗಿತ್ತು. ಪಥಸಂಚಲನಕ್ಕೆ ಅನುಮತಿ ನಿರಾಕರಿಸಿದ್ದ ಜಿಲ್ಲಾಡಳಿತದ ಕ್ರಮ ಪ್ರಶ್ನಿಸಿ, ಆರ್‌ಎಸ್‌ಎಸ್ ಕಲಬುರಗಿ ಜಿಲ್ಲಾ ಸಂಚಾಲಕ ಅಶೋಕ್ ಪಾಟೀಲ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರಿದ್ದ ಕಲಬುರಗಿ ನ್ಯಾಯಪೀಠ, ಪಥಸಂಚಲನಕ್ಕೆ ತಹಶೀಲ್ದಾರ್ ನೀಡಿರುವ ಅನುಮತಿಯನ್ನು ಪರಿಗಣಿಸಿ, ಈ ಆದೇಶ ನೀಡಿ ಅರ್ಜಿಯನ್ನು ಇತ್ಯರ್ಥಪಡಿಸಿತ್ತು.

### ಪಥ ಸಂಚಲನಕ್ಕೆ ನನ್ನ ವಿರೋಧ ಇಲ್ಲ

ಅವರಿಗೆ ಕಾನೂನಿನ ನಿಯಮವನ್ನು ಪಾಲಿಸದಿರುವ ಅಭ್ಯಾಸವಿದೆ. ಈಗ ಅವರು ನಿಯಮಗಳನ್ನು ಪಾಲಿಸುತ್ತಿದ್ದಾರೆ. ಅವರು ಅದನ್ನು ಮಾಡಲಿ ಎಂದು ಪ್ರತಿಕ್ರಿಯಿಸಿದ್ದಾರೆ. 'ಕಠಿಣ ಷರತ್ತುಗಳನ್ನು ವಿಧಿಸಲಾಗಿದೆ. ಅವರು ಷರತ್ತುಗಳನ್ನು ಪಾಲಿಸದಿದ್ದರೆ, ಅವರು ಕಾನೂನಿನ ಪ್ರಕಾರ ಶಿಕ್ಷೆಯನ್ನು ಎದುರಿಸಬೇಕಾಗುತ್ತದೆ. ಇಲ್ಲಿ ಏನು ಸಮಸ್ಯೆ? ಮೊದಲು, ಅವರು ಈ ಬಗ್ಗೆ ತಿಳಿಸುತ್ತಿದ್ದರು; ಆದರೆ ಈಗ ಅವರು ಅನುಮತಿ ಪಡೆಯುತ್ತಿದ್ದಾರೆ. ನಾವು ಅವರನ್ನು ಕಾನೂನು ಮತ್ತು ಸಂವಿಧಾನವನ್ನು ಪಾಲಿಸುವಂತೆ ಕೇಳಿಕೊಂಡಿದ್ದೇವೆ. ಅದನ್ನು ಅವರು 100 ವರ್ಷಗಳಲ್ಲಿ ಮೊದಲ ಬಾರಿಗೆ ಮಾಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

### ದೆಹಲಿಯತ್ತ ಶಾಸಕ, ಸಚಿವರ ದಂಡು

ಇನ್ನು ಕೆಲವು ಸಚಿವರು ದೆಹಲಿಗೆ ಭೇಟಿ ನೀಡುತ್ತಿದ್ದು ಕುರ್ಚಿ ಭದ್ರಪಡಿಸಿಕೊಳ್ಳಲು ಹೈಕಮಾಂಡ್ ನಾಯಕರ ಮೇಲೆ ಒತ್ತಡ ಹೇರುತ್ತಿದ್ದಾರೆ. ಸಚಿವ ಸಂಪುಟ ಪುನರ್ ರಚನೆಗೆ ಹಸಿರು ನಿಶಾನೆ ಸಿಕ್ಕಿರುವ ಹಿನ್ನೆಲೆಯಲ್ಲಿ ನಾಯಕತ್ವದ ಚರ್ಚೆ ನೇಪಥ್ಯಕ್ಕೆ ಸರಿದಿದೆ. ಡಿ.ಕೆ. ಶಿವಕುಮಾರ ಅವರ ಸಿಎಂ ಕನಸು ನನಸಾಗುವ ಸಾಧ್ಯತೆ ಸದ್ಯಕ್ಕಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ಥಾನ ಅಭಾದಿತ ಎನ್ನಲಾಗುತ್ತಿದೆ.

ಹೈಕಮಾಂಡ್ ಒಪ್ಪಿದರೂ ಸ್ಥಳೀಯ ಪರಿಸ್ಥಿತಿಯಲ್ಲಿ ಸಂಪುಟ ಪುನರ್ ರಚನೆ ಕಷ್ಟಸಾಧ್ಯ ಎನ್ನಲಾಗುತ್ತಿದೆ. ರಾಜ್ಯ ರಾಜಕಾರಣದಲ್ಲಿ ಮೂರ್ನಾಲ್ಕು ಶಕ್ತಿ ಕೇಂದ್ರಗಳು ಸೃಷ್ಟಿಯಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಪುಟ ಪುನರ್ ರಚನೆಯ ಪರಮಾಧಿಕಾರ ಇದ್ದರೂ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪಟ್ಟಿಯನ್ನು ಸಮದೂಗಿಸಬೇಕಿದೆ. ಕಳೆದ ಎರಡೂವರೆ ವರ್ಷಗಳಿಂದ ನಿಗಮ ಮಂಡಳಿಗಳಿಗೆ ಸದಸ್ಯರು ಹಾಗೂ ನಿರ್ದೇಶಕರನ್ನು ನೇಮಿಸಲು ಸಾಧ್ಯವಾಗಿಲ್ಲ. ಖರ್ಗೆ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರ ಪ್ರತ್ಯೇಕ ಪಟ್ಟಿಗಳು ಗೊಂದಲಕಾರಿಯಾಗಿದ್ದು , ಅದನ್ನು ದೆಹಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್‌ಸಿಂಗ್ ಸುರ್ಜೇವಾಲ, ಕೆ.ಸಿ. ವೇಣುಗೋಪಾಲ ಅವರು ಒಂದಷ್ಟು ದಿನ ತಮ್ಮ ಕಚೇರಿಯಲಲ್ಲೆ ಇಟ್ಟುಕೊಂಡಿರುವುದರಿಂದ ಯಾವುದೂ ಇತ್ಯರ್ಥವಾಗಿಲ್ಲ, ನೇಮಕಾತಿಯೂ ಪೂರ್ಣಗೊಂಡಿಲ್ಲ. ಸಚಿವ ಸಂಪುಟ ಪುನರ್‌ರಚನೆ ಚರ್ಚೆಗಳು ಆರಂಭವಾದಾಗಲೂ ಇದೇ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಹೇಳಲಾಗುತ್ತಿದೆ.

# ಮಾಗೋಡ ದೇವಸ್ಥಾನದಲ್ಲಿ ಮೆಚ್ಚುಗೆ ಗಳಿಸಿದ ಯಕ್ಷಗಾನ ಪ್ರದರ್ಶನ

**● ತತ್ತ್ವನಿಷ್ಠ, ಯಲ್ಲಾಪುರ:** ತಾಲೂಕಿನ ಮಾಗೋಡ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಕಾರ್ತಿಕೋತ್ಸವದ ಪ್ರಯುಕ್ತ ಯಕ್ಷಗಾನ ಪ್ರದರ್ಶನ ನಡೆಯಿತು.



ಇದಕ್ಕೂ ಮುನ್ನ ನಡೆದ ಸಭಾ ಕಾರ್ಯಕ್ರಮದಲ್ಲಿ ಹಿರಿಯ ಮದ್ದಲೆವಾದಕ ಶಂಕರ ಭಾಗ್ವತ ಅವರನ್ನು ಸನ್ಮಾನಿಸಲಾಯಿತು. ಶಿವರಾಮ ಭಾಗ್ವತ ಮಣ್ಕುಳಿಅಭಿನಂದನಾನುಡಿಗಳನ್ನಾಡಿದರು.

ಹಿರಿಯ ವೈದಿಕರಾದ ರಾಮಕೃಷ್ಣ ಭಟ್ಟ, ಗಣಪತಿ ಭಟ್ಟ, ನಾರಾಯಣ ಭಟ್ಟ ಮೊಟ್ಟೆಗದ್ದೆ, ಆನಗೋಡ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಎನ್.ಕೆ. ಭಟ್ಟ ಅಗ್ಗಾಶಿಕುಂಬ್ರಿ, ಪಿ.ಎಲ್. ಡಿ ಬ್ಯಾಂಕ್ ಅಧ್ಯಕ್ಷ ಆರ್.ಎಸ್. ಭಟ್ಟ, ವಿಶ್ವದರ್ಶನ ಶಿಕ್ಷಣ ಸಮೂಹದ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ, ಎಲ್.ಎಸ್.ಎಂ.ಪಿ ಸೊಸೈಟಿ ಅಧ್ಯಕ್ಷ ನಾಗರಾಜ ಕವಡಿಕೆರೆ, ಉಪಾಧ್ಯಕ್ಷ ಟಿ.ಆರ್. ಹೆಗಡೆ, ನಿರ್ದೇಶಕ ಎಂ.ಎನ್. ಭಟ್ಟ, ದೇವಸ್ಥಾನದ ಆಡಳಿತ ಮಂಡಳಿಯ ಗೋಪಾಲಕೃಷ್ಣ ಭಟ್ಟ, ಟಿಎಂಎಸ್ ಮಾಜಿ ನಿರ್ದೇಶಕ ವೆಂಕಟರಮಣ ಭಟ್ಟ ಕಿರಕುಂಭತ್ತಿ ಇತರರಿದ್ದರು.

ವೇದಾ ಭಟ್ಟ ಪ್ರಾರ್ಥಿಸಿದರು. ಎನ್.ಎಸ್ ಭಟ್ಟ ಸ್ವಾಗತಿಸಿದರು. ನರಸಿಂಹ ಭಟ್ಟ ಕುಂಕಿಮನೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಂಜುನಾಥ ಜೋಶಿ ನಿರ್ವಹಿಸಿ, ವಂದಿಸಿದರು.

ಪ್ರಸಿದ್ಧ ಕಲಾವಿದರಿಂದ ಪ್ರದರ್ಶನಗೊಂಡ ಚಂದ್ರಹಾಸ ಚರಿತ್ರೆ, ಹಾಗೂ ಬಬ್ರುವಾಹನ ಯಕ್ಷಗಾನ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು.

ಹಿಮ್ಮೇಳದಲ್ಲಿ ಭಾಗವತರಾಗಿ ಕೇಶವ ಹೆಗಡೆ ಕೊಳಗಿ, ಅನಂತ ಹೆಗಡೆ ದಂತಳಿಗೆ, ಶಶಾಂಕ ಬೋಡೆ, ಮಂಜುನಾಥ ಭಟ್ಟ ದೇವದಮನೆ, ಮದ್ದಲೆವಾದಕರಾಗಿ ಶಂಕರ ಭಾಗ್ವತ ಯಲ್ಲಾಪುರ, ಅನಿರುದ್ಧ ಹೆಗಡೆ ವರ್ಗಾಸರ, ಚಂಡೆವಾದಕರಾಗಿ ಪ್ರಶಾಂತ ಹೆಗಡೆ ಕೈಗಡಿ ಭಾಗವಹಿಸಿದ್ದರು.

ಗಣಪತಿ ಹೆಗಡೆ ತೋಟಿಮನೆ, ಈಶ್ವರ ನಾಯ್ಕ ಮಂಕಿ, ಸದಾಶಿವ ಮಲವಳ್ಳಿ, ಉದಯ ಹೆಗಡೆ ಕಡಬಾಳ, ನಾಗೇಂದ್ರ ಭಟ್ಟ ಮೂರೂರು, ನಾಗರಾಜ ಭಟ್ಟ ಕುಂಕಿಪಾಲ, ಸನ್ಮಯ ಭಟ್ಟ ಮಲವಳ್ಳಿ, ಮಂಜುನಾಥ ಹೆಗಡೆ ಹಿಲ್ಲೂರು, ದೀಪಕ ಭಟ್ಟ ಕುಂಕಿ, ಶ್ರೀಧರ ಅಣಲಗಾರ, ಆದರ್ಶ ಭಟ್ಟ ಈರಾಪುರ, ವೆಂಕಟ್ರಮಣ ಭಟ್ಟ ಕವಡಿಕೆರೆ ಪಾತ್ರ ನಿರ್ವಹಿಸಿದರು.

# ಕಟ್ಟಡದ ಶಂಕುಸ್ಥಾಪನೆ: ಸಾಂಸ್ಕೃತಿಕ ಕಾರ್ಯಕ್ರಮ



**● ತತ್ತ್ವನಿಷ್ಠ, ಯಲ್ಲಾಪುರ:** ಪಟ್ಟಣದ ಸರ್ಕಾರಿ ನೌಕರ ಭವನದ ಆವರಣದಲ್ಲಿ ಶನಿವಾರ ಸಂಜೆ ನೂತನ ಕಟ್ಟಡದ ಶಂಕುಸ್ಥಾಪನೆ ಪ್ರಯುಕ್ತ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಡಿ.ಆರ್.ಎಫ್.ಒ.ಗಳ ಸಂಘದ ರಾಜ್ಯ ಅಧ್ಯಕ್ಷ ಶ್ರೀನಿವಾಸ ನಾಯ್ಕ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿದರು.

ತಾಲೂಕಾ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಸಂಜೀವಕುಮಾರ ಹೊಸ್ಕೇರಿ, ಸಂಘದ ಪದಾಧಿಕಾರಿಗಳು, ನಿರ್ದೇಶಕರು ಇದ್ದರು. ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶಿಕ್ಷಣ ಸಂಯೋಜಕ ಸುಧಾಕರ ಜಿ. ನಾಯಕ, ಸಿ.ಆರ್.ಪಿ. ಚಂದ್ರಹಾಸ ನಾಯ್ಕ ನಿರ್ವಹಿಸಿದರು. ಅಂತರಾಷ್ಟ್ರೀಯ ದಾಖಲೆಗಳನ್ನು ತಮ್ಮದಾಗಿಸಿಕೊಂಡ ತನುಶ್ರೀ ಉಡುಪಿ ಅವರಿಂದ ನಡೆದ ಆಕರ್ಷಕ ಯೋಗ ನೃತ್ಯ ನೆರೆದ ಜನರನ್ನು ಮಂತ್ರಮುಗ್ಧರನ್ನಾಗಿಸಿತು. ಶಿಕ್ಷಕಿ ರೇಖಾ ಭಟ್ಟ ಅವರಿಂದ ಭಾವಗೀತೆ, ಸವಣಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಂದ ಭರತನಾಟ್ಯ ಕಾರ್ಯಕ್ರಮ ನಡೆಯಿತು.

## ಆರ್.ವಿ. ಗಾವಡಿ ನಿಧನ

**● ತತ್ತ್ವನಿಷ್ಠ, ಕುಮಟಾ:** ಶಿಕ್ಷಣ ಲೋಕದಲ್ಲಿ ತಮ್ಮದೇ ಛಾಪು ಮೂಡಿಸಿ, ಹೆಸರು ಮಾಡಿದ್ದ ಗಿಬ್ ಹೈಸ್ಕೂಲ್‌ನ ಹಿರಿಯ ಶಿಕ್ಷಕ ಆರ್.ವಿ. ಗಾವಡಿ ಮಾಸ್ತರು(87) ಶನಿವಾರ ಬೆಳಿಗ್ಗೆ



ಇಹಲೋಕ ತ್ಯಜಿಸಿದ್ದಾರೆ. ವಯೋಸಹಜ ಅನಾರೋಗ್ಯದಿಂದ ಮಣಿಪಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ನಿಧನರಾದರು. ಬಹು ಪೀಳಿಗೆಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ವಿಷಯದ ಗಾಢ ಪಾಂಡಿತ್ಯ, ಸರಳತೆ, ವಿನಯ, ಮತ್ತು ಮಮತೆಯಿಂದ ಸ್ಫೂರ್ತಿಯಾಗಿದ್ದ ಗಾವಡಿ ಮಾಸ್ತರರು, ಶಿಕ್ಷಣವೆಂದರೆ ಕೇವಲ ಪಾಠವಲ್ಲ, ವ್ಯಕ್ತಿತ್ವ ರೂಪಿಸುವ ಕಾರ್ಯ ಎಂಬ ನಂಬಿಕೆಯಿಂದ ಬದುಕಿದ್ದರು. ಶಾಲೆಯ ಅನುಭವ, ಜೀವನ ಮೌಲ್ಯಗಳು ಮತ್ತು ಮಾನವೀಯತೆಯನ್ನು ಪಾಠಗಳೊಂದಿಗೆ ಬೆರೆಸಿ ಬೋಧಿಸುವ ಸಾಮರ್ಥ್ಯ ಅವರಿಗೆ ಅನನ್ಯ ಗೌರವ ತಂದುಕೊಟ್ಟಿತ್ತು. ಅವರ ವಿಧಾನದ ಬಲವೇ, ಇಂದಿಗೂ ವಿದ್ಯಾರ್ಥಿಗಳು ಅವರನ್ನು 'ಮಾಸ್ತರರಲ್ಲ ಮಹಾಗುರು' ಎಂಬ ಗೌರವದಿಂದ ನೆನಪಿಸಿಕೊಳ್ಳುವಂತೆ ಮಾಡಿದೆ. ಗಾವಡಿ ಮಾಸ್ತರರ ಅಗಲಿಕೆ ನಮ್ಮ ಜೀವನದಲ್ಲಿ ಖಾಲಿತನ ಮೂಡಿಸಿದೆ. ಅವರು ನೀಡಿದ ಪಾಠಗಳು ನಮ್ಮ ಬದುಕಿನ ದಾರಿ ಬೆಳಗುತ್ತವೆ ಎಂದು ಕೆನರಾ ಶಿಕ್ಷಣ ಸಂಸ್ಥೆಯವರು ತಮ್ಮ ಸಂತಾಪ ಸಂದೇಶದಲ್ಲಿ ಹೇಳಿದ್ದಾರೆ. ಮೃತರು ಪತ್ನಿ, ಒಬ್ಬ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅನೇಕ ವಿದ್ಯಾರ್ಥಿಗಳನ್ನು ಅಗಲಿದ್ದಾರೆ.

## ಗಾಂಜಾವಾಲಾಗಳ ಬಂಧನ



**● ತತ್ತ್ವನಿಷ್ಠ, ಭಟ್ಕಳ:** ತಾಲೂಕಿನ ಗುಳ್ಮಿ ಲಕ್ಕೀ ಶ್ಯಾವಿಗೆ ಫ್ಯಾಕ್ಟರಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಸೇವಿಸುತ್ತಿದ್ದ ಇಬ್ಬರು ಯುವಕರನ್ನು ಗ್ರಾಮೀಣ ಪೊಲೀಸರು ದಾಳಿ ವೇಳೆ ಪತ್ತೆಹಚ್ಚಿ ಬಂಧಿಸಿದ್ದಾರೆ. ಚೌಥನಿ ನಿವಾಸಿ ಸಯ್ಯದ್, ಬಿಲಾಲಖಂಡ ಗುಳ್ಮಿ ನಿವಾಸಿ ಮಹಮ್ಮದ್ ಅಬೀದ್ ಗಾಂಜಾ ಸೇವನೆ ಮಾಡಿದ ಸ್ಥಿತಿಯಲ್ಲಿ ಸಿಕ್ಕಿಬಿದ್ದಿದ್ದು ಇಬ್ಬರನ್ನೂ ವಶಕ್ಕೆ ಪಡೆದು ಬಂಧನಕ್ಕೊಳಪಡಿಸಿದ್ದರು. ಗ್ರಾಮೀಣ ಠಾಣೆಯ ಪಿಎಸ್ಐ ಭರಮಪ್ಪ ಬೆಳಗಲಿ ಇಬ್ಬರ ಮೇಲೂ ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ, ಆರೋಪಿಗಳ ವೈದ್ಯಕೀಯ ಪರೀಕ್ಷೆ ನಡೆಸಲಾಗಿದ್ದು, ವರದಿ ದೃಢಪಟ್ಟ ಹಿನ್ನೆಲೆಯಲ್ಲಿ ಇಬ್ಬರನ್ನೂ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು, ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೊಳಪಡಿಸಿ ಆದೇಶ ನೀಡಿದ್ದಾರೆ.

# ಜಿಲ್ಲೆಯಲ್ಲಿ ಹಾಲಿನ ಉತ್ಪಾದನೆ ದಾಖಲೆಯ ವೇಗದಲ್ಲಿ ಹೆಚ್ಚಳ: ಸುರೇಶ್ಚಂದ್ರ ಹರ್ಷ

### ಜಿಲ್ಲೆಯಲ್ಲಿ 1 ಲಕ್ಷ ಲೀ. ದೈನಂದಿನ ಉತ್ಪಾದನೆ ಸಾಧಿಸುವ ಗುರಿ ಒಕ್ಕೂಟದ ಮುಂದಿದೆ

**● ತತ್ತ್ವನಿಷ್ಠ, ಶಿರಸಿ:** ಧಾರವಾಡ, ಗದಗ ಹಾಗೂ ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟದ ಉಪಾಧ್ಯಕ್ಷ ಸುರೇಶ್ಚಂದ್ರ ಕೃಷ್ಣ ಹೆಗಡೆ (ಕೆಶಿನ್ಮನೆ) ಅವರು ಹುತ್ಗಾರ ಮತ್ತು ಚಪ್ಪರಕಟ್ಟೆ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಭೇಟಿ ನೀಡಿ, ಜಾನುವಾರು ವಿಮಾ ಯೋಜನೆಯಡಿ ಮರಣ ಹೊಂದಿದ ಜಾನುವಾರುಗಳ ಮಾಲಕರಿಗೆ ತಲಾ 40,000 ರೂ. ಹಾಗೂ 30,000 ರೂ. ಪರಿಹಾರ ಮೊತ್ತವನ್ನು ವಿತರಿಸಿದರು.





ಈ ಸಂದರ್ಭದಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳ ಹಿಂದೆ ಪ್ರತಿದಿನ 35 ಸಾವಿರ ಲೀ. ಇದ್ದ ಹಾಲು ಶೇಖರಣೆ, ಈ ಅಕ್ಟೋಬರ್ ಅಂತ್ಯದ ವೇಳೆಗೆ 75 ಸಾವಿರ ಲೀ.ಗೆ ಏರಿಕೆಯಾಗಿದೆ. ಜಿಲ್ಲೆಯಲ್ಲಿ ಹಾಲಿನ ಉತ್ಪಾದನೆ ದಾಖಲೆಯ ವೇಗದಲ್ಲಿ ಹೆಚ್ಚುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಹಾಲು ಉತ್ಪಾದಕ ರೈತರು ಸ್ವಾವಲಂಬಿ ಜೀವನ ನಡೆಸಲು ಹೈನುಗಾರಿಕೆ ಬಲವಾಗಿ ನೆರವಾಗುತ್ತಿದ್ದು, ಇದರತ್ತ ಇನ್ನಷ್ಟು ರೈತರನ್ನು ಆಕರ್ಷಿಸಲು ಒಕ್ಕೂಟ ಪ್ರೋತ್ಸಾಹ ಮಾಡುತ್ತಿದೆ ಎಂದು ಸುರೇಶ್ಚಂದ್ರ ಹೆಗಡೆ ಹೇಳಿದರು. ಹಾಲಿಗೆ ಸೂಕ್ತ ದರ ನೀಡುವ ಮೂಲಕ ರೈತರಿಗೆ ಸಮಾಧಾನಕರ ಬೆಲೆ ದೊರಕುವಂತೆ ಮಾಡಲಾಗುತ್ತಿದ್ದು, ಹೈನುಗಾರಿಕೆ ಲಾಭದಾಯಕವಲ್ಲ ಎಂಬ ತಪ್ಪು ಕಲ್ಪನೆ ಈಗ ದೂರವಾಗಿದೆ ಎಂದು ಹೇಳಿದರು.

ಕಳೆದ ವರ್ಷದ ಹಾಲು ಶೇಖರಣೆಗೆ ಹೋಲಿಕೆಯಾಗಿ ಪ್ರತಿ ದಿನ 24,000 ಲೀ.ಗಳಷ್ಟು ಹೆಚ್ಚಳ ದಾಖಲಾಗಿರುವುದಾಗಿ ಅವರು ತಿಳಿಸಿದರು.

ಉತ್ಪಾದನೆ ಹೆಚ್ಚುತ್ತಿರುವಾಗ, ಹಾಲಿನ ಗುಣಮಟ್ಟದ ಮೇಲೂ ಉತ್ಪಾದಕರು ಹೆಚ್ಚಿನ ಗಮನ ಹರಿಸಿದರೆ, ಜಿಲ್ಲೆಯಲ್ಲಿ 1 ಲಕ್ಷ ಲೀ. ದೈನಂದಿನ ಉತ್ಪಾದನೆ ಸಾಧಿಸುವ ಗುರಿಯನ್ನು ಒಕ್ಕೂಟ ಮುಂದಿಟ್ಟಿದೆ ಎಂದರು.

ಜಾನುವಾರುಗಳಿಗೆ ವಿಮೆ ಮಾಡಿಸುವ ಮಹತ್ವವನ್ನೂ ಅವರು ಪ್ರಸ್ತಾಪಿಸಿದರು. ಮನುಷ್ಯರಿಗೆ ಇರುವಂತೆ ಜಾನುವಾರುಗಳಿಗೂ ಅನೇಕ ರೋಗಗಳು ಕಾಣಿಸಿಕೊಳ್ಳುತ್ತವೆ. ಹೀಗಾಗಿ ಪ್ರತಿಯೊಬ್ಬ ಹಾಲು ಉತ್ಪಾದಕರು ತಮ್ಮ ಜಾನುವಾರುಗಳಿಗೆ ವಿಮೆ ಮಾಡಿಸಿಕೊಳ್ಳುವುದು ಅತ್ಯವಶ್ಯಕ ಎಂದು ಹೇಳಿದರು.

ಈ ಸಂದರ್ಭದಲ್ಲಿ ಧಾರವಾಡ ಹಾಲು ಒಕ್ಕೂಟದ ಕಲ್ಯಾಣ ನಿಧಿಯಿಂದ ದೇವನಳ್ಳಿ, ಹೆಗಡೆಕಟ್ಟಾ ಹಾಲು ಸಂಘಗಳ ಮಂಜಾ ಬೂದು ಮರಾಠಿ, ಸುಬ್ರಾಯ ಗೋವಿಂದ ಹೆಗಡೆ ಹಾಗೂ ಸುಶೀಲಾ ಮಧುಕೇಶ್ವರ ಹೆಗಡೆ ಇವರ ವಾರಸುದಾರರಿಗೆ ತಲಾ 10,000 ರೂ. ನೀಡಲಾಯಿತು. ಸುಮಂಗಲಾ ಗಣಪತಿ ಗೌಡ ಮತ್ತು ನರೂರು ಹಾಲು ಸಂಘದ ಶ್ರೀಕಾಂತ ನರಸಿಂಹ ಭಟ್ ಅವರಿಗೆ ಶಸ್ತ್ರಚಿಕಿತ್ಸೆಗಾಗಿ ತಲಾ 5,000 ರೂ. ನೀಡಲಾಯಿತು. ಮಧುರವಳ್ಳಿ ಹಾಲು ಸಂಘಕ್ಕೆ 1,17,000 ರೂ. ಅನುದಾನ ವಿತರಿಸಲಾಯಿತು.

ಕೆಡಿಸಿಸಿ ಬ್ಯಾಂಕ್ ಶಿರಸಿಯ ವತಿಯಿಂದ ವಾನಳ್ಳಿ ಹಾಲು ಸಂಘಕ್ಕೆ 15,000 ರೂ., ಉಳ್ಳಾಲಕೊಪ್ಪ ಹಾಲು ಸಂಘಕ್ಕೆ 17,000 ರೂ. ಅನುದಾನ ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಹುತ್ಗಾರ ಮತ್ತು ಚಪ್ಪರಕಟ್ಟೆಯ ಸಂಘಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಫಲಾನುಭವಿಗಳು, ಹಾಲು ಉತ್ಪಾದಕರು ಹಾಗೂ ಧಾರವಾಡ ಹಾಲು ಒಕ್ಕೂಟದ ಜಿಲ್ಲಾಮುಖ್ಯಸ್ಥ ಶ್ರೀಪ್ರಸಾದ್ ಎಸ್. ಬಿಜೂರ್, ವಿಸ್ತರಣಾಧಿಕಾರಿ ಮೌನೇಶ ಸೋನಾರ ಮತ್ತು ಸಮಾಲೋಚಕರು ಜಯಂತ ಪಟಗಾರ, ಅಭಿಷೇಕ ನಾಯ್ಕ ಉಪಸ್ಥಿತರಿದ್ದರು.

# ಅಜ್ಞಾತ ಹೋರಾಟಗಾರರ ಸಾಹಸಗಳ ಸ್ಮರಣೆ

**● ತತ್ತ್ವನಿಷ್ಠ, ಕುಮಟಾ:** ಸ್ವಾತಂತ್ರ್ಯ ಹೋರಾಟದ ಅನೇಕ ಅಜ್ಞಾತ ಅಧ್ಯಾಯಗಳನ್ನು ಬೆಳಕಿಗೆ ತರುವ ಹೆಗ್ಗುರುತು ಪಡೆದಿರುವ ದಿ. ಗೋವಿಂದ ಮಂಜುನಾಥ ಕಾಮತ ಅವರ ಹಸ್ತಪ್ರತಿಯ ಆಧಾರದ ಮೇಲೆ ರಚಿತ 'ಗುಪ್ತಗಾಮೀ ರಾಷ್ಟ್ರಪ್ರೇಮಿ' ಪುಸ್ತಕ ಪಟ್ಟಣದ ಮಹಾಲಸಾ ಕಲಾಕ್ಷೇತ್ರದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಬಿಡುಗಡೆಗೊಂಡಿತು.



ಹೊನ್ನಾವರದ ಹೆಸರಾಂತ ಹಿರಿಯ ಪತ್ರಕರ್ತ ಜಿ.ಯು. ಭಟ್ ಅವರು ಈ ಕೃತಿಯನ್ನು ಸಾರ್ವಜನಿಕರಿಗೆ ಸಮರ್ಪಿಸಿದರು. ಸಹಜ ಸರಳತೆಯ ಮಧ್ಯೆಯೇ ಗಂಭೀರತೆಯಿಂದ ನಡೆದ ಈ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 1942-43ರ ಕ್ವಿಟ್ ಇಂಡಿಯಾ ಆಂದೋಲನದ ಸಮಯದಲ್ಲಿ ಕುಮಟಾ ಪ್ರದೇಶದಲ್ಲಿ ಮತ್ತು ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಅನೇಕ ಘಟನೆಗಳು ಇಂದಿಗೂ ಜನಸಾಮಾನ್ಯರ ಗಮನಕ್ಕೆ ಬಂದಿಲ್ಲ. ಗೋವಿಂದ ಕಾಮತ ಅವರ ಈ ಹಸ್ತಪ್ರತಿ, ಅಂಥ ಅನಾವೃತ ಅಧ್ಯಾಯಗಳನ್ನು ದಾಖಲಿಸಿರುವ ಮಹತ್ವದ ದಾಖಲೆಯಾಗಿದೆ, ಎಂದು ಹೇಳಿದರು.

ಹಿಂದೆ ದೇಶಭಕ್ತರು ರಾಷ್ಟ್ರರಕ್ಷಣೆಗೆ ಬಾಂಬ್ ಇಡುತ್ತಿದ್ದ ಕಾಲವಿತ್ತು; ಇಂದು ವ್ಯತಿರಿಕ್ತವಾಗಿ ರಾಷ್ಟ್ರದ್ರೋಹಕ್ಕೆ ಅವಕಾಶ ನೀಡುವ ಪರಿಸ್ಥಿತಿಗಳತ್ತ ಸಮಾಜ ಸಾಗುತ್ತಿರುವುದು ವಿಷಾದನೀಯ, ಎಂದು ಸಮಕಾಲೀನ ಪರಿಸ್ಥಿತಿಯ ಕುರಿತ ಚಿಂತೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ವೇದಮೂರ್ತಿ ಅಮಿತ ಭಟ್ ಅವರ ವೇದಘೋಷ ಮಂಡಿಸಿ ಪ್ರತಿಧ್ವನಿಸಿ ಸಂಭ್ರಮಕ್ಕೆ ಪೌರಾಣಿಕ ಮೆರಗು ನೀಡಿತು. ಗೋವಿಂದ ಕಾಮತರ ಪುತ್ರ, ಅನಿಲ್ ಕಾಮತ ಅವರು ಸ್ವಾಗತ ಭಾಷಣ ನೀಡಿ, ಕೃತಿಯ ಹಿನ್ನೆಲೆ ಹಾಗೂ ಪ್ರಕಟಣೆಯ ಪ್ರಯತ್ನಗಳನ್ನು ಪರಿಚಯಿಸಿದರು. ಹಿರಿಯ ಶಿಕ್ಷಣ ತಜ್ಞ ಹಾಗು ಯಕ್ಷಗಾನ ಅಕಾಡೆಮಿ ಮಾಜಿ ಅಧ್ಯಕ್ಷರಾದ ಡಾ. ಜಿ.ಎಲ್. ಹೆಗಡೆ ಪುಸ್ತಕದ ಕುರಿತು ಸಮಗ್ರವಾದ ಮಾಹಿತಿ ನೀಡಿದರು. ಚಿಂತಕ ಪುಟ್ಟು ಕುಲಕರ್ಣಿ ಅವರು ಪುಸ್ತಕ ರಚನೆಯಲ್ಲಿನ ತಮ್ಮ ಪಾತ್ರವನ್ನು ವಿವರಿಸಿದರು. ಕೃತಿಯಲ್ಲಿ ಉಲ್ಲೇಖಿತವಾದ ಸ್ಥಳಗಳಿಗೆ ಸ್ವತಃ ಭೇಟಿ ನೀಡಿ, ಅಲ್ಲಿನ ಪ್ರಜ್ಞಾವಂತ ಹಿರಿಯರಿಂದ ಸಂಭ್ರಮದ ಸಮಯಗಳ ಕಥನ, ದಾಖಲೆಗಳು, ನೆನಪುಗಳನ್ನು ಸಂಗ್ರಹಿಸುವ ಮೂಲಕ ವಿಷಯವನ್ನು ಪ್ರಾಮಾಣಿಕವಾಗಿ ರೂಪಿಸಿರುವ ಬಗ್ಗೆ ತಿಳಿಸಿದರು. ಒಂದು ಕಾಲದಲ್ಲಿ ಗುಪ್ತವಾಗಿ ನಡೆದ ಹೋರಾಟ ಇಂದಿಗೆ ಜನಸಾಮಾನ್ಯರಿಗೆ ತಿಳಿಯಬೇಕು ಎಂಬ ಆಶಯ ನಮ್ಮದು, ಎಂದರು.


ಅಜ್ಞಾತ ಹೋರಾಟಗಾರರ ಕುರಿತು ಪುಸ್ತಕವು ಹೊಸ ಪೀಳಿಗೆಗೆ ಮೌಲ್ಯಯುತ ದಾಖಲೆ. ಸ್ವಾತಂತ್ರ್ಯ ಹೋರಾಟ ಕೇವಲ ಹೆಸರು ಪಡೆದ ನಾಯಕರಿಂದಷ್ಟೇ ಅಲ್ಲ, ಅಲೆಮಾರಿ ಮಕ್ಕಳಿಂದ ಹಿಡಿದು ವಿದ್ಯಾರ್ಥಿಗಳವರೆಗೆ ಎಲ್ಲರ ಬಲಿದಾನದ ಚರಿತ್ರೆ. ಪುಸ್ತಕವು ಸ್ಥಳೀಯ ಇತಿಹಾಸದ ದಾಖಲಿಕೆಯಲ್ಲಿ ಮಹತ್ವದ ಕೊಡುಗೆ ಎಂದು ಶಿಕ್ಷಣ ತಜ್ಞ ದಿನಕರ ಮಾಧವ ಕಾಮತ, ರಶ್ಮಿ ಮಿಥುನ್ ನಾಯಕ ಅವರು ಕೃತಿಯ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಕೃತಿಕಾರರಲ್ಲೊಬ್ಬರಾದ ಅರವಿಂದ ಕಾಮತ ಅವರು ಅಧ್ಯಕ್ಷೀಯ ವಂದನಾ ನುಡಿಗಳಲ್ಲಿ ಈ ಪುಸ್ತಕ, ನಮ್ಮ ಪೂರ್ವಜರ ತ್ಯಾಗಗಳಿಗೆ ಸಲ್ಲಿಸುವ ಕೃತಜ್ಞತೆ. ಅವರ ಬದುಕಿನ ಸೂಕ್ಷ್ಮ ಘಟನೆಗಳನ್ನು ಸಂಗ್ರಹಿಸುವುದು ನಮ್ಮ ಪೀಳಿಗೆಯ ಕರ್ತವ್ಯ, ಎಂದು ಹೇಳಿದರು. ಲಕ್ಷ್ಮೀನಾರಾಯಣ ಹೆಗಡೆಕರ 'ವಂದೇ ಮಾತರಂ' ಗೀತೆಯನ್ನು ಆಲಾಪಿಸಿದರು. ಶಿಕ್ಷಕ ಕಿರಣ ಪ್ರಭು ನಿರೂಪಿಸಿದರು. ಕಾರ್ಯಕ್ರಮದಲ್ಲಿ ಮಾಧೇ ಕಾಮತ ಕುಟುಂಬದ ಸದಸ್ಯರು, ಸ್ಥಳೀಯ ಗಣ್ಯರು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಪ್ರತಿನಿಧಿಗಳು ಗಣನೀಯ ಸಂಖ್ಯೆಯಲ್ಲಿ ಹಾಜರಿದ್ದರು. ತಮ್ಮ ಪೂರ್ವಜರ ಚಿತ್ರಗಳಿಗೆ ಪುಷ್ಪ ಸಲ್ಲಿಸುವ ಮೂಲಕ ಅವರು ಕಾರ್ಯಕ್ರಮಕ್ಕೆ ಭಾವಪೂರ್ಣತೆ ತುಂಬಿದರು. ಅಜ್ಞಾತ ಹೋರಾಟಗಾರರ ಸಾಹಸಗಳನ್ನು ಸಮಾಜಕ್ಕೆ ತಲುಪಿಸಲು ಮಾಧೇ ಕಾಮತ ಕುಟುಂಬ ಕೈಗೊಂಡ ಪ್ರಯತ್ನವನ್ನು ಎಲ್ಲರೂ ಮೆಚ್ಚಿದರು.

# ನ. 28ರಿಂದ ಶ್ರೀಧರ ಸ್ವಾಮಿಗಳ 117ನೇ ಜಯಂತಿ ಮಹೋತ್ಸವ

**● ತತ್ತ್ವನಿಷ್ಠ, ಶಿರಸಿ:** ಸದ್ಗುರು ಶ್ರೀಧರ ಮಹಾಸ್ವಾಮಿಗಳ 117ನೇ ಜಯಂತಿ ಮಹೋತ್ಸವವು ನ. 28ರಿಂದ ಡಿ. 5ರವರೆಗೆ ಸಾಗರ ತಾಲೂಕಿನ ಶ್ರೀ ಕ್ಷೇತ್ರ ವರದಪುರದಲ್ಲಿ ನಡೆಯಲಿದೆ.

ನಿತ್ಯದ ಕಾರ್ಯಕ್ರಮಗಳಾಗಿ ಶ್ರೀ ಸದ್ಗುರು ಸಮಾಧಿಗೆ ಫಲ-ಪಂಚಾಮೃತ ಸಹಿತ ಏಕದಶ ರುದ್ರ, ಪುರುಷ ಸೂಕ್ತ ಅಭಿಷೇಕ ಪೂರ್ವಕ ಕಲ್ಪೋಕ್ತ ಮಹಾಪೂಜೆ ನಡಯಲಿದೆ. ವೇದ, ಉಪನಿಷತ್, ಶ್ರೀ ಗುರುಚರಿತ್ರೆ, ಶ್ರೀ ಗುರುಗೀತಾ, ಭಗವದ್ಗೀತಾ, ಶ್ರೀ ದತ್ತಸ್ತವರಾಜ ಇವುಗಳ ಪಾರಾಯಣ, ಶ್ರೀ ದತ್ತಮಂತ್ರ, ಗುರುಮಂತ್ರಗಳ ಜಪಾನುಷ್ಠಾನ, ಪುರಾಣ-ಪ್ರವಚನ, ಭಜನೆ- ಕೀರ್ತನೆ ಮುಂತಾದವುಗಳು ನಡೆಯಲಿವೆ.



ವಿಶೇಷ ಕಾರ್ಯಕ್ರಮಗಳಾಗಿ ನ. 28 ಶುಕ್ರವಾರ ಶ್ರೀ ಗುರುಗಣಪತಿ ಪೂಜನ, ಪುಣ್ಯಾಹ, ಪಂಚಗವ್ಯ ಪ್ರಾಯಶ್ಚಿತ ಪೂರ್ವಕ ಋತ್ವಿಗ್ವರಣ, ಶ್ರೀ ಗಣಪತಿ ಉಪನಿಷತ್ ಹವನ ನಡೆಯಲಿದೆ.

ನ. 29 ಶನಿವಾರ ಶ್ರೀ ಅತಿವಿಷ್ಣು ಮಹಾಯಾಗ ನಡೆಯಲಿದೆ. ನ. 30 ಭಾನುವಾರ ಸರ್ಪಸೂಕ್ತಹವನ ನಡೆಯಲಿದೆ. ಡಿ. 1 ಸೋಮವಾರ. ಶ್ರೀ ಗೀತಾ ಜಯಂತಿ ನಿಮಿತ್ತ ಸಾಮೂಹಿಕ ಭಗವದ್ಗೀತಾ ಪಠಣ, ಪ್ರವಚನ ನಡೆಯಲಿದೆ. ಡಿ. 2 ಮಂಗಳವಾರ ಸರಸ್ವತಿ ಸೂಕ್ತ ಹವನ, ಸಂಜೆ ಪಲ್ಲಕ್ಕಿ ಉತ್ಸವ ಮತ್ತು ಅಷ್ಟಾವಧಾನ ಸೇವೆ ನಡೆಯಲಿದೆ.

ಡಿ. 3 ಬುಧವಾರ ಶ್ರೀ ಮಹಾಲಕ್ಷ್ಮಿ ಹವನ ಸಂಜೆ ಪಲ್ಲಕ್ಕಿ ಉತ್ಸವ, ಅಷ್ಟಾವಧಾನ ಸೇವೆ ನಡೆಯಲಿದೆ. ಡಿ. 4 ಗುರುವಾರ ಶ್ರೀ ದತ್ತಮಂತ್ರ ಮತ್ತು ಶ್ರೀ ಗುರುಮಂತ್ರಗಳಿಂದ ಹವನ, ಶ್ರೀ ಸತ್ಯ ದತ್ತ ವ್ರತಪೂಜೆ, ಶ್ರೀ ಸದ್ಗುರು ಸಮಾಧಿಗೆ ಶತರುದ್ರಾಭಿಷೇಕ, ಸಹಸ್ರ ತುಳಸಿ ಅರ್ಚನಾಪೂರ್ವಕ ಕಲ್ಪೋಕ್ತ ಮಹಾಪೂಜೆ, ಸದ್ಗುರು ಭಗವಾನ ಶ್ರೀ ಶ್ರೀಧರ ಸ್ವಾಮಿಗಳ ಜನ್ಮೋತ್ಸವ, ಪಲ್ಲಕ್ಕಿ ಉತ್ಸವ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ ನಡೆಯಲಿವೆ.

ಡಿ. 5 ಶುಕ್ರವಾರ ಶ್ರೀ ದತ್ತಮಂತ್ರ, ಗುರುಮಂತ್ರ ಹವನಗಳ ಪೂರ್ಣಾಹುತಿ, ಮಹಾಮಂಗಳಾರತಿ, ಮಂತ್ರಾಕ್ಷತಾ ವಿನಿಯೋಗ ನಡೆಯಲಿದೆ. ಭಕ್ತರು ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತನು, ಮನ, ಧನಗಳಿಂದ ಸಹಕರಿಸಬೇಕೆಂದು ಪ್ರಕಟಣೆಯಲ್ಲಿ ಕೋರಲಾಗಿದೆ.

ಶ್ರೀಧರ ಸ್ವಾಮಿಗಳ ಜಯಂತಿ ಆಚರಣೆಯು ಬೆಂಗಳೂರಿನ ಪಾದುಕಾಮಂದಿರ ವಸಂತಪುರ, ಶ್ರೀಧರರ ಜನ್ಮಸ್ಥಳ ಲಾಡಚಿಂಚೋಳಿ, ಮಾಗಡಿ ತಾಲೂಕಿನ ಮರಲಗೊಂಡಲ ಗ್ರಾಮದ ಶ್ರೀ ದತ್ತಾತ್ರೇಯ ದೇವಸ್ಥಾನ ಶ್ರೀಧರ ಆಶ್ರಮ ಪುಣೆ, ವಾರಣಾಸಿಯ ಶ್ರೀಧರ ಸ್ಫೂರ್ತಿ ನಿವಾಸ ಶ್ರೀ ದತ್ತ ಈ ಸ್ಥಳಗಳಲ್ಲೂ ಶ್ರೀಧರರ ಜಯಂತಿ ಉತ್ಸವಗಳು ನಡೆಯಲಿವೆ ಎಂದು ತಿಳಿಸಲಾಗಿದೆ.

# ಕೊಳಗಿಬೀಸ್ ಕಾರ್ತಿಕ ದೀಪೋತ್ಸವ



**● ತತ್ತ್ವನಿಷ್ಠ, ಶಿರಸಿ:** ತಾಲೂಕಿನ ಕೊಳಗಿಬೀಸ್‌ನ ಶ್ರೀ ಕ್ಷೇತ್ರ ಮಾರುತಿ ದೇವಾಲಯದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಪ್ರತಿದಿನ ಭಜನೆ, ಭಕ್ತಿಗೀತೆ, ದೀಪೋತ್ಸವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಇದು ಭಕ್ತರ ಸಮೂಹಾರಾಧನೆಗೆ ವೇದಿಕೆಯಾಗಿದೆ. ಶ್ರೀ ಸಹಜಾನಂದ ಸ್ವಾಮಿ ಅವದೂತರ ಸಮಯದಿಂದಲೇ ಈ ಕ್ಷೇತ್ರವು ಪವಿತ್ರತೆಯ ಪ್ರತೀಕವಾಗಿ ಹೆಸರಾಗಿದ್ದು, ಆ ಕಾಲದಲ್ಲಿ ಶ್ರೀಧರ ಸ್ವಾಮಿಗಳು ಇಲ್ಲಿಗೆ ಆಗಮಿಸಿ ಧಾರ್ಮಿಕ ಚಿಂತನೆಗಳನ್ನು ಹಂಚಿಕೊಳ್ಳುತ್ತಿದ್ದ ಹಿನ್ನೆಲೆ ಈ ದೇವಾಲಯಕ್ಕೆ ವಿಶಿಷ್ಟ ಮೌಲ್ಯವನ್ನು ಕೊಟ್ಟಿದೆ.

ಕಾರ್ತಿಕ ಶನಿವಾರ ಹಾಗೂ ಏಕಾದಶಿಯ ದಿನ ಸಾವಿರಾರು ದೀಪಗಳನ್ನು ಬೆಳಗಿದ ಭಕ್ತರು ಕ್ಷೇಮ-ಶಾಂತಿ ಕೋರಿ ಪ್ರಾರ್ಥಿಸಿದರು. ಸ್ಥಳೀಯ ಯುವಕರು ಡೋಲು ಬಡಿದು, ಕುಣಿದು ಸಂಭ್ರಮವನ್ನು ಹೆಚ್ಚಿಸಿದರು. ಸುಮಾರು ನಾಲ್ಕು ಗಂಟೆಗಳ ಕಾಲ ನಡೆದ ಭಜನೆ, ಭಕ್ತಿಗೀತೆಗಳು ಭಕ್ತರ ಮನಸ್ಸನ್ನು ಭಕ್ತಿರಸದಲ್ಲಿ ಮುಳುಗಿಸಿದವು.

ಈ ಸಂದರ್ಭದಲ್ಲಿ ಮಹಾಪೂಜೆ ನೆರವೇರಿಸಲಾಯಿತು ಮತ್ತು ಭಕ್ತರಿಗೆ ಪ್ರಸಾದ ವಿತರಣೆಯೂ ನಡೆಯಿತು. ಭಕ್ತರ ಅಪಾರ ಸಂಖ್ಯೆಯ ಭಾಗವಹಿಸುವಿಕೆಯಿಂದ ಕೊಳಗಿಬೀಸ್ ಮಾರುತಿ ದೇವಾಲಯದಲ್ಲಿ ಕಾರ್ತಿಕ ಮಾಸವು ಭಕ್ತಿ, ನಂಬಿಕೆ ಮತ್ತು ಸಂಪ್ರದಾಯಗಳ ಸಂಭ್ರಮವಾಗಿ ಮೂಡಿಬಂದಿದೆ.

### ಮಾಣಿಕಟ್ಟಾಗೆ ಅಧಿಕಾರಿಗಳು, ವಿಜ್ಞಾನಿಗಳ ಭೇಟಿ

# ಕಗ್ಗ ಭತ್ತದ ತಳಿಗೆ ಜಿಐ ಟ್ಯಾಗ್ ನೀಡುವ ಕುರಿತು ರೈತರೊಂದಿಗೆ ತಜ್ಞರ ಚರ್ಚೆ

**● ತತ್ತ್ವನಿಷ್ಠ, ಕುಮಟಾ:** ತಾಲೂಕಿನ ಮಾಣಿಕಟ್ಟ ಕಗ್ಗ ಭತ್ತ ರೈತರ ಒಕ್ಕೂಟಕ್ಕೆ ಭೇಟಿ ನೀಡಿದ ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ವಿಜ್ಞಾನಿಗಳ ತಂಡವು ಅಪರೂಪದ ಕಗ್ಗ ಭತ್ತದ ತಳಿಗೆ ಜಿಐ ಟ್ಯಾಗ್ ನೀಡುವ ಸಂಬಂಧ ರೈತರೊಂದಿಗೆ ಚರ್ಚಿಸಿ ಕೆಲ ಸಲಹೆ ಸೂಚನೆಗಳನ್ನು ನೀಡಿದರು.



ಮಾಣಿಕಟ್ಟ ಪ್ರದೇಶದಲ್ಲಿ ಮಾತ್ರ ನೂರಾರು ಎಕರೆಯಲ್ಲಿ ಸಾಮೂಹಿಕ ಬೇಸಾಯ ಮಾಡುವ ಪದ್ಧತಿ ಇಂದಿಗೂ ಜಾರಿಯಲ್ಲಿದೆ. ಅದರಲ್ಲೂ ಅಪರೂಪದ ಕಗ್ಗ ಭತ್ತದ ತಳಿಯನ್ನು ಸಂರಕ್ಷಿಸಿಕೊಂಡು ನೂರಾರು ವರ್ಷಗಳಿಂದ ಕಗ್ಗ ಭತ್ತವನ್ನು ಬೆಳೆಯುತ್ತ ಬರಲಾಗಿದೆ. ಈ ಸಾಮೂಹಿಕ ಬೇಸಾಯ ಪದ್ಧತಿ ಇಡೀ ಉತ್ತರಕನ್ನಡ ಜಿಲ್ಲೆಯಲ್ಲಿ ಕುಮಟಾದ ಮಾಣಿಕಟ್ಟಾದಲ್ಲಿ ಮಾತ್ರ ಕಾಣಸಿಗುತ್ತದೆ. ಈ ಸಾಮೂಹಿಕ ಬೇಸಾಯ ಪದ್ಧತಿಯ ಮೂಲಕವೇ ಅಪರೂಪದ ಕಗ್ಗ ಭತ್ತವನ್ನು ಬೆಳೆಯುತ್ತಿರುವ ರೈತರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ನೀಡಲು ಕಗ್ಗ ಭತ್ತದ ತಳಿಗೆ ಜಿಐ ಟ್ಯಾಗ್ ನೀಡುವ ಸಂಬಂಧ ಕೆಲ ಪ್ರಗತಿಪರ ರೈತರು ಪ್ರಯತ್ನ ನಡೆಸಿದ್ದಾರೆ. ಅದರ ಭಾಗವಾಗಿಯೇ ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಕೃಷಿ ವಿಜ್ಞಾನಿಗಳು ಮಾಣಿಕಟ್ಟಾಕ್ಕೆ ಭೇಟಿ ನೀಡಿ ಕಗ್ಗ ಭತ್ತ ತಳಿಯನ್ನು ಪರಿಶೀಲಿಸಿ, ಅಲ್ಲಿನ ರೈತರೊಂದಿಗೆ ಚರ್ಚೆ ನಡೆಸಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ನಾಗರಾಜ ನಾಯಕ ಕಾರವಾರ, ಶಿರಸಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶಿವಪ್ರಸಾದ, ಬೆಂಗಳೂರು ರಾಮಯ್ಯ ಇಂಟೆಲೆಕ್ಚ್ಯುವಲ್ ಸೆಂಟರ್ ಫಾರ್ ಪ್ರಾಪರ್ಟಿ ರೈಟ್ಸ್‌ನ ಸಂಯೋಜಕಿ ಸಂಗೀತಾ ಮುರಳಿ, ಕೃಷಿ ವಿಜ್ಞಾನ ಕೇಂದ್ರ ಶಿರಸಿಯ ಮುಖ್ಯಸ್ಥೆ ಡಾ. ರೂಪಾ ಪಾಟೀಲ್, ಶಿರಸಿಯ ಕೃಷಿ ಉಪ ನಿರ್ದೇಶಕ ಪಾಂಡು ಕೆ.ಎಚ್., ಕುಮಟಾದ ಸಹಾಯಕ ಕೃಷಿ ನಿರ್ದೇಶಕ ವಿ. ವೆಂಕಟೇಶಮೂರ್ತಿ ಅವರ ತಂಡ ರೈತರೊಂದಿಗೆ ಚರ್ಚೆ ನಡೆಸಿ, ಕಗ್ಗ ಭತ್ತಕ್ಕೆ ಜಿಐ ಟ್ಯಾಗ್ ಪಡೆಯಲು ಅಗತ್ಯವಾದ ಕ್ರಮಗಳ ಬಗ್ಗೆ ಕೆಲ ಸಲಹೆ ಸೂಚನೆಗಳನ್ನು ನೀಡಿದರು.

ನೋಂದಣಿ ಹೊಂದಿದ ರೈತರ ಸಮಿತಿಯನ್ನು ರಚಿಸಬೇಕು ಎಂಬ ಅಧಿಕಾರಿಗಳ ಸಲಹೆಯಂತೆ ಸದ್ಯ 19 ಸದಸ್ಯರನ್ನೊಳಗೊಂಡ ಮಾಣಿಕಟ್ಟ ಕಗ್ಗ ಭತ್ತ ರೈತರ ಉತ್ಪಾದಕ ಒಕ್ಕೂಟವನ್ನು ರಚಿಸಿಕೊಂಡು ಪದಾಧಿಕಾರಿಗಳನ್ನು ಆಯ್ಕೆ ಮಾಡಿಕೊಂಡು ನೋಂದಾಯಿಸುವ ಪ್ರಕ್ರಿಯೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಮಾಣಿಕಟ್ಟ ರೈತರ ಪ್ರಮುಖ ಮಂಜುನಾಥ ಜಿ. ಪಟಗಾರ ತಿಳಿಸಿದ್ದಾರೆ.

ಕಗ್ಗ ಭತ್ತ ರೈತರ ಉತ್ಪಾದಕ ಒಕ್ಕೂಟದ ಗೌರವಾಧ್ಯಕ್ಷ ಶ್ರೀಧರ ಎಂ. ಪೈ, ಅಧ್ಯಕ್ಷ ಜಗನ್ನಾಥ ನಾಯ್ಕ, ಕಾರ್ಯದರ್ಶಿ ಮಂಜುನಾಥ ಜಿ. ಪಟಗಾರ, ಉಪಾಧ್ಯಕ್ಷ ವಿನಾಯಕ ಗೌಡ, ಖಜಾಂಚಿ ವಾಸು ಪಟಗಾರ, ರೈತರು ಇದ್ದರು

## ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕ ಡಿ.ಎಂ. ಕಾಮತ ನಿಧನ

**● ತತ್ತ್ವನಿಷ್ಠ, ಕುಮಟಾ:** ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಣ ತಜ್ಞ, ನಿವೃತ್ತ ಮುಖ್ಯ ಶಿಕ್ಷಕ ಡಿ.ಎಂ. ಕಾಮತ್ (79) ಶನಿವಾರ ರಾತ್ರಿ ನಿಧನರಾದರು. ಶುಕ್ರವಾರ ನಡೆದ ಗುಪ್ತಗಾಮೀ ರಾಷ್ಟ್ರಪ್ರೇಮಿ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಪಾಲ್ಗೊಂಡ ಅವರು ಮನೆಗೆ ತೆರಳಿದಾಗ ಹೃದಯಾಘಾತಕ್ಕೊಳಗಾದರು.



ಹಲವು ದಶಕಗಳ ಕಾಲ ಶಿಕ್ಷಕ ವೃತ್ತಿ ಮೂಲಕ ಸೇವೆ ಸಲ್ಲಿಸಿದ್ದರು. ಪ್ರಸ್ತುತ ಕೆನರಾ ಕಾಲೇಜು ಸೊಸೈಟಿಯ ಉಪಾಧ್ಯಕ್ಷರಾಗಿದ್ದರು. ಹೆಗಡೆ ಶಾಂತಿಕಾಂಬಾ ಪ್ರೌಢಶಾಲೆಯ ಉನ್ನತಿಗಾಗಿ ಶ್ರಮಿಸಿದ್ದರು. ಗಿಬ್ ಹೈಸ್ಕೂಲಿನ ಶತಮಾನೋತ್ಸವ ಸಮಿತಿಯಲ್ಲಿ ಸಕ್ರಿಯರಾಗಿದ್ದರು. ಸರಳ ಜೀವನ-ಉನ್ನತ ಚಿಂತನೆ, ಶಿಸ್ತಿನ ಅಧ್ಯಾಪನ ಹಾಗೂ ಮೌಲ್ಯಾಧಾರಿತ ಶಿಕ್ಷಣ ಎನ್ನುವುದೇ ಅವರ ಗುರುತಾಗಿತ್ತು. ಅನೇಕ ಶಾಲೆಗಳ ಅಭಿವೃದ್ಧಿಯಲ್ಲಿ ಅವರ ಮಾರ್ಗದರ್ಶನ ಪ್ರಮುಖವಾಗಿತ್ತು. ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣದಲ್ಲಿ ಅವರ ಪಾತ್ರ ಅಪ್ರತಿಮವಾಗಿತ್ತು. ಕೇಂದ್ರ ಸರ್ಕಾರದಿಂದ ಉತ್ತಮ ಶಿಕ್ಷಕರ ಪ್ರಶಸ್ತಿ ಪಡೆದ ಅವರು, ಶಿಕ್ಷಕ ವೃಂದದಲ್ಲಿ ನಿಸ್ವಾರ್ಥ ಸೇವೆ, ನಿಖರ ಕೆಲಸ ಮತ್ತು ಮೃದು ಸ್ವಭಾವದಿಂದ ಎಲ್ಲರ ಮನಗೆದ್ದಿದ್ದರು. ನಿವೃತ್ತಿಯಲ್ಲಿಯೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಅವರು, ವಿದ್ಯಾರ್ಥಿ-ಪೋಷಕರಿಗೆ ಸಲಹೆ ಹಾಗೂ ಮಾರ್ಗದರ್ಶನ ನೀಡುವುದನ್ನು ಮುಂದುವರಿಸಿದ್ದರು. 'ಸ್ಥಳೀಯ ಶಿಕ್ಷಕರು, ಹಳೆಯ ವಿದ್ಯಾರ್ಥಿಗಳು, ಪೋಷಕರು ಮತ್ತು ಸಾರ್ವಜನಿಕರು ಆಳವಾದ ದುಃಖ ವ್ಯಕ್ತಪಡಿಸಿ, ಅವರ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ.

Owned and Published by PRAVEEN BALACHANDRA HEGDE, 28 KARJAGI BALESAR, UTTARA KANNADA, KARNATAKA - 581340. Printer: PLOT NO. 15 & 16, KIADB RAYAPUR INDUSTRIAL AREA, DHARWAD, KARNATAKA - 580009. Printed at and by METROPOLITAN MEDIA COMPANY LIMITED PLOT NO. 15 & 16, KIADB RAYAPUR INDUSTRIAL AREA, DHARWAD, KARNATAKA - 580009. Published at: Tatvanishta, Behind Hotel Mdhuvana, Yellapur Road, Sirsi-581 401 Editor: PRAVEEN HEGDE , Executive Editor: Mahesh Hegde All rights reserved. Reproduction in whole or in part without written permission is prohibited.